

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 1 ಭಾನುವಾರ 2023

ಸಂಪುಟ: 44 | ಸಂಚಿಕೆ: 166 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದಿನಿಂದ ಆಸ್ತಿಗಳ ಮಾರ್ಗಸೂಚಿ ದರ ಶೇ.30ರಿಂದ 50ರಷ್ಟು ಹೆಚ್ಚಳ


●ಹಳೇ ದರದಡಿ ಆಸ್ತಿ ನೋಂದಣಿಗೆ ನೂಕು ನುಗ್ಗಲು; ●ಮೈಸೂರು ಜಿಲ್ಲೆಯಲ್ಲಿ ಕೇವಲ 8 ದಿನದಲ್ಲಿ 6.10 ಕೋಟಿ ಸ್ಟ್ಯಾಂಪ್ ಡ್ಯೂಟಿ ಸಂಗ್ರಹ

ಮೈಸೂರು, ಸೆ. 30(ಆರ್‌ಕೆ)– ಆಸ್ತಿಗಳ ಮಾರ್ಗಸೂಚಿ ಮೌಲ್ಯ (Propertys Guidance Value)ವನ್ನು ಸರ್ಕಾರ ಪರಿಷ್ಕರಿಸಿದ್ದು, ಅದರಂತೆ ಪರಿಷ್ಕೃತ ದರಗಳು ರಾಜ್ಯಾದ್ಯಂತ ನಾಳೆ (ಅ. 1)ಯಿಂದ ಜಾರಿಗೆ ಬರುತ್ತಿದೆ. ರಾಜ್ಯದ ಒಟ್ಟಾರೆ 256 ಉಪ ನೋಂದಣಾಧಿಕಾರಿಗಳಲ್ಲಿ ಹೊಸ ಆಸ್ತಿ ಮಾರ್ಗಸೂಚಿ ದರದನ್ವಯ ನೋಂದಣಿ ಪ್ರಕ್ರಿಯೆ ನಡೆಯಲಿದೆ.

ಆಸ್ತಿಗಳ ಮಾರ್ಗಸೂಚಿ ಮೌಲ್ಯ ಶೇ. 30ರಿಂದ 50ರಷ್ಟು ಹೆಚ್ಚಿಗೆ ಆಗುತ್ತಿರುವುದರಿಂದ ಅಕ್ಟೋಬರ್ 1ರ ನಂತರ ಆಸ್ತಿಗಳ ನೋಂದಣಿ ವೇಳೆ ಖರೀದಿದಾರರು ಪರಿಷ್ಕೃತ ದರದಂತೆ ಸ್ಟ್ಯಾಂಪ್ ಡ್ಯೂಟಿ ಹಾಗೂ ನೋಂದಣಿ ಶುಲ್ಕ ಪಾವತಿಸಬೇಕಾಗಿದೆ. ಆಸ್ತಿಗಳ ಮೌಲ್ಯ ಹೆಚ್ಚಾದಂತೆ ಸಹಜವಾಗಿ ಖರೀದಿಸುವವರು ಶೇ. 30ರಿಂದ 50 ರವರೆಗೆ ಹೆಚ್ಚುವರಿ ಶುಲ್ಕ ಭರಿಸಬೇಕಾಗುತ್ತದೆ. ನಾಳೆಯಿಂದ ಪರಿಷ್ಕೃತ ಆಸ್ತಿ ಮೌಲ್ಯ ಜಾರಿಗೆ ಬರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಶುಲ್ಕ ಪಾವತಿಸುವುದರಿಂದ ಪಾರಾಗಲು ಕಳೆದ ಒಂದು ವಾರದಿಂದ ಜನರು ಆಸ್ತಿ ನೋಂದಣಿಗಾಗಿ ಉಪನೋಂದಣಾಧಿಕಾರಿ ಕಚೇರಿಗಳಿಗೆ ಮುಗಿ ಬೀಳುತ್ತಿದ್ದುದು ಕಂಡುಬಂದಿತು.

ಈ ಹಿನ್ನೆಲೆಯಲ್ಲಿ ಸರ್ಕಾರವು ಸೆಪ್ಟೆಂಬರ್ 22ರಿಂದ 30ರವರೆಗೆ ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳ ಕಚೇರಿಗಳು ಬೆಳಗ್ಗೆ 8ರಿಂದ

▶ 9ನೇ ಪುಟಕ್ಕೆ




ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಉತ್ತರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ನೋಂದಣಿಗಾಗಿ ಶನಿವಾರ ಜಮಾಯಿಸಿದ್ದ ಜನ.

ಸರಗೂರು ಬಳಿ ಮೂವರು ಜಲಸಮಾಧಿ

ಕಾಲು ಜಾರಿದ ಮಗಳನ್ನು ರಕ್ಷಿಸಲು ಹೋದ ತಂದೆ–ತಾಯಿ ಸೇರಿ ಮೂವರೂ ನೀರು ಪಾಲು

ಸರಗೂರು, ಸೆ.30– ಆಕಸ್ಮಿಕವಾಗಿ ಕಾಲು ಜಾರಿಬಿದ್ದು, ನಾಲೆಯಲ್ಲಿ ಮುಳುಗುತ್ತಿದ್ದ ಪುತ್ರಿಯನ್ನು ರಕ್ಷಿಸಲು ಹೋದ ತಂದೆ–ತಾಯಿಯೂ ಸೇರಿ ಒಟ್ಟಾರೆ ಮೂವರೂ ನಾಲೆಯಲ್ಲಿ ಮುಳುಗಿ ದುರಂತ ಸಾವಿಗೀಡಾದ ಘಟನೆ ತಾಲೂಕಿನ ಚಂಗೋಡನಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ಶಾಹೀರಾ ಭಾನು(18), ಶಾವರ ಭಾನು(35) ಮಹಮ್ಮದ್ ಕಪೀಲ್(42) ಮೃತ ದುರ್ದೈವಿಗಳು. ಇವರು ಸರಗೂರಿನಲ್ಲಿ ಇತ್ತೀಚೆಗೆ ನಿಧನರಾಗಿದ್ದ ತಮ್ಮ ಅಜ್ಜಿಯ ಅಂತಿಮ ವಿಧಿ–ವಿಧಾನ ಮುಗಿಸಿ, ನಾಲೆಯಲ್ಲಿ ಕೈ ಕಾಲು ತೊಳೆಯಲು ಹೋಗಿದ್ದಾರೆ. ಈ ವೇಳೆ ಕಾಲು ಜಾರಿ ನೀರಿಗೆ ಬೀಳುತ್ತಿದ್ದ ಮಗಳನ್ನು ರಕ್ಷಿಸಲು ಮೊದಲು ತಾಯಿ ಶಾವರ ಭಾನು ಮುಂದಾಗಿ ನೀರಿನಲ್ಲಿ ಮುಳುಗಿದ್ದಾರೆ. ನಂತರ ಮಹಮ್ಮದ್ ಕಪೀಲ್ ಇವರಿಬ್ಬರ ನೆರವಿಗೆ ಹೋಗಿ ತಾವೂ ಜಲಸಮಾಧಿಯಾಗಿದ್ದಾರೆ. ಮೃತರೆಲ್ಲರೂ

▶ 9ನೇ ಪುಟಕ್ಕೆ

ಮುಂಗಾರು ವೈಫಲ್ಯದಿಂದ ಆಹಾರಧಾನ್ಯ ಕೊರತೆ ಇಲ್ಲ

■ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಸ್ಪಷ್ಟನೆ
■ಅಗತ್ಯ ಬಿದ್ದರೆ ಹೊರ ರಾಜ್ಯ, ಕೇಂದ್ರದಿಂದ ಖರೀದಿ
■ಅಕ್ಟೋಬರ್ ಇಲ್ಲವೇ ನವಂಬರ್‌ನಲ್ಲಿ 10 ಕೆಜಿ ಅಕ್ಕಿ ವಿತರಣೆ



ಬೆಂಗಳೂರು, ಸೆ.30 (ಕೆಎಂಶಿ)– ಮುಂಗಾರು ಮಳೆ ವೈಫಲ್ಯದಿಂದ ಆಹಾರ ಧಾನ್ಯಗಳ ಉತ್ಪಾದನೆ ಕುಸಿದರೂ ಜನರಿಗೆ ಯಾವ ಅಭಾವವೂ ಉಂಟಾಗುವುದಿಲ್ಲ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 195 ತಾಲೂಕುಗಳು ಬರಕ್ಕೆ ತುತ್ತಾಗಿವೆ. ಇಷ್ಟಾದರೂ ಜನರಿಗೆ ಆಹಾರಧಾನ್ಯ ಕೊರತೆ ಉಂಟಾಗದಂತೆ ಸರ್ಕಾರ ನೋಡಿಕೊಳ್ಳಲು ಬದ್ಧವಾಗಿದೆ.

ಜಲಾನಯನ ಪ್ರದೇಶದಡಿಯಲ್ಲಿ ಆಹಾರ ಧಾನ್ಯ ಉತ್ಪಾದನೆಯಲ್ಲಿ ಕಡಿಮೆ ಆಗುವುದಿಲ್ಲ. ಜೊತೆಗೆ ಬೋರ್‌ವೆಲ್ ನೀರಾವರಿಯಿಂದ ಎಂದಿನಂತೆ ಆಹಾರ ಧಾನ್ಯಗಳನ್ನು ರೈತರು ಬೆಳೆಯುತ್ತಾರೆ.

ಕಳೆದ ಮೂರು ವರ್ಷಗಳಿಂದ ರಾಜ್ಯ ಆಹಾರ ಉತ್ಪಾದನೆಯಲ್ಲಿ ದಾಪುಗಾಲು ಇಟ್ಟಿತ್ತು. ಹೆಚ್ಚುವರಿ ಉತ್ಪಾದನೆಯನ್ನು ನಾವು ಬೇರೆ ರಾಜ್ಯಗಳಿಗೆ ಹಾಗೂ ವಿದೇಶಗಳಿಗೆ ರಫ್ತು ಮಾಡುತ್ತಿದ್ದೆವು. ಆದರೆ, ಈ ಬಾರಿ ಉತ್ಪಾದನೆಯಲ್ಲಿ ಕುಂಠಿತವಾಗುವುದರಿಂದ ಹೊರ ರಾಜ್ಯಗಳಿಗೆ ಮಾರಾಟ ಮಾಡುವುದು ಸ್ಥಗಿತವಾಗಲಿದೆ.

ಅಗತ್ಯಬಿದ್ದರೆ ಹೆಚ್ಚುವರಿ ಧಾನ್ಯವನ್ನು ಕೇಂದ್ರ ಹಾಗೂ ಹೊರರಾಜ್ಯಗಳಿಂದ ಖರೀದಿಸುತ್ತೇವೆ. ಆದರೆ, ಅಂತಹ ಪರಿಸ್ಥಿತಿ ಎದುರಾಗುವ ಸಾಧ್ಯತೆಗಳಿಲ್ಲ ಎಂದು ಅವರು ಹೇಳಿದರು. ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿಯನ್ನು ಅಕ್ಟೋಬರ್ ಇಲ್ಲವೇ ನವೆಂಬರ್ ತಿಂಗಳಿನಿಂದಲೇ ಫಲಾನುಭವಿಗಳಿಗೆ ನೀಡಬೇಕು ಎಂಬ ಪ್ರಯತ್ನ ಮುಂದುವರೆದಿದೆ.

ನಮಗೆ ಅಗತ್ಯವಾಗಿರುವ ಅಕ್ಕಿ ಖರೀದಿಗೆ ತೆಲಂಗಾಣ ಮತ್ತು ಆಂಧ್ರ ಸರ್ಕಾರಗಳ ಜೊತೆ ಮಾತುಕತೆ ನಡೆದಿದೆ ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ನಿಜಲಿಂಗಪ್ಪ, ಜೆ.ಹೆಚ್.ಪಟೇಲ್ ಕಾಲದಲ್ಲಿ ಲಿಂಗಾಯತ ಸಮುದಾಯ ಚೆನ್ನಾಗಿತ್ತು...

ಲಿಂಗಾಯತರೇ 7 ಮಂದಿ ಸಚಿವರಿಲ್ವಾ: ಶಾಮನೂರು ಶಿವಶಂಕರಪ್ಪಗೆ ಸಿಎಂ ಸಿದ್ದರಾಮಯ್ಯ ತಿರುಗೇಟು

ಬೆಂಗಳೂರು, ಸೆ.30–ರಾಜ್ಯ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳಿಗೆ ಸೂಕ್ತ ಸ್ಥಾನಮಾನ ಸಿಗುತ್ತಿಲ್ಲ. ನಿಜಲಿಂಗಪ್ಪ, ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ನಮ್ಮ ಸಮುದಾಯ ಚೆನ್ನಾಗಿತ್ತು ಎಂಬ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಆರೋಪವನ್ನು ಸ್ಪಷ್ಟವಾಗಿ ತಳ್ಳಿಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸರ್ಕಾರದಲ್ಲಿ ಲಿಂಗಾಯತರೇ 7 ಮಂದಿ ಸಚಿವರಿಲ್ವಾ ಎಂದು ಪ್ರಶ್ನಿಸಿದ್ದಾರೆ.

ಶನಿವಾರ ನಗರದಲ್ಲಿ ಶಾಮನೂರು ಶಿವ ಶಂಕರಪ್ಪ ಅವರ ಹೇಳಿಕೆ ಕುರಿತು ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ನಮ್ಮ ಸರ್ಕಾರ ಯಾವ ಸಮುದಾಯಕ್ಕೂ ಅನ್ಯಾಯ ಮಾಡಿಲ್ಲ. ನನ್ನ ಬಳಿ ಅಂಕಿ–ಅಂಶಗಳಿವೆ ಎಂದು ಹೇಳಿದ್ದಾರೆ. ಇನ್ನು ಈ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಹ ಪ್ರತಿಕ್ರಿಯೆ ನೀಡಿದ್ದು, ಶಾಮನೂರು ಶಿವಶಂಕರಪ್ಪ ಅವರು ಏಕೆ ಹೀಗೆ ಹೇಳಿದ್ದಾರೆ ಎನ್ನುವ ಕುರಿತು ಅವರ ಬಳಿ ಚರ್ಚೆ ಮಾಡುತ್ತೇನೆ. ಅವರ ಹೇಳಿಕೆ ಬಗ್ಗೆ ನನಗೆ ತಿಳಿದಿಲ್ಲ, ತಿಳಿದುಕೊಂಡು ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಲಿಂಗಾಯತ ಸಮುದಾಯಕ್ಕೆ ಪ್ರಮುಖ ಹುದ್ದೆಗಳಿಗೆ ಪರಿಗಣಿಸುತ್ತಿಲ್ಲ, ದಿವಂಗತ ನಿಜಲಿಂಗಪ್ಪ ಮತ್ತು ಜೆ.ಎಚ್.ಪಟೇಲ್ ಅವರ ಅಧಿಕಾರ ಅವಧಿಯಲ್ಲಿ ಸಮುದಾಯ ಉತ್ತಮವಾಗಿತ್ತು. ಈಗ ನಮ್ಮ ಸಮುದಾಯ ಕಂಗೆಟ್ಟಿದೆ ಎಂದು ಸಿದ್ದರಾಮಯ್ಯ ಅವರ ವಿರುದ್ಧ ಶಾಮನೂರು ಶಿವಶಂಕರಪ್ಪ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.





ನಿಜಲಿಂಗಪ್ಪ



ಜೆ.ಹೆಚ್.ಪಟೇಲ್



ಕಾವೇರಿ ನೀರು ನಿರ್ವಹಣಾ ಮಂಡಳಿ ಮುಂದೆ ಮರು ಪರಿಶೀಲನಾ ಅರ್ಜಿ ಸಲ್ಲಿಕೆ

ಬೆಂಗಳೂರು, ಸೆ.30(ಕೆಎಂಶಿ)– ಕಾವೇರಿ ನದಿ ನೀರು ಬಿಡುವ ಆದೇಶಕ್ಕೆ ಸಂಬಂಧಿಸಿದಂತೆ ಕಾವೇರಿ ನೀರು ನಿರ್ವಹಣಾ ಮಂಡಳಿ ಮುಂದೆ ಮರುಪರಿಶೀಲನಾ ಅರ್ಜಿಯನ್ನು ಇಂದು ಸಂಜೆ ಸಲ್ಲಿಸಲಾಗಿದೆ. ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಮೇಕೆದಾಟು ಯೋಜನೆಗೆ ಅನುಮತಿ ಕೊಡಬೇಕು. ಈ ಎರಡು ಬೇಡಿಕೆಗಳನ್ನು ಮರು ಪರಿಶೀಲನಾ ಅರ್ಜಿಯಲ್ಲಿ ಮಂಡಿಸಲಾಗಿದೆ. ಪರಿಸ್ಥಿತಿ ಅವಲೋಕಿಸಿ ಸರ್ವೋಚ್ಚ ನ್ಯಾಯಾಲಯದ ಮುಂದೆಯೂ ಮರು ಪರಿಶೀಲನಾ ಅರ್ಜಿಯನ್ನು

▶ 9ನೇ ಪುಟಕ್ಕೆ

ಹದಿನೈದು ವರ್ಷ ಮೇಲ್ಪಟ್ಟ ಸರ್ಕಾರಿ ವಾಹನಗಳು ಗುಜರಿಗೆ

ಶೀಘ್ರದಲ್ಲೇ ಆದೇಶ ಹೊರಡಿಸಲು ಸರ್ಕಾರ ನಿರ್ಧಾರ

- ಪರಿಸರ ಮಾಲಿನ್ಯ ತಡೆಗಟ್ಟಲು ಸರ್ಕಾರದಿಂದ ಈ ಕಟ್ಟುನಿಟ್ಟಿನ ಕ್ರಮ
- ರಾಜ್ಯದಲ್ಲಿ 15 ವರ್ಷ ಮೇಲ್ಪಟ್ಟ 15,296 ಸರ್ಕಾರಿ ವಾಹನಗಳಿವೆ
- ಮೊದಲ ಹಂತದಲ್ಲಿ 5 ಸಾವಿರ ವಾಹನ ಸ್ಕ್ರಾಪಿಂಗ್‌ಗೆ ನಿರ್ಧಾರ
- ಕೇಂದ್ರ ಸರ್ಕಾರದಿಂದ ಆರಂಭಿಕವಾಗಿ 100 ಕೋಟಿ ಪ್ರೋತ್ಸಾಹ ಧನ
- ಬೆಂಗಳೂರಿನ ದೇವನಹಳ್ಳಿ ಬಳಿ ಬೃಹತ್ ಸ್ಕ್ರಾಪಿಂಗ್ ಯಾರ್ಡ್ ಸ್ಥಾಪನೆ



> “ಕೆಎಸ್‌ಆರ್‌ಟಿಸಿ ಸೇರಿದಂತೆ 15 ವರ್ಷ ಮೇಲ್ಪಟ್ಟ ವಾಹನಗಳನ್ನು ಗುಜರಿಗೆ ಹಾಕುವಂತೆ ಸರ್ಕಾರ ಈಗಾಗಲೇ ಎಲ್ಲಾ ಇಲಾಖೆಗಳಿಗೆ ಆದೇಶ ನೀಡಿದೆ. ಪ್ರತಿಯೊಂದು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆಯಲು ಸಾರಿಗೆ ಇಲಾಖೆಗೆ ಬರಬೇಕು. ಒಂದು ವೇಳೆ ಸರ್ಕಾರದ ಈ ಆದೇಶವನ್ನು ಉಲ್ಲಂಘನೆ ಮಾಡಿ 15 ವರ್ಷ ಮೇಲ್ಪಟ್ಟ ಸರ್ಕಾರಿ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆಯಲು ಆರ್‌ಟಿಓಗೆ ತಂದರೆ ಸಾರಿಗೆ ಇಲಾಖೆ ಇದಕ್ಕೆ ಅನುಮೋದನೆ ನೀಡುವುದಿಲ್ಲ. ಹೀಗೆ ಎಫ್‌ಸಿ ಪಡೆಯದೆ ವಾಹನಗಳನ್ನು ಚಾಲನೆ ಮಾಡಿದರೆ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಲಿದೆ.
>
> –ದೇವಿಕಾ, ಮೈಸೂರು ಪ್ರಾದೇಶಿಕ ಸಾರಿಗೆ ಅಧಿಕಾರಿ

■ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.30– ಪರಿಸರ ಮಾಲಿನ್ಯ ತಡೆಗಟ್ಟುವ ಸಲುವಾಗಿ ಕೇಂದ್ರ ಸರ್ಕಾರದ ಸ್ಕ್ರಾಪಿಂಗ್ (ಗುಜರಿ) ನೀತಿಯನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಉದ್ದೇಶಿಸಿದೆ. ಈ ಮೂಲಕ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ 15 ವರ್ಷ ಮೇಲ್ಪಟ್ಟ ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕುವ ಕಾರ್ಯ ಆರಂಭಿಸಿದೆ.

ಹಳೆಯ ವಾಹನಗಳು ಹೊಸ ವಾಹನಗಳಿಗಿಂತ 10ರಿಂದ 12ಪಟ್ಟು ಹೆಚ್ಚು ಹೊಗೆ ಹೊರ ಹಾಕುತ್ತವೆ. ಇದರಿಂದ ಭಾರಿ ಪ್ರಮಾಣದಲ್ಲಿ ಪರಿಸರ ಮಾಲಿನ್ಯ ಉಂಟಾಗುತ್ತದೆ. ಜೊತೆಗೆ ಹಳೆಯ ವಾಹನಗಳಿಂದ ಅಪಘಾತಗಳು ಕೂಡ ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ವಿದೇಶಿ ಮಾದರಿಯಲ್ಲಿ ಸ್ಕ್ರಾಪಿಂಗ್ ನೀತಿಯನ್ನು ಜಾರಿಗೊಳಿಸಿದೆ. ಈ ನೀತಿಯ ಪ್ರಕಾರ 15 ವರ್ಷಕ್ಕಿಂತ ಮೇಲ್ಪಟ್ಟ ವಾಣಿಜ್ಯ ವಾಹನಗಳು ಹಾಗೂ 20 ವರ್ಷ ಮೇಲ್ಪಟ್ಟ ಪ್ರಯಾಣಿಕರ ವಾಹನಗಳನ್ನು ಸರ್ಕಾರವು ಹಂತ ಹಂತವಾಗಿ ಗುಜರಿಗೆ ಹಾಕಲು ಚಿಂತನೆ ನಡೆಸಿದೆ.

ಇದಕ್ಕೂ ಮೊದಲು 15 ವರ್ಷ ಮೇಲ್ಪಟ್ಟ ಸರ್ಕಾರಿ ವಾಹನಗಳನ್ನು ಸ್ಕ್ರಾಪಿಂಗ್ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಅದರಂತೆ ಕರ್ನಾಟಕದಲ್ಲಿರುವ 15,296 ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕುವ ಪ್ರಕ್ರಿಯೆ ಆರಂಭವಾಗಿದೆ. ಇದರ ಮೊದಲ ಹಂತವಾಗಿ 5 ಸಾವಿರ ವಾಹನಗಳನ್ನು ಸ್ಕ್ರಾಪಿಂಗ್ ಮಾಡಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಈ ಸಂಬಂಧ ರಾಜ್ಯದ ಎಲ್ಲಾ ಇಲಾಖೆ ಹಾಗೂ ನಿಗಮ ಮಂಡಳಿಗಳಿಗೆ ರಾಜ್ಯ ಸರ್ಕಾರ ಆದೇಶ ನೀಡಿದೆ. ವಾಹನಗಳನ್ನು ಸ್ಕ್ರಾಪಿಂಗ್ ಮಾಡಿದರೆ ರಾಜ್ಯ ಸರ್ಕಾರಕ್ಕೆ ನಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಆ ನಷ್ಟ ತುಂಬಿಕೊಡಲು ಆರಂಭಿಕವಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ 100 ಕೋಟಿ ರೂಪಾಯಿ ಪ್ರೋತ್ಸಾಹ ಧನ ನೀಡಲಿದೆ. ಅಮೇರಿಕಾ ಸೇರಿದಂತೆ ಇತರೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹಲವು ವರ್ಷಗಳ ಹಿಂದೆಯೇ ಸ್ಕ್ರಾಪಿಂಗ್ ನೀತಿ ಜಾರಿಯಾಗಿದೆ. ಆದರೆ ಭಾರತದಲ್ಲಿ ಬಹಳ ವಿಳಂಬವಾಗಿ ಈ ಯೋಜನೆ ಜಾರಿಗೊಳ್ಳುತ್ತಿದೆ.

ಭಾರತದಲ್ಲಿ 20 ವರ್ಷ ಮೇಲ್ಪಟ್ಟ 51 ಲಕ್ಷ ಲಘು ಮೋಟಾರು ವಾಹನ, 15 ವರ್ಷ ಮೇಲ್ಪಟ್ಟ 34 ಲಕ್ಷ ಹಾಗೂ

▶ 9ನೇ ಪುಟಕ್ಕೆ



ತೆಲಂಗಾಣ ಕಾಂಗ್ರೆಸ್‌ಗೆ ಹಣ ನೀಡಲು ಕರ್ನಾಟಕ ಸರ್ಕಾರದಿಂದ ಚುನಾವಣಾ ತೆರಿಗೆ: ಬಿಆರ್‌ಎಸ್



ಹೈದರಾಬಾದ್, ಸೆ.30– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬೆಂಗಳೂರಿನಲ್ಲಿ ಬಿಲ್ಡರ್‌ಗಳ ಮೇಲೆ ಚುನಾವಣಾ ತೆರಿಗೆ ವಿಧಿಸುತ್ತಿದೆ ಎಂದು ತೆಲಂಗಾಣ ಸಚಿವ ಮತ್ತು ಬಿಆರ್‌ಎಸ್ ನಾಯಕ ಕೆ.ಟಿ.ರಾಮರಾವ್ ಶನಿವಾರ ಆರೋಪ ಮಾಡಿದ್ದಾರೆ.

ಇದು ಸ್ಪಷ್ಟವಾಗಿ ಗೋಚರವಾಗುತ್ತಿದೆ, ಕರ್ನಾಟಕದ ಹೊಸದಾಗಿ ಚುನಾಯಿತ ಕಾಂಗ್ರೆಸ್ ಸರ್ಕಾರವು ತೆಲಂಗಾಣ ಕಾಂಗ್ರೆಸ್‌ಗೆ ಹಣ ನೀಡಲು ಬೆಂಗಳೂರಿನ ಬಿಲ್ಡರ್‌ಗಳಿಗೆ ಪ್ರತಿ ಚದರ ಅಡಿಗೆ 500 ರೂಪಾಯಿ ಚುನಾವಣಾ ತೆರಿಗೆಯನ್ನು ವಿಧಿಸಲು ಪ್ರಾರಂಭಿಸಿದೆ ಎಂದು ಬಿಆರ್‌ಎಸ್ ನಾಯಕ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹಳೆಯ ಅಭ್ಯಾಸಗಳು ಸತ್ತುಹೋಗುವುದು ಕಷ್ಟ, ಗ್ರ್ಯಾಂಡ್ ಓಲ್ಡ್ ಪಾರ್ಟಿ ಹಗರಣಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಅದಕ್ಕಾಗಿಯೇ ಅದನ್ನು ಸ್ಕ್ಯಾಮ್‌ಗ್ರೆಸ್ ಎಂದು ಮರುನಾಮಕರಣ ಮಾಡಲಾಗಿದೆ ಎಂದು ಕೆಟಿ ರಾಮರಾವ್ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಅವರು ಎಷ್ಟೇ ಹಣವನ್ನು ಸುರಿದರೂ ತೆಲಂಗಾಣದ ಜನರನ್ನು ಮೂರ್ಖರನ್ನಾಗಿಸಲು ಸಾಧ್ಯವಿಲ್ಲ, ತೆಲಂಗಾಣದಲ್ಲಿ ಜನ SCAMGRESSಗೆ ಮನ್ನಣೆ ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ವರ್ಷಾಂತ್ಯಕ್ಕೆ ತೆಲಂಗಾಣ ವಿಧಾನಸಭೆ ಚುನಾವಣೆ ನಡೆಯಲಿದ್ದು, ಬಿಜೆಪಿ, ಆಡಳಿತಾರೂಢ ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡಲಿದೆ.

ಶಾಸ್ತ್ರೀಯ ನೃತ್ಯಗಳ ಮೂಲ ಸತ್ವ ಮರೆಯಾಗುತ್ತಿದೆ

ಆಯಾಮೋತ್ಸವ ಪ್ರಯುಕ್ತ ನಡೆದ ವಿಚಾರ ಸಂಕಿರಣದಲ್ಲಿ ರಂಗಕರ್ಮಿ ಪ್ರೊ.ಎಚ್.ಎಸ್.ಉಮೇಶ್ ಬೇಸರ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ 'ಆಯಾಮೋತ್ಸವ'ದಲ್ಲಿ ನೃತ್ಯಾಲಯ ಸಂಸ್ಥೆಯ ನೃತ್ಯ ಗುರು ತುಳಸಿ ರಾಮಚಂದ್ರ ಮಾತನಾಡಿದರು.

ಮೈಸೂರು, ಸೆ.30(ಜಿಎ)– ಕಲೆಗಳು ಕಮರ್ಷಿಯಲ್ ಆಗುತ್ತಿವೆ, ಶಿಷ್ಯರ, ಪೋಷಕರ ಅಭಿರುಚಿ ಮತ್ತು ಅಪೇಕ್ಷೆಗೆ ಅನುಗುಣವಾಗಿ ಗುರುಗಳು ಬದಲಾಗುತ್ತಿದ್ದಾರೆ. ಶಾಸ್ತ್ರೀಯ ನೃತ್ಯಗಳ ಮೂಲ ಸತ್ವ ಮರೆಯಾಗುತ್ತಿದೆ ಎಂದು ರಂಗಕರ್ಮಿ ಪ್ರೊ.ಎಚ್.ಎಸ್. ಉಮೇಶ್ ಬೇಸರ ವ್ಯಕ್ತಪಡಿಸಿದರು.


ನಗರದ ಕಲಾಮಂದಿರದಲ್ಲಿ 'ಆಯಾಮೋತ್ಸವ'ದ ಪ್ರಯುಕ್ತ ಶನಿವಾರ ನಡೆದ 'ನಾಟ್ಯ ವಿದ್ಯಾರ್ಥಿಗಳು ಮತ್ತು ಶಾಸ್ತ್ರದ ಅಧ್ಯಯನ' ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಂದ ನಿರಂತರ ಕಲಿಕೆ ಹಾಗೂ ಪರಿಶ್ರಮ ಬೇಡುವ ಶಾಸ್ತ್ರೀಯ ನೃತ್ಯಕ್ಕೆ ಸಮರ್ಥ ಗುರು, ತಾಳ್ಮೆಯುಳ್ಳ ಪೋಷಕರ ಬೆಂಬಲ ಅಗತ್ಯ ಎಂದರು.

ಇತ್ತೀಚಿನ ದಿನಗಳಲ್ಲಿ ಗುರು ಶಿಷ್ಯ ಪರಂಪರೆಯೇ ಕಾಣೆಯಾಗುತ್ತಿದೆ. ತಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕಲಿಯುವ ಹಾಗೂ ಕಲಿಸುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ರಿಯಾಲಿಟಿ ಷೋಗಳು, ಜಗಮಗಿಸುವ ವೇದಿಕೆಗಳಲ್ಲಿ ದುಬಾರಿ ವೇಷಭೂಷಣಗಳೊಂದಿಗೆ ಒಂದಿಷ್ಟು ಅಂಗ ಚಲನೆ ತೋರುವುದೇ ಶಾಸ್ತ್ರೀಯ ನೃತ್ಯವೆನಿಸಿದೆ. ಪ್ರಚಾರದ ಹಪಾಹಪಿತನ ವ್ಯಾಪಾರ ಉದ್ದೇಶದ ಜನರಿಂದ ಕಲೆಯ ಉಳಿವು ಸಾಧ್ಯವಿಲ್ಲ. ಕಾಲ ಬದಲಾಗಿದ್ದರೂ, ಸಮಯದ ಅಭಾವವಿದ್ದರೂ, ಸಾಂಪ್ರದಾಯಿಕ ಕಲಿಕೆ ಹಾಗೂ ಹೊಸ ಪ್ರಯೋಗಗಳೂ ಒಟ್ಟಿಗೆ ಸಾಗಬೇಕು. ಗುರು ಶಿಷ್ಯ ಸಂಬಂಧ ಉಳಿಸಿಕೊಳ್ಳುವತ್ತ ಗಂಭೀರ ಪ್ರಯತ್ನವನ್ನು ಎಲ್ಲರೂ ಮಾಡಬೇಕು ಎಂದು ಆಶಿಸಿದರು.

ನೃತ್ಯಾಲಯ ಸಂಸ್ಥೆಯ ನೃತ್ಯಗುರು ತುಳಸಿ ರಾಮಚಂದ್ರ ಮಾತನಾಡಿ, ಚತುರ್ವೇದಗಳಿಂದ ಒಂದೊಂದು ವಿಚಾರಗಳನ್ನು ಪಡೆದು ನಾಟ್ಯಶಾಸ್ತ್ರ ಮಾಡಲಾಗಿದೆ. ನಾಟ್ಯದಲ್ಲಿ ಶಾಸ್ತ್ರ ಮತ್ತು ಪ್ರಯೋಗಕ್ಕೆ ಪ್ರಮುಖ ಪಾತ್ರವಿದ್ದು, ವಿದ್ಯಾರ್ಥಿಗಳು ಎರಡನ್ನೂ ಆಳವಾಗಿ ಅಭ್ಯಸಿಸುವುದು ಮುಖ್ಯ ಎಂದರು. ಶಿಷ್ಯೆಯರ ಮೂಲಕ ಭರತನಾಟ್ಯದಲ್ಲಿನ ಅನೇಕ ವಿಧದ ಭಂಗಿಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳಿಗೆ ಒಂದೊಂದರ ಮಹತ್ವವನ್ನು ತಿಳಿಸಿದರು.

ವಿಚಾರ ಸಂಕಿರಣದಲ್ಲಿ ಭೂಷಣ್ಸ್ ಅಕಾಡೆಮಿ ಆಫ್ ಫರ್ಫಾರ್ಮಿಂಗ್ ಆರ್ಟ್ಸ್ ಅಂಡ್ ವಿಶುವಲ್ ಪ್ರೆಸೆಂಟೇಶನ್ ಸಂಸ್ಥೆಯ ನೃತ್ಯಗುರು ಬದರಿ ವಿದ್ಯಾ ಭೂಷಣ್, ನಟ ಸಂಪತ್‌ಕುಮಾರ್, ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಸಂಸ್ಥಾಪಕ ನಿರ್ದೇಶಕಿ ಎಸ್.ವಿ.ಶಾಂಭವಿಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಗಾಂಧಿ ಜಯಂತಿ



ಮೈಸೂರು,ಸೆ.30–ಜಿಲ್ಲಾಡಳಿತ, ಮೈಸೂರು ನಗರಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಅ.2ರಂದು ಬೆಳಗ್ಗೆ 8 ಗಂಟೆಗೆ ಗಾಂಧಿ ಜಯಂತಿ ಪ್ರಯುಕ್ತ ನಗರದ ಗಾಂಧಿ ವೃತ್ತದಲ್ಲಿ ಗಾಂಧೀಜಿಯವರ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮ ಹಾಗೂ ಪುರಭವನದಲ್ಲಿ ಪ್ರಾರ್ಥನಾ ಸಭೆ ಹಮ್ಮಿಕೊಳ್ಳಲಾಗಿದೆ. ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಭಾಗವಹಿಸುವರು.

ಪಿಎಚ್.ಡಿ ಪದವಿ



ಮೈಸೂರು,ಸೆ.30–ಡಾ.ವಿಶ್ವನಾಥ ಅವರ ಮಾರ್ಗದರ್ಶನದಲ್ಲಿ ಟಿ.ಎನ್. ವಿದ್ಯಾ ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಪಿ. ಲಂಕೇಶ್ ಅವರ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾವೇರಿ ವಿವಾದ: ಭಾಷಿಕ ಅಲ್ಪಸಂಖ್ಯಾತರ ರಕ್ಷಣೆಗೆ ಸೌಹಾರ್ದಯುತ ಸಂಬಂಧಕ್ಕೆ ತಮಿಳುನಾಡು ಸಚಿವ ಕರೆ



ಚೆನ್ನೈ: ಕಾವೇರಿ ವಿವಾದ ಭುಗಿಲೆದ್ದಿದ್ದು ಕರ್ನಾಟಕ–ತಮಿಳುನಾಡು ನಡುವೆ ಮತ್ತೆ ತಿಕ್ಕಾಟ ಪ್ರಾರಂಭವಾಗಿದೆ. ಈ ನಡುವೆ ತಮಿಳುನಾಡು ಜಲಸಂಪನ್ಮೂಲ ಸಚಿವ ದುರೈಮುರುಗನ್ ಉಭಯ ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧಕ್ಕೆ ಕರೆ ನೀಡಿದ್ದಾರೆ.

ಉಭಯ ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧವಿದ್ದರಷ್ಟೇ ಭಾಷಿಕ ಅಲ್ಪಸಂಖ್ಯಾತರ ರಕ್ಷಣೆ ಸಾಧ್ಯ. ಅವರು ನಿರ್ಭಯದಿಂದ ಬದುಕಲು ಸಾಧ್ಯ ಎಂದು ಹೇಳಿದ್ದಾರೆ. ಇದೇ ವೇಳೆ ತಮಿಳು ನಟ ಸಿದ್ಧಾರ್ಥ್ ತಮ್ಮ ಸಿನಿಮಾ ಪ್ರಚಾರಕ್ಕಾಗಿ ಆಗಮಿಸಿದ್ದಾಗ ಕಾವೇರಿ ವಿಷಯದ ಹಿನ್ನೆಲೆಯಲ್ಲಿ ಕನ್ನಡ ಪರ ಸಂಘಟನೆಗಳು ಮಾಧ್ಯಮಗೋಷ್ಠಿಗೆ ಅಡ್ಡಿಪಡಿಸಿದ್ದನ್ನು ಅನಪೇಕ್ಷಿತವಾದದ್ದು ಎಂದು ಹೇಳಿದ್ದಾರೆ.

ಕರ್ನಾಟಕ ಸುಪ್ರೀಂಕೋರ್ಟ್ ತೀರ್ಪು, ಸಿಡಬ್ಲ್ಯುಎಂಎಗೆ ಅಥವಾ ತಮಿಳುನಾಡು ಸಿಎಂ ಮನವಿಗೆ ಸ್ಪಂದಿಸದೇ ಇರುವುದನ್ನು ಅನ್ಯಾಯ ಎಂದು ಹೇಳಿರುವ ದುರೈಮುರುಗನ್, ಕರ್ನಾಟಕ ನೈಸರ್ಗಿಕ ನ್ಯಾಯದ ಕಾನೂನನ್ನು ಎತ್ತಿಹಿಡಿಯಲು ನಿರಾಕರಿಸಿದೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಸಾವಿರಾರು ಮಂದಿ ತಮಿಳುನಾಡಿನ ಮೂಲದ ಮಂದಿ ಇದ್ದಾರೆ. ತಮಿಳುನಾಡಿನಲ್ಲಿ ಸಾವಿರಾರು ಮಂದಿ ಕನ್ನಡಿಗರಿದ್ದಾರೆ ಎರಡೂ ರಾಜ್ಯಗಳು ಗಡಿ ಹಂಚಿಕೊಂಡಿವೆ. ದಿನನಿತ್ಯ ಎರಡೂ ರಾಜ್ಯಗಳ ನಡುವೆ ಸಂಚಾರವಿದೆ. ಆದ್ದರಿಂದ ಎರಡೂ ರಾಜ್ಯಗಳು ಸೌಹಾರ್ದತೆ ಮತ್ತು ಪ್ರೀತಿಯನ್ನು ಹಂಚಿಕೊಂಡಾಗ ಮಾತ್ರ ಬೇರೆ ರಾಜ್ಯದಲ್ಲಿ ವಾಸಿಸುವವರು ನಿರ್ಭಯವಾಗಿ ಬದುಕಲು ಸಾಧ್ಯ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವುದು ಸಾಮಾನ್ಯ ರಾಜಕಾರಣಿಗಳಲ್ಲ, ನುರಿತ ರಾಜಕಾರಣಿಗಳಾದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಆಗಿದ್ದಾರೆ. ಅವರ ಬಗ್ಗೆ ಅಪಾರ ಗೌರವವಿದೆ ಎಂದೂ ದುರೈಮುರುಗನ್ ಹೇಳಿದ್ದಾರೆ.

ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರಿಗೂ ಶಾಸಕರಿಗೆ ನೀಡಿರುವ ಶಿಷ್ಟಾಚಾರ, ಗೌರವ ಕಲ್ಪಿಸಬೇಕು

ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಆಗ್ರಹ



ಮೈಸೂರಿನ ಪುರಭವನದಲ್ಲಿ ಒಕ್ಕೂಟದ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ 'ಗ್ರಾಮ ಸ್ವರಾಜ್ಯ ಕರ್ನಾಟಕ' ಅಭಿಯಾನ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜ್ಯದ ನಾನಾ ಗ್ರಾಮ ಪಂಚಾಯಿತಿಗಳಿಂದ ಆಗಮಿಸಿದ್ದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು. ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಹಳ್ಳಿ ಇನ್ನಿತರರಿದ್ದಾರೆ.

ಮೈಸೂರು,ಸೆ.30(ಜಿಎ)–ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೂ ಶಾಸಕರಿಗೆ ನೀಡುವ ಶಿಷ್ಟಾಚಾರ ನೀಡಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಒತ್ತಾಯಿಸಿದರು.

ನಗರದ ಪುರಭವನದಲ್ಲಿ ಒಕ್ಕೂಟದ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ 'ಗ್ರಾಮ ಸ್ವರಾಜ್ಯ ಕರ್ನಾಟಕ' ಅಭಿಯಾನ ಉದ್ಘಾಟನೆ ಮತ್ತು ಗ್ರಾಮ ಪಂಚಾಯಿತಿ ಅಧಕ್ಷ, ಉಪಾಧ್ಯಕ್ಷರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕದ ಬಹುತೇಕ ಪಂಚಾಯಿತಿಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಸೂಕ್ತ ಗೌರವ ದೊರೆಯುತ್ತಿಲ್ಲ. ಎಲ್ಲಾ ಯೋಜನೆಗಳಿಗೂ ಶಾಸಕರಿಗೆ ಅಧ್ಯಕ್ಷ ಸ್ಥಾನವನ್ನು ನೀಡಿರುವ ಕಾರಣ ಅವರ ಅನುಮತಿ ಇಲ್ಲದೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾವುದೇ ತೀರ್ಮಾನ ತೆಗೆದುಕೊಳ್ಳದ ಪರಿಸ್ಥಿತಿ ನಿರ್ಮಾಣವಾಗಿದ್ದು, ಆದ್ದರಿಂದ ರಾಜ್ಯ ಸರ್ಕಾರ ಶಾಸಕರಿಗೆ ನೀಡುವ ಶಿಷ್ಟಾಚಾರ, ಗೌರವಗಳನ್ನು ನಮಗೂ ನೀಡಬೇಕೆಂದು ಆಗ್ರಹಿಸಿದರು.

ಕೆಲವೊಂದು ಕ್ಷೇತ್ರದಲ್ಲಿ ಅಧ್ಯಕ್ಷ ಖುರ್ಚಿಯಲ್ಲಿ ಶಾಸಕರೇ ಕುಳಿತುಕೊಂಡು ಅಧಿಕಾರ ಚಲಾಯಿಸುತ್ತಿದ್ದಾರೆ. ಸರ್ಕಾರ ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳ ಸಲಹೆಗಳನ್ನು ಪಡೆದುಕೊಳ್ಳಬೇಕು. ಆದರೆ, ಯಾವುದೇ ಸರ್ಕಾರಗಳು ನಮ್ಮ ಬಳಿ ಮಾತನಾಡುವುದಿಲ್ಲ. ನೇರ ಆದೇಶಗಳನ್ನು ಪಿಡಿಓಗಳಿಗೆ ಕಳುಹಿಸುತ್ತಾರೆ. ಅವರ ಬಳಿ ಚರ್ಚಿಸಿದರೆ, ಸರ್ಕಾರದ ಮಾತು ನಾವು ಕೇಳಬೇಕು. ಇಲ್ಲವಾದರೆ, ಕೆಲಸ ಕಳೆದುಕೊಳ್ಳಬೇಕಾಗುತ್ತದೆ ಎಂದು ಕಾರಣ ನೀಡುತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ನಾನಾ ಗ್ರಾಮ ಪಂಚಾಯಿತಿಗಳಿಂದ ಆಗಮಿಸಿದ್ದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಅಭಿನಂದಿಸಿ, ಅವರಿಗೆ 'ಗ್ರಾಮ ಸ್ವರಾಜ್ಯ ಕರ್ನಾಟಕ' ಅಭಿಯಾನ ಕುರಿತು ಅರಿವು ಮೂಡಿಸಲಾಯಿತು. ಈ ವೇಳೆ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಪ್ರಧಾನ ಕಾರ್ಯದರ್ಶಿ ಭಲಪತಿ, ಸಹ ಕಾರ್ಯದರ್ಶಿ ನಿಶಾಂತ್ ಚಂದಗಾಲು, ಜಿಲ್ಲಾಧ್ಯಕ್ಷ ನಾಗರಾಜು ಯದುನಾಡು ಮತ್ತು ಸಲಹೆಗಾರ ರಾಜಾ ಹುಣಸೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್ ಬಾನೋತ್‌ರಿಗೆ ರಾಯಲ್ ಮೈಸೂರ್ ಸೈಲಿಂಗ್ ಕ್ಲಬ್ ಗೌರವ ಸದಸ್ಯತ್ವ



ಡಾ.ಕೆ.ವಿ.ರಾಜೇಂದ್ರ



ರಮೇಶ್ ಬಾನೋತ್

ಮೈಸೂರು, ಸೆ.30– ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹಾಗೂ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ಪ್ರತಿಷ್ಠಿತ ರಾಯಲ್ ಮೈಸೂರ್ ಸೈಲಿಂಗ್ ಕ್ಲಬ್ ಗೌರವ ಸದಸ್ಯತ್ವ ನೀಡಿ, ಅವರಿಗೆ ನಾಳೆ (ಭಾನುವಾರ) ಗೌರವ ಸದಸ್ಯತ್ವ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ ಎಂದು ಕಾಮೋಡೊರೆ ರಾಮ್ ಅಜಯ್‌ಕುಮಾರ್ ಸಿಂಗ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.78 ಅಡಿ	ಇಂದಿನ ಮಟ್ಟ 2,273.29 ಅಡಿ	ಇಂದಿನ ಮಟ್ಟ 2,854.02 ಅಡಿ
ಹಿಂದಿನ ವರ್ಷದ ಮಟ್ಟ 123.86 ಅಡಿ	ಹಿಂದಿನ ವರ್ಷದ ಮಟ್ಟ 2,282.71 ಅಡಿ	ಹಿಂದಿನ ವರ್ಷದ ಮಟ್ಟ 2,856.25 ಅಡಿ
ನಿನ್ನೆಯ ಮಟ್ಟ 97.56 ಅಡಿ	ನಿನ್ನೆಯ ಮಟ್ಟ 2,273.33 ಅಡಿ	ನಿನ್ನೆಯ ಮಟ್ಟ 2,853.89 ಅಡಿ
ಇಂದಿನ ಒಳಹರಿವು 4,153 ಕ್ಯುಸೆಕ್	ಇಂದಿನ ಒಳಹರಿವು 854 ಕ್ಯುಸೆಕ್	ಇಂದಿನ ಒಳಹರಿವು 1,794 ಕ್ಯುಸೆಕ್
ಇಂದಿನ ಹೊರಹರಿವು 2,176 ಕ್ಯುಸೆಕ್	ಇಂದಿನ ಹೊರಹರಿವು 1,000 ಕ್ಯುಸೆಕ್	ಇಂದಿನ ಹೊರಹರಿವು 1,400 ಕ್ಯುಸೆಕ್

ಮಾಜಿ ಶಾಸಕ ಡಾ.ಯತೀಂದ್ರರಿಂದ ನಾನಾ ಗ್ರಾಮಗಳಲ್ಲಿ ಅಹವಾಲು ಸ್ವೀಕಾರ

ಮೈಸೂರು,ಸೆ.30(ಎಂಟಿವೈ)– ವರುಣ ಕ್ಷೇತ್ರದಲ್ಲಿರುವ ಸರ್ಕಾರಿ ಶಾಲಾ ಕಟ್ಟಡ ದುರಸ್ತಿ ಮಾಡಲು ಹಾಗೂ ಅಗತ್ಯವಿರುವ ಸ್ಥಳಗಳಲ್ಲಿ ನೂತನ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ ಸೂಚಿಸಿದ್ದಾರೆ.

ವರುಣ ಕ್ಷೇತ್ರ ವ್ಯಾಪ್ತಿಯ ಹಳ್ಳಿಕೆರೆಹುಂಡಿ, ಮರಳೂರು, ಗೊದ್ದನಪುರ, ಏಚಗಳ್ಳಿ, ಹಳ್ಳಿದಿಡ್ಡಿ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಅಧಿಕಾರಿಗಳು ಸಾರ್ವಜನಿಕರಿಂದ ಬರುವ ಅರ್ಜಿಗಳಿಗೆ ಒಂದು ವಾರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ನಿಮ್ಮ ಮಟ್ಟದಲ್ಲಿ ಸಮಸ್ಯೆ ಬಗೆಹರಿಯದಿದ್ದರೆ ನಮ್ಮ ಗಮನಕ್ಕೆ ತರಬೇಕು. ವಿನಾಕಾರಣ ಸಾರ್ವಜನಿಕರನ್ನು ಕಚೇರಿಯಿಂದ ಕಚೇರಿಗೆ ಅಲೆಸಬಾರದು. ಯಾವುದೇ ಸಮಸ್ಯೆ ಇದ್ದರೂ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ವರುಣ ಕ್ಷೇತ್ರದಲ್ಲಿ ಶಿಥಿಲಗೊಂಡಿರುವ ಕೊಠಡಿಗಳನ್ನು ದುರಸ್ತಿ ಮಾಡಿಸಲು ಕ್ರಮ ಕೈಗೊಳ್ಳಬೇಕು. ಅಗತ್ಯವಿರುವ ಕಡೆ ಹೊಸ ಕೊಠಡಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಎಲ್ಲಾ ಶಾಲೆಗಳಿಗೂ ಕಾಂಪೌಂಡ್ ನಿರ್ಮಿಸುವಂತೆ ಸೂಚಿಸಿದರಲ್ಲದೆ, ಕ್ಷೇತ್ರ ವ್ಯಾಪ್ತಿಯಲ್ಲಿರುವ ನಾಲೆಗಳ ದುರಸ್ತಿಗೂ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬಿ.ಎಂ. ರಾಮು, ರಂಗಸ್ವಾಮಿ, ಕೆಂಪಣ್ಣ, ದಕ್ಷಿಣಾಮೂರ್ತಿ, ಶಿವಕುಮಾರ್, ಇಒ ರಾಜೇಶ್, ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎಂ. ವಿಜಯ್, ಆಪ್ತ ಸಹಾಯಕರಾದ ಶಿವಸ್ವಾಮಿ, ಪ್ರದೀಪ್‌ಕುಮಾರ್, ನಾಗರಾಜು, ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಮುಖಂಡರು ಪಾಲ್ಗೊಂಡಿದ್ದರು.


ಅ.6ಕ್ಕೆ ಮಾರಕಾಸ್ತ್ರ ಚಿತ್ರ ಬಿಡುಗಡೆ



ಮೈಸೂರು,ಸೆ.30(ಜಿಎ)–ನಟಿ ಮಾಲಾಶ್ರೀ ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ಮಾರಕಾಸ್ತ್ರ ಚಲನಚಿತ್ರವು ಅ.6ರಂದು ತೆರೆ ಕಾಣಲಿದೆ ಎಂದು ಚಿತ್ರದ ನಿರ್ಮಾಪಕ ಡಾ.ವಿ.ನಟರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಚಿತ್ರತಂಡ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜಯಪ್ರಕಾಶ್ ಹಾಡಿರುವ ಜೈ ಹನುಮಾನ್ ಗೀತೆಯನ್ನು ನಟಿ ಹರ್ಷಿಕಾ ಪೂಣಚ್ಚ ನಾಯಕ ನಟ ಆನಂದ್ ಆರ್ಯ, ಖಳನಟ ಮೈಕೋ ನಾಗರಾಜ್, ಚಿತ್ರದ ನಿರ್ದೇಶಕ ಗುರುಮೂರ್ತಿ, ಶಶಿಧರ್, ಭರತ್, ಮುಳುವಿನಗರಿ ಮಂಜುನಾಥ್, ಧನುಕುಮಾರ್, ಚಿತ್ರ ಸಾಹಿತಿ ಮಂಜುಕವಿ ಮೊದಲಾದವರು ಬಿಡುಗಡೆಗೊಳಿಸಿದರು. ಈ ವೇಳೆ ನಿರ್ಮಾಪಕ ಡಾ.ವಿ.ನಟರಾಜು ಮಾತನಾಡಿ, ಸಿನಿಮಾದ ಹಾಡುಗಳ ಚಿತ್ರೀಕರಣಕ್ಕಾಗಿ ವಿದೇಶಗಳಿಗೆ ಹೋಗುವ ಪ್ರಯತ್ನ ಮಾಡದೇ ಭಾರತದಲ್ಲೇ ಈವರೆಗೆ ಸಿನಿಮಾ ಚಿತ್ರೀಕರಣ ನಡೆಯದ ಅದ್ಭುತ ಪ್ರವಾಸಿ ತಾಣಗಳಲ್ಲಿ ಚಿತ್ರೀಕರಣ ಮಾಡುವ ಮೂಲಕ ಪ್ರವಾಸಿ ತಾಣಗಳನ್ನು ಪರಿಚಯಿಸಿದ್ದೇವೆ. ಚಿತ್ರ ಅದ್ಭುತವಾಗಿ ಮೂಡಿಬಂದಿದ್ದು, ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡಿ ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ಪಿಎಚ್.ಡಿ ಪದವಿ



ಮೈಸೂರು,ಸೆ.30–ಡಾ.ಹೆಚ್.ರಾಜಶೇಖರ್ ಅವರ ಮಾರ್ಗದರ್ಶನದಲ್ಲಿ ಬಿ.ಕೆ.ಪುನೀತ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ

ಶ್ರೀವತ್ಸ



ಮೈಸೂರು,ಸೆ.30–ಮೈಸೂರಿನ ಕುವೆಂಪುನಗರದ ನವಿಲು ರಸ್ತೆ ನಿವಾಸಿ ಹಾಗೂ ನಿವೃತ್ತ ಡಿಎಫ್‌ಆರ್‌ಎಲ್ ವಿಜ್ಞಾನಿ ಶ್ರೀವತ್ಸ (81) ಅನಾರೋಗ್ಯದಿಂದ ಶನಿವಾರ ನಿಧನರಾದರು. ಮೃತರು ಸಹೋದರ, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಅ.1) ಚಾಮುಂಡಿಬೆಟ್ಟದತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಟಿ.ಲಕ್ಷಮ್ಮ




ಮೈಸೂರಿನ ಕೆ.ಆರ್.ಆಸ್ಪತ್ರೆಯ ನಿವೃತ್ತ ಹಿರಿಯ ಸಿಬ್ಬಂದಿ ಎನ್.ಟಿ.ಲಕ್ಷಮ್ಮ (62) ಸೆಪ್ಟೆಂಬರ್ 27ರಂದು ನಿಧನರಾದರು. ಮೈಸೂರಿನ ರಾಮಕೃಷ್ಣನಗರ ನಿವಾಸಿಯಾಗಿದ್ದ ಮೃತರು, ಪತಿ ಎ.ಜಯಶಂಕರ್, ಪುತ್ರಿ ಜೆ.ಪೂಜಾ ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ ಎಂದು ಕುಟುಂಬ ವರ್ಗ ತಿಳಿಸಿದೆ.

ಜವರಪ್ಪ



ಮೈಸೂರು ತಾಲೂಕು ಸಿದ್ದರಾಮನಹುಂಡಿ ನಿವಾಸಿ ಜವರಪ್ಪ (70) ಅವರು ಶನಿವಾರ ನಿಧನರಾದರು. ಮೃತರು ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆ ನಾಳೆ (ಅ.1) ಬೆಳಗ್ಗೆ 11 ಗಂಟೆಗೆ ನೆರವೇರಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.10.2023 ಭಾನುವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಯುವ ದಸರಾ, ಯುವ ಸಂಭ್ರಮ–2023 :** ಮೋಟಾರ್ ರ್‍ಯಾಲಿ, ಚಾಲನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಪೊಲೀಸ್ ಕಮೀಷನರ್ ರಮೇಶ್ ಬಾನೋತ್, ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಶ್ರೀಮತಿ ಸೀಮಾ ಲಾಟ್ಕರ್, ಸ್ಥಳ: ಚಾಮುಂಡಿ ಹಿಲ್ಸ್‌ನಿಂದ ಮೈಸೂರು ಅರಮನೆವರೆಗೆ, ಬೆಳಗ್ಗೆ 9ಕ್ಕೆ.

■ **ಆಯಾಮ, ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಆಯಾಮೋತ್ಸವ ನೃತ್ಯ ನಾಟಕಗಳ ಉತ್ಸವ, ವಿಚಾರ ಸಂಕಿರಣ, ವಿಷಯ : ನಾಟ್ಯ ಪ್ರದರ್ಶಕರು ಮತ್ತು ರಂಗ ಸಂಯೋಜನೆಯ ತಿಳುವಳಿಕೆ, ಅಧ್ಯಕ್ಷತೆ : ಹಿರಿಯ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ವಿಷಯ ಮಂಡನೆ : ಹಿರಿಯ ನೃತ್ಯ ಗುರು ಡಾ. ವಸುಂಧರ ದೊರೆಸ್ವಾಮಿ, ರಂಗ ನಿರ್ದೇಶಕ ಮೈಮ್ ರಮೇಶ್, ಪ್ರತಿಕ್ರಿಯೆ : ಹಿರಿಯ ನೃತ್ಯ ಗುರು ಡಾ. ಕೃಪಾ ಪಡ್ಕೆ, ಅತಿಥಿ ಉಪನ್ಯಾಸಕ ಎಲ್. ನಟರಾಜು, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ, ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್ :** ಯೋಗಿ ಶ್ರೀ ಅರ್ಕರವರ ಜನ್ಮ ದಿನಾಚರಣೆ, ರಾಜ್ಯ ಮಟ್ಟದ ಮುಕ್ತ ಯೋಗಾಸ್ಪರ್ಧೆ, ವಿಜೇತರಿಗೆ ಬಹುಮಾನ ವಿತರಣೆ, ಸಾಧಕರಿಗೆ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಅರ್ಕಧಾಮ ಸಂಸ್ಥಾಪಕರಾದ ಯೋಗಿ ಶ್ರೀಶ್ರೀನಿವಾಸ ಅರ್ಕ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶ್ರೀ ಪತಂಜಲಿ ಮಹರ್ಷಿಗೆ ಪುಷ್ಪಾರ್ಚನೆ : ಉದ್ಯಮಿ ಮಹೇಶ್ ಶೆಣೈ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಡಾ.ಕೆ.ರಘುರಾಂ ವಾಜಪೇಯಿ, ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ್–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಬಸವ ಸಮಿತಿ :** ಶರಣ ಸಂಗಮ, ವೀರು ಥಿಯೇಟರ್ ಟ್ರಸ್ಟ್ ಹಾಗೂ ದೇಚಿ ಕ್ರಿಯೇಷನ್ಸ್ ಅರ್ಪಿಸುವ ಶ್ರೇಯಸ್ ಪಿ. ಅಭಿನಯದ ಕಲಾವಿದ (ಏಕಪಾತ್ರಾಭಿನಯ), ನಿರ್ದೇಶನ : ವೀರು ಅಣ್ಣಿಗೇರಿ, ಮುಖ್ಯ ಅತಿಥಿಗಳು : ಸಾಹಿತಿ ದೇವರಾಜು ಪಿ. ಚಿಕ್ಕಹಳ್ಳಿ (ದೇಚಿ), ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜೀವಧಾರ ರಕ್ತನಿಧಿ ಕೇಂದ್ರ:** ಸ್ವಯಂಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು: ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಕುಮಾರಸ್ವಾಮಿ, ಮಾಜಿ ಇಂಡಿಯನ್ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಮಂಜುನಾಥ್, ಜೆಎಸ್‌ಎಸ್ ಯೋಗ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಶ್ರೀಹರಿ, ಲಯನ್ಸ್ ಗವರ್ನರ್ ಕೃಷ್ಣೇಗೌಡ, ಲಯನ್ ಗುರುರಾಜ್, ಶ್ರೀನಿವಾಸ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರದ ಆವರಣ, ಬೆಳಗ್ಗೆ 10.30ಕ್ಕೆ.

■ **ತರಳಬಾಳು ಸಮಾಗಮ, ಶ್ರೀ ತರಳಬಾಳು ಜಗದ್ಗುರು ವಿದ್ಯಾರ್ಥಿ ನಿಲಯ:** ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 31ನೇ ಶ್ರದ್ಧಾಂಜಲಿ ಕಾರ್ಯಕ್ರಮ, ನುಡಿನಮನ: ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ: ತರಳಬಾಳು ಸಮಾಗಮ ಅಧ್ಯಕ್ಷ ಡಾ.ವಸಂತಕುಮಾರ್, ಸಮಾಗಮದ ಸದಸ್ಯರಿಂದ ಗಾಯನ, ಸ್ಥಳ: ವಿದ್ಯಾರ್ಥಿನಿಲಯದ ಆವರಣ, ತಿಲಕ್‌ನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ:** ಮಹಾಕವಿ ಡಾ.ಲತಾ ರಾಜಶೇಖರ್ ಹಾಗೂ ಸುಪ್ರಸಿದ್ಧ ವೈದ್ಯ ಡಾ.ಹೆಚ್.ಬಿ.ರಾಜಶೇಖರ್ ದಂಪತಿಗಳ ಪತ್ರ ಸಂಕಲನ ಭಾವ ಸಂಗಮ ಸುವರ್ಣ ಸಂಭ್ರಮ ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು: ಕವಿ ಡಾ.ಜಯಪ್ಪ ಹೊನ್ನಾಳಿ, ಮುಖ್ಯ ಅತಿಥಿಗಳು: ನಟರಾಜ ಶಿಕ್ಷಣ ಸಂಸ್ಥೆ ವಿಶೇಷಾಧಿಕಾರಿ ಡಾ.ಶಿವರಾಜಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಚಂದ್ರಶೇಖರ್, ಸ್ಥಳ: ಹೋಟೆಲ್ ಪ್ರೆಸಿಡೆಂಟ್, ಹಾರ್ಡಿಂಜ್ ಸರ್ಕಲ್ ಹತ್ತಿರ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬಾದರಾಯಣಾಚಾರ್ಯ ಅವರಿಂದ ಭಗವದ್ಗೀತೆ 11ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ದಕ್ಷಿಣ ಕನ್ನಡ ವೈದ್ಯರ ಸಾಂಸ್ಕೃತಿಕ ಸಂಘ :** ದಕ್ಷಿಣ ಕನ್ನಡದ ಸುಪ್ರಸಿದ್ಧ ಯಕ್ಷ ಕಲಾವಿದರ ಸಮಾಗಮ ಅವರಿಂದ ಯಕ್ಷಗಾನ ಪ್ರಸಂಗ – ಶ್ರೀದೇವಿ ಮಹಾತ್ಮೆ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಗುರು ವಿದ್ವಾನ್ ಬೆಳಕವಾಡಿ ಆರ್. ಶ್ರೀಧರ್ ಅವರ ಶಿಷ್ಯ ವೃಂದ:** ಗುರುವಂದನೆ ಮತ್ತು ಸಂಗೀತ ಕಾರ್ಯಕ್ರಮ, ವಿದ್ವಾನ್ ಬೆಳಕವಾಡಿ ಆರ್.ಶ್ರೀಧರ್ ಅವರಿಂದ ಗಾಯನ, ವಿದುಷಿ ಶ್ವೇತಾ ರಘುನಂದನ್–ಸಹ ಗಾಯನ, ವಿದುಷಿ ಜ್ಯೋತಿ ಚೇತನ್–ವೀಣೆ, ವಿದ್ವಾನ್ ಜಿ.ಎಸ್.ರಾಮಾನುಜಂ–ಮೃದಂಗ, ವಿದ್ವಾನ್ ದಿವಾಕರ್–ಘಟಂ, ಮುಖ್ಯ ಅತಿಥಿಗಳು: ಸಂಗೀತ ವಿದ್ಯಾನಿಧಿ ವಿ.ನಂಜುಂಡಸ್ವಾಮಿ, ವಿದುಷಿ ಜಿ.ರಾಜಲಕ್ಷ್ಮಿ ಶ್ರೀಧರ್, ಅಧ್ಯಕ್ಷತೆ: ನಾದಬ್ರಹ್ಮ ಸಂಗೀತ ಸಭಾ ಕಾರ್ಯದರ್ಶಿ ಕೆ.ಎಸ್.ಎನ್.ಪ್ರಸಾದ್, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಎ. ಶ್ರೀನಿವಾಸಮೂರ್ತಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷೆ: ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in, ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಸಂಗಮೇಶ್ ಸವದತ್ತಿ, 9.40 ನಮ್ಮ ಆರೋಗ್ಯ–ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಸಂದರ್ಭದಲ್ಲಿ "ಹಿರಿಯ ನಾಗರಿಕರಲ್ಲಿ ಮೂಳೆ, ಕೀಲು ಮತ್ತು ಬೆನ್ನುಮೂಳೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರ" ಕುರಿತು ಡಾ.ಜಿ.ಎಸ್.ಮಂಜುನಾಥ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಅಮೃತ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ ಕಲಾವಿದೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ ಆಯುರ್ವೇದ ವೈದ್ಯರಾದ ಡಾ.ವೀಣಾ ಮೆಹೆಂದಳೆ ಅವರ ಪರಿಚಯ ಹಾಗೂ ಭಾರತೀಯ ಆಯುರ್ವೇದ ವೈದ್ಯ ಪದ್ಧತಿ ಈ ಕುರಿತು ಭಾಷಣ, 12.30 ದೇವರ ನಾಮ – ರೇಣುಕಾ ನಾಕೋಡ್, ದಿವ್ಯಾ ಸಂಪತ್, ಡಾ.ಆರ್.ಎನ್.ಶ್ರೀಲತಾ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಜಮುನಾ ಎನ್., 3.45 ಯಕ್ಷಗಾನ ತಾಳ ಮದ್ದಳೆ–ಪ್ರಸಂಗ–ಅಂಗದ ಸಂಧಾನ, ಪ್ರಸ್ತುತಿ–ಪರ್ಲ ಕೃಷ್ಣಭಟ್ ಹಾಗೂ ಸಂಗಡಿಗರು, 6.50 ಕೃಷಿರಂಗ–ಪಶುಪಾಲನೆಯಲ್ಲಿ ದಾಖಲೆಗಳ ನಿರ್ವಹಣೆ ಕುರಿತು ಬೊಪ್ಪಸಮುದ್ರದ ಡಾ.ಬಿ.ಕೆ. ರಮೇಶ್ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ–ಆರೋಗ್ಯ ಭಾರತಿ ಸಂಘಟನೆಯ ಕಾರ್ಯದರ್ಶಿ ಡಾ.ಚಂದ್ರಶೇಖರ್ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ, 9.30 ಚೀನಾದಲ್ಲಿ ನಡೆಯುತ್ತಿರುವ 19ನೇ ಏಷ್ಯನ್ ಕ್ರೀಡಾಕೂಟದ ದಿನದಾಟದ ವರದಿ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ಕುಶಲ್‌ದಾಸ್–ಸಿತಾರ್

ಮೈಸೂರು ಮಿತ್ರ ಭಾನುವಾರ 1 ಅಕ್ಟೋಬರ್ 2023

ಪಿಟಿಐ ನಿರ್ದೇಶಕರ ಮಂಡಳಿ ಅಧ್ಯಕ್ಷರಾಗಿ ಕೆ.ಎನ್.ಶಾಂತಕುಮಾರ್ ಆಯ್ಕೆ



ಕೆ.ಎನ್.ಶಾಂತಕುಮಾರ್

ಹೊಸದಿಲ್ಲಿ,ಸೆ.30–'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್'ನ ಕೆ.ಎನ್. ಶಾಂತಕುಮಾರ್ ಅವರು ಶುಕ್ರವಾರ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ನಿರ್ದೇಶಕರ ಮಂಡಳಿಯ ಅಧ್ಯಕ್ಷರಾಗಿ ಒಂದು ವರ್ಷದ ಅವಧಿಗೆ ಆಯ್ಕೆಯಾಗಿದ್ದಾರೆ.

ಹೊಸದಿಲ್ಲಿಯಲ್ಲಿ ಸುದ್ದಿ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆದ PTIಯ ನಿರ್ದೇಶಕರ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶಾಂತಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು. 'ಹಿಂದೂಸ್ತಾನ್ ಟೈಮ್ಸ್' CEO ಪ್ರವೀಣ್ ಸೋಮೇಶ್ವರ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಇತ್ತೀಚೆಗೆ ವೀಡಿಯೋ ಸೇವೆಯನ್ನು ಪ್ರಾರಂಭಿಸಿದ ನಂತರ ಹೊಸ ಶೈಲಿಯಲ್ಲಿ ಪಿಟಿಐ ಮುನ್ನಡೆಯುತ್ತಿದೆ. ಈ ಸಮಯದಲ್ಲಿ ಪಿಟಿಐ ಚುಕ್ಕಾಣಿ ಹಿಡಿದಿರುವುದು ವಿಶೇಷವಾಗಿದೆ ಎಂದು ಶಾಂತಕುಮಾರ ಪ್ರತಿಕ್ರಿಯಿಸಿದ್ದಾರೆ. ಕೆ.ಎನ್.ಶಾಂತಕುಮಾರ್ ಅವರು ಪ್ರಜಾವಾಣಿ, ಸುಧಾ, ಮಯೂರ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಮಾತೃಸಂಸ್ಥೆಯಾದ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ (ಟಿಪಿಎಂಎಲ್) ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದಾರೆ. ಮಯೂರ ಮಾಸಿಕದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

62 ವರ್ಷದ ಶಾಂತಕುಮಾರ್ ಅವರು 1983ರಿಂದ ದಿ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ವಹಣೆಯಲ್ಲಿ ವಿವಿಧ ಜವಾಬ್ದಾರಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್‌ನ ಅಧ್ಯಕ್ಷರೂ ಆಗಿದ್ದರು, 20 ವರ್ಷಗಳಿಗೂ ಹೆಚ್ಚು ಕಾಲ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಶಾಂತ್‌ಕುಮಾರ್ ಕ್ರೀಡೆ ಮತ್ತು ಛಾಯಾಗ್ರಹಣದಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದಾರೆ. ಅವರು 1988 ರಿಂದ ಮಾನ್ಯತೆ ಪಡೆದ ಛಾಯಾಗ್ರಾಹಕರಾಗಿ ಹಲವಾರು ಒಲಂಪಿಕ್ ಕ್ರೀಡೆಗಳಲ್ಲಿ ಭಾಗಿಯಾಗಿದ್ದಾರೆ.

ಕುಮಾರಸ್ವಾಮಿ ನನ್ನ ಸಹೋದರನಿದ್ದಂತೆ; ಅಮಿತ್ ಶಾ ಭೇಟಿ ನೋವು ತಂದಿದೆ

ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಬೇಸರ



ಬೆಂಗಳೂರು, ಸೆ.30–ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನನಗೆ ಕಿರಿಯ ಸಹೋದರರಿದ್ದಂತೆ. ಆದರೆ, ಅವರು ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದು ನನಗೆ ನೋವು ತಂದಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಶನಿವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈತ್ರಿ ವಿಚಾರವಾಗಿ ಜೆಡಿಎಸ್ ಪಕ್ಷದ ನಾಯಕರೇ ಬಿಜೆಪಿಯ ಬಳಿ ಹೋಗಿದ್ದು ಸರಿಯಲ್ಲ. ಅವರೇ ನಮ್ಮ ಬಳಿ ಬರಬೇಕಿತ್ತು. ಮೈತ್ರಿ ಆದ ಬಳಿಕ ಕುಮಾರಸ್ವಾಮಿ ಜೊತೆ ಇಲ್ಲಿಯವರೆಗೂ ಮಾತನಾಡಿಲ್ಲ. ಕುಮಾರಸ್ವಾಮಿ ನನಗೆ ಸಹೋದರನಂತೆ. ದೇವೇಗೌಡರು ತಂದೆ ಸಮಾನ. ದೆಹಲಿಗೆ ಹೋಗುತ್ತಿದ್ದೇವೆಂದು ನನಗೆ ಒಂದು ಮಾತು ಹೇಳಿಲ್ಲ. ಏನು ಚರ್ಚೆ ಮಾಡಿದ್ದಾರೆ ಎನ್ನುವುದನ್ನೂ ಹೇಳಿಲ್ಲ. ಪಕ್ಷದ ಅಧ್ಯಕ್ಷರಿಗೇ ಮೈತ್ರಿ ಆಗಿದೆ ಎಂಬುದು ಹೇಳಿಲ್ಲ ಎಂದು ಹೇಳಿದ್ದಾರೆ.

ಚುನಾವಣೆಯಲ್ಲಿ ಶೇಕಡಾ 20 ರಷ್ಟು ಮುಸ್ಲಿಂ ಮತ ಬಂದಿದೆ. ಒಕ್ಕಲಿಗ ಮತ ಕಾಂಗ್ರೆಸ್‌ಗೆ ಹೋಗಿದೆ. ಪಕ್ಷದ ತೀರ್ಮಾನ ಎಂದು ಕರೆಯಲು ಪಕ್ಷದ ಮಟ್ಟದಲ್ಲಿ ಚರ್ಚೆ ಆಗಬೇಕು. ಪಕ್ಷದ ಮಟ್ಟದಲ್ಲಿ ಚರ್ಚೆ ಆಗಿ ನಾನು ಸಹಿ ಹಾಕಬೇಕು. ಕೋರ್ ಕಮಿಟಿ ಸಭೆ ನಡೆಸಿ ತೀರ್ಮಾನ ಮಾಡುತ್ತೇವೆ ಎಂದಿದ್ದರು. ಆದರೆ, ನನ್ನ ಜೊತೆ ಮಾತನಾಡಿಲ್ಲ ಎಂದು ಅಸಮಾಧಾನ ಹೊರಹಾಕಿದ್ದಾರೆ. ಜೆಡಿಎಸ್ ಪಕ್ಷದಲ್ಲಿ ಮುಂದುವರೆಯುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಅ.16ರಂದು ನನ್ನ ನಿರ್ಧಾರ ಪ್ರಕಟಿಸುತ್ತೇನೆ. ಹೈಕಮಾಂಡ್ ನಾಯಕರು ಮಾತನಾಡಿದ್ದಾರೆ. ಜನತಾದಳ ಸೇರಲು ದೇವೇಗೌಡರು ಕಾರಣ. ಸೆಕ್ಯುಲರ್ ಸಿದ್ಧಾಂತ ಎಂದು ಜೆಡಿಎಸ್‌ಗೆ ಹೋದೆ. ಅಂದು ಪರಿಷತ್ ಸದಸ್ಯ ಸ್ಥಾನ ಬಿಟ್ಟು ಹೋದೆ. ಇಲ್ಲಿ ಪಕ್ಷದ ಅಧ್ಯಕ್ಷನಾಗಿದ್ದೇನೆ. 16ನೇ ತಾರೀಖಿನ ಸಭೆಯ ಅಜೆಂಡಾ ಏನೆಂದರೆ, ಈ ಮೈತ್ರಿ ಮಾತುಕತೆ ಸರಿಯೇ? ಮೈತ್ರಿ ಮುಂದುವರಿದರೆ, ಮುಂದಿನ ನಡೆಯೇನು? ದೇವೇಗೌಡರ ಮನವೊಲಿಸುವ ಬಗ್ಗೆ ಚರ್ಚೆ ನಡೆಸಲಿದ್ದೇವೆ. ದೇವೇಗೌಡರು ಒಪ್ಪದೇ ಇದ್ದರೆ, ಮುಂದಿನ ನಡೆ ಏನು ಅನ್ನೋ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ತಿಪ್ಪೇಸ್ವಾಮಿ ಮೂಲಕ ನನ್ನ ಜತೆ ಮಾತನಾಡಲು ಪ್ರಯತ್ನ ಪಟ್ಟಿದ್ದಾರೆ. ಅವರ ಆರೋಗ್ಯ ಸರಿಯಿಲ್ಲ. 16ನೇ ತಾರೀಖು ನಾನು ಮಾತನಾಡ್ತೀನಿ ಎಂದು ಹೇಳಿದ್ದೇನೆ ಎಂದರು. ಮೈತ್ರಿಯಿಂದ ಜೆಡಿಎಸ್ ಗೆ ಲಾಭ ಇದೆಯೇ ಎನ್ನುವ ಪ್ರಶ್ನೆಗೆ, 3–4 ಸೀಟು ಬಂದರೂ ಬರದೇ ಇದ್ದರೂ ನಮ್ಮ ಸಿದ್ಧಾಂತ ಏನಾಯಿತು. ನಮ್ಮ ಸಿದ್ಧಾಂತವನ್ನು ಬಿಜೆಪಿ ಒಪ್ಪುತ್ತಾರೆಯೇ, 16 ತಾರೀಖು ಚರ್ಚೆ ಮಾಡುತ್ತೇವೆ. ದೆಹಲಿಗೆ ಹೋಗುವಾಗ ನನ್ನ ಬಿಟ್ಟು ಹೋದರಲ್ಲಾ ಎಂಬ ನೋವಿದೆ, ಇವರು ಬಿಜೆಪಿ ಹತ್ತಿರ ಹೋಗಿದ್ದು ತಪ್ಪು. ಅವರೇ ನಮ್ಮ ಬಳಿ ಬರಬೇಕಿತ್ತು. ಪಕ್ಷದ ಕಾರ್ಯಕರ್ತರ ಮುಂದೆ ತಲೆ ತಗ್ಗಿಸೋ ಪರಿಸ್ಥಿತಿ ಬಂತು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಾವು ಯಾರ ಮೇಲೂ ಅವಲಂಭಿತವಾಗಿರಲಿಲ್ಲ, ಅವರು ನಮ್ಮ ಮೇಲೆ ಡಿಪೆಂಡ್ ಆಗಿದ್ದರು. ಈಗ ಹೋಗಿ ಮಾತಾಡಿದ್ದೇ ಮಾಡಿದ ತಪ್ಪು. ವಯಸ್ಸಾದ ಕಾಲದಲ್ಲಿ ದೇವೇಗೌಡರ ಕೈ ಹಿಡಿದೆ ಎಂಬ ತೃಪ್ತಿ ಇದೆ. ನನಗೆ ಸ್ಥಾನ ಮುಖ್ಯ ಅಲ್ಲ, ಮಾನ ಮುಖ್ಯ. 60 ವರ್ಷದ ರಾಜಕೀಯದಲ್ಲಿ ಕಳಂಕ ನನ್ನ ಮೇಲೆ ಇಲ್ಲ. 16ನೇ ತಾರೀಖಿನಂದು ಮುಂದೆ ಏನು ಮಾಡಬೇಕು ಎಂಬ ಗಟ್ಟಿ ನಿರ್ಧಾರ ತೆಗೆದುಕೊಳ್ಳುತ್ತೇನೆ. ಪವಾರ್, ನಿತೀಶ್, ಆಪ್, ಕಾಂಗ್ರೆಸ್ ಪಕ್ಷವೋ ಏನು ಅಂತಾ ತೀರ್ಮಾನಿಸುತ್ತೇನೆ. ಕಾಂಗ್ರೆಸ್, ಬಿಜೆಪಿಗೆ ಒಳ್ಳೆಯದಾಗಬೇಕು ಅಂದರೆ ಕರ್ನಾಟಕದಲ್ಲಿ 3ನೇ ಶಕ್ತಿ ಇರಬೇಕು ಎಂದರು. ನನ್ನ ನಿಲುವು ಪಕ್ಷದ ಅಧ್ಯಕ್ಷನಾಗಿ ಈಗಲೇ ಹೇಳುವುದರಲ್ಲಿ ಅರ್ಥ ಇಲ್ಲ. ನಿರೀಕ್ಷೆ ಮಾಡಿ ಉತ್ತರ ಕೊಡುವವನು ಅಲ್ಲ ನಾನು. ಇಂದು ಪಾಂಡವರ ಸ್ಥಿತಿಯೇ ನಮಗೆ ಆಗಿದೆ ಎಂದರು.


ಸುಯೋಗ್ ಆಸ್ಪತ್ರೆಗೆ ನೈಜೀರಿಯಾ ರಾಯಭಾರಿ ಭೇಟಿ



ಮೈಸೂರು,ಸೆ.30– ಅ.2ರಂದು ಮಧ್ಯಾಹ್ನ 12 ಗಂಟೆಗೆ ಭಾರತದಲ್ಲಿ ನೈಜೀರಿಯಾ ರಾಯಭಾರಿಗಳಾದ ಅಹಮದ್ ಸ್ಯೂಲೆ ಅವರು ಭೇಟಿ ನೀಡುತ್ತಿದ್ದು, ಅಂದು ಸುಯೋಗ್ ಆಸ್ಪತ್ರೆಯಲ್ಲಿ ನಡೆಯುವ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿರುವರು. ನೈಜೀರಿಯಾ ದೇಶದ ರೋಗಿಗಳಿಗೆ ಸುಯೋಗ್ ಆಸ್ಪತ್ರೆಯಲ್ಲಿ ಕೀಲು ಮರುಜೋಡಣೆ, ಹೃದಯದ ಶಸ್ತ್ರಕ್ರಿಯೆ, ಮೆದುಳಿನ ಶಸ್ತ್ರಕ್ರಿಯೆ ಮತ್ತು ಕ್ಯಾನ್ಸರ್‌ಗೆ ಸಂಬಂಧಿಸಿದ ರೋಗಗಳಿಗೆ ಚಿಕಿತ್ಸೆ ನೀಡುವ ಬಗ್ಗೆ ಒಡಂಬಡಿಕೆಗಾಗಿ ಪರಿಶೀಲಿಸಲು ಆಗಮಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಗಾಂಧಿ ಪ್ರತಿಷ್ಠಾನದ ಡಾ.ಶಿವರಾಜಪ್ಪ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಉಪಸ್ಥಿತರಿರುವರು.

ರೋಟರಿ ಮೈಸೂರು–'ಸ್ಟಾರ್ ಆಫ್ ಮೈಸೂರ್' ದಸರಾ ರಸಪ್ರಶ್ನೆ ಸ್ಪರ್ಧೆಯಲ್ಲಿ ಎನ್‌ಐಇ ಕಾಲೇಜಿನ ಪಿ.ಆಯುಷ್‌ಗೆ ಪ್ರಥಮ ಸ್ಥಾನ

ಕಠಿಣ ಪರಿಶ್ರಮವೇ ಯಶಸ್ಸಿನ ಕೀಲಿ ಕೈ: ಸ್ಪರ್ಧೆಗೆ ಚಾಲನೆ ನೀಡಿ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರಿನ ಫೀನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ ಶಾಲೆಯ ಸಭಾಂಗಣದಲ್ಲಿ ಶನಿವಾರ ರೋಟರಿ ಮೈಸೂರು ಮತ್ತು 'ಮೈಸೂರು ಮಿತ್ರ'ನ ಸಹೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ದಸರಾ ರಸಪ್ರಶ್ನೆ ಸ್ಪರ್ಧೆ'ಯ ಅಂತಿಮ ಸುತ್ತಿನಲ್ಲಿ ವಿಜೇತರಾದ (ಪ್ರಥಮ) ಎನ್‌ಐಇ ಕಾಲೇಜಿನ ಪಿ.ಆಯುಷ್ (ಎಡದಿಂದ 3ನೇಯವರು) ನಗದು ಬಹುಮಾನದ ಚೆಕ್ ಅನ್ನು ಸ್ವೀಕರಿಸಿದರು. ಎಡದಿಂದ, ತೃತೀಯ ಬಹುಮಾನ ಪಡೆದ ಜ್ಞಾನೋದಯ ಪಿಯು ಕಾಲೇಜಿನ ಎಸ್.ಕಿರಣ್‌ಕುಮಾರ್, ದ್ವಿತೀಯ ಬಹುಮಾನ ಪಡೆದ ಎನ್‌ಐಇ ಕಾಲೇಜಿನ ಬಿ.ವೈಶಾಲಿ ಶೆಣೈ, ಉದ್ಯಮಿ ಆರ್.ಗುರು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ರೋಟರಿ ಜಿಲ್ಲೆ 3181ರ ಜಿಲ್ಲಾ ಗೌರ್ನರ್ ಹೆಚ್.ಆರ್.ಕೇಶವ್, ರೋಟರಿ ಮೈಸೂರು ಅಧ್ಯಕ್ಷ ಅರುಣ್ ಬೆಳವಾಡಿ, ಉಪಾಧ್ಯಕ್ಷೆ ರೂಪಾ ವೆಂಕಟೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಸೆ.30(ಪಿಎಂ)– ಯಾವ ಆನೆ ಗರಿಷ್ಠ ವರ್ಷಗಳ ಕಾಲ ಮೈಸೂರು ದಸರಾದಲ್ಲಿ ಚಿನ್ನದ ಅಂಬಾರಿ ಹೊತ್ತೊಯ್ದಿದೆ? 'ಹಿರಿಯ ದ್ರೋಣ....' ಮೈಸೂರು ಸಂಸ್ಥಾನದ ನಾಡಗೀತೆ 'ಕಾಯೌ ಶ್ರೀಗೌರಿ' ಬರೆದವರ್ಯಾರು? 'ಬಸವಪ್ಪ ಶಾಸ್ತ್ರಿ...' ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರಿಸಲು ವಿದ್ಯಾರ್ಥಿಗಳು ಪೈಪೋಟಿಗಿಳಿದು, ಅಂತಿಮವಾಗಿ ಎನ್‌ಐಇ ಕಾಲೇಜಿನ ಪಿ.ಆಯುಷ್ ಪ್ರಥಮ ಸ್ಥಾನಕ್ಕೆ ಭಾಜನರಾಗುವ ಮೂಲಕ 10 ಸಾವಿರ ನಗದು ಬಹುಮಾನ ಪಡೆದರು.

ರೋಟರಿ ಮೈಸೂರು ಮತ್ತು 'ಮೈಸೂರು ಮಿತ್ರ'ನ ಸಹೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಜಂಟಿ ಆಶ್ರಯದಲ್ಲಿ ಮೈಸೂರಿನ ಫೀನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ ಶಾಲೆಯ ಸಭಾಂಗಣದಲ್ಲಿ ಶನಿವಾರ ಕಾಲೇಜು (ಪಿಯು ಮತ್ತು ಪದವಿ ವಿದ್ಯಾರ್ಥಿಗಳಿಗೆ) ವಿದ್ಯಾರ್ಥಿಗಳಿಗೆ 'ಮೈಸೂರು, ದಸರಾ ಮತ್ತು ನವರಾತ್ರಿ ಆಚರಣೆಗಳು' ಕುರಿತಂತೆ ನಡೆದ 'ದಸರಾ ರಸಪ್ರಶ್ನೆ ಸ್ಪರ್ಧೆ'ಯ ಅಂತಿಮ ಸುತ್ತಿನಲ್ಲಿ ಮೈಸೂರು ದಸರಾ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಆಚರಣೆಯಲ್ಲಿರುವ ವೈವಿಧ್ಯಮಯ ದಸರಾ ಉತ್ಸವದ ಆಸಕ್ತಿದಾಯಕ ಪ್ರಶ್ನೆಗಳಿಗೆ ಸ್ಪರ್ಧಿಗಳು ಉತ್ತರಿಸಲು ಪೈಪೋಟಿ ನಡೆಸಿದರು.

ಈ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದ ಆರು ಮಂದಿ ವಿದ್ಯಾರ್ಥಿಗಳು ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ತಮ್ಮ ಬೌದ್ಧಿಕ ಕಸರತ್ತು ಪ್ರದರ್ಶಿಸಿದರು. ಎನ್‌ಐಇ ಕಾಲೇಜಿನ ಪಿ.ಆಯುಷ್ ಪ್ರಥಮ ಸ್ಥಾನಕ್ಕೆ ಭಾಜನರಾದರೆ, ಇದೇ ಎನ್‌ಐಇ ಕಾಲೇಜಿನ ಬಿ.ವೈಶಾಲಿ ಶೆಣೈ ದ್ವಿತೀಯ ಸ್ಥಾನ ಗಳಿಸುವ ಮೂಲಕ 7 ಸಾವಿರ ನಗದು ಬಹುಮಾನ ಪಡೆದರು. ಸರಸ್ವತಿಪುರಂನ ಜ್ಞಾನೋದಯ ಪಿಯು ಕಾಲೇಜಿನ ಎಸ್. ಕಿರಣ್‌ಕುಮಾರ್ ತೃತೀಯ ಸ್ಥಾನ ಗಳಿಸಿ, 5 ಸಾವಿರ ನಗದು ಬಹುಮಾನ ಪಡೆದರು.



ಸ್ಪರ್ಧಿಗಳು

ಉಳಿದಂತೆ ಜೆಎಸ್‌ಎಸ್‌ಎಸ್ ಮೈಸೂರು ಸಂಸ್ಥೆಯ ಪಿ.ಬಿ.ಶ್ರುತಿ, ಕೇಂದ್ರೀಯ ವಿದ್ಯಾಲಯದ ಧ್ಯಾನ್ ಶ್ರೀ ಸಾಯ್, ಎನ್‌ಐಇ ಕಾಲೇಜಿನ ಎಸ್.ಶಶಾಂಕ್ ಸಮಾಧಾನಕರ ಬಹುಮಾನಗಳಿಗೆ ಭಾಜನರಾಗಿ ತಲಾ ಸಾವಿರ ರೂ. ನಗದು ಬಹುಮಾನ ಪಡೆದರು. ಆನ್‌ಲೈನ್‌ನಲ್ಲಿ ನಡೆದ ಮೊದಲ ಸುತ್ತಿನಲ್ಲಿ 300 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಪೈಕಿ 110 ಮಂದಿ 2ನೇ ಸುತ್ತಿಗೆ ಆಯ್ಕೆಯಾಗಿದ್ದರು. ಅಂತಿಮ ಸುತ್ತಿಗಾಗಿ 60 ಮಂದಿಯಲ್ಲಿ 6 ಮಂದಿಯನ್ನು ಆಯ್ಕೆ ಮಾಡಲಾಗಿತ್ತು. ಅಂತಿಮ ಸುತ್ತಿನಲ್ಲಿ (ಆಫ್ ಲೈನ್) 6 ಸುತ್ತುಗಳಲ್ಲಿ ಸ್ಪರ್ಧೆ ನಡೆಯಿತು.

ಸ್ಪರ್ಧೆಯ ಕೌತುಕ ಕ್ಷಣಗಳು: ಮೈಸೂರು ದಸರಾ ಸೇರಿದಂತೆ ನವರಾತ್ರಿಗೆ ಸಂಬಂಧಿಸಿದ ರಸಪ್ರಶ್ನೆಗಳಿಗೆ ಕಾಲೇಜು ವಿದ್ಯಾರ್ಥಿಗಳು ತರಾತುರಿಯಲ್ಲಿ ಉತ್ತರಿಸುವ ಪೈಪೋಟಿ ನಡೆಸಿ ನೆರೆದವರಲ್ಲಿ ಕುತೂಹಲ ಮೂಡಿಸಿದರು. ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿಯಲ್ಲಿ ಆಸೀನರಾಗಿದ್ದ ಕೊನೆ ಮೈಸೂರು ಅರಸರು ಯಾರು? 'ಜಯಚಾಮರಾಜ ಒಡೆಯರ್...', ಕೃಷ್ಣದೇವರಾಯ ಬರೆದ ಪುಸ್ತಕದ ಹೆಸರೇನು? 'ಅಮುಕ್ತಮಾಲ್ಯದ...' ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರ್ಯಾರು? 'ಹರಿಹರ ಮತ್ತು ಬುಕ್ಕರು...' ಹೀಗೆ ಆರು ಸುತ್ತುಗಳಲ್ಲಿ ತರಾವರಿ ಪ್ರಶ್ನೆಗಳಿಗೆ ಸ್ಪರ್ಧಿಗಳು ಉತ್ತರಿಸಲು ಪೈಪೋಟಿ ನಡೆಸಿದರು.

ರಸಪ್ರಶ್ನೆ ಸ್ಪರ್ಧೆ ಆಯೋಜನೆಯ ಆಸಕ್ತಿ: ಇದಕ್ಕೂ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಪಾಲ್ಗೊಂಡಿದ್ದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು (ಕೆಬಿಜಿ) ಮಾತನಾಡಿ, ಸ್ಟಾರ್ ಆಫ್ ಮೈಸೂರ್ ವತಿಯಿಂದ 1980ರ ದಶಕದಲ್ಲಿ ನಿರಂತರವಾಗಿ ನಾಲ್ಕೈದು ವರ್ಷಗಳು ಇದೇ ರೀತಿ ರಸಪ್ರಶ್ನೆ ಸ್ಪರ್ಧೆ ಆಯೋಜಿಸಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲಾಗಿತ್ತು. ಇದೀಗ ಆ ನೆನಪುಗಳು ನನ್ನಲ್ಲಿ ಮೂಡುತ್ತಿವೆ. ಹಾಗಾಗಿ ಈ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲು ಕೂಡಲೇ ಸಮ್ಮತಿಸಿದೆ ಎಂದು ನುಡಿದರು.

ಪರಿಶ್ರಮವೇ ಯಶಸ್ಸಿನ ಕೀಲಿಕೈ: ಸ್ಪರ್ಧೆಗೆ ಚಾಲನೆ ನೀಡಿದ ವಿಶ್ರಾಂತ ಕುಲಪತಿಗಳೂ ಆದ ಶ್ರೀ ಕಾವೇರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿ, ನಾವಿಂದು ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಎಲ್ಲರೂ ಓಟದ ಯುಗದಲ್ಲಿ ಪರಸ್ಪರ ಮುಂದಿದ್ದೇವೆ. ಮೊಬೈಲ್ ಚಟಕ್ಕೆ ಒಳಗಾದವರ ನಡುವೆಯೂ ಅಗಾಧವಾಗಿ ಅಧ್ಯಯನ ನಡೆಸುವ, ಓದುವ ಹವ್ಯಾಸವುಳ್ಳ ಯುವ ಜನರೂ ಇದ್ದಾರೆ. 17ನೇ ಶತಮಾನದ ಪ್ರಸಿದ್ಧ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್ 'ಅಧ್ಯಯನ ಮತ್ತು ಓದು ಮನುಷ್ಯನನ್ನು ಪರಿಪೂರ್ಣಗೊಳಿಸುತ್ತದೆ' ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಓದುವ ಹವ್ಯಾಸದ ಮಹತ್ವ ಅರಿಯಬೇಕು ಎಂದು ತಿಳಿಸಿದರು.

ಸಾವಿರಕ್ಕೂ ಹೆಚ್ಚು ಆವಿಷ್ಕಾರಗಳನ್ನು ಮಾಡಿದ ಥಾಮಸ್ ಆಲ್ವಾ ಎಡಿಸನ್ ಅವರನ್ನು ಪತ್ರಕರ್ತನೊಬ್ಬ, 'ನಿಮ್ಮ ಯಶಸ್ಸಿನ ಗುಟ್ಟೇನು?' ಎಂದು ಪ್ರಶ್ನಿಸಿದ್ದ. ಅದಕ್ಕೆ ಅವರು, 'ಶೇ.1ರಷ್ಟು ಸ್ಫೂರ್ತಿ ಮತ್ತು ಉಳಿದೆಲ್ಲವೂ ಕಠಿಣ ಪರಿಶ್ರಮ' ಎಂದು ಉತ್ತರಿಸಿದ್ದರು. ಕಠಿಣ ಪರಿಶ್ರಮವೇ ಯಶಸ್ಸಿನ ಕೀಲಿ ಕೈ. ಈ ನಿಟ್ಟಿನಲ್ಲಿ 20ನೇ ಶತಮಾನದ ಮಹಾಪುರುಷರಲ್ಲಿ ಒಬ್ಬರಾದ ಕೊಡವ ಸಮುದಾಯದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರೂ ಆದರ್ಶವಾಗಿ ಕಾಣುತ್ತಾರೆ ಎಂದರು.



ಸ್ಪರ್ಧಿಗಳು

ನೀವು ಅಮೇರಿಕಾದ ಯಾವುದೇ ಹುಡುಗ ಅಥವಾ ಹುಡುಗಿಯನ್ನು ಮುಂದೆ ಏನಾಗಬೇಕೆಂದು ಕೇಳಿದರೆ ಅವರು ಅಮೇರಿಕಾದ ಅಧ್ಯಕ್ಷರಾಗಬೇಕೆಂದು ಉತ್ತರಿಸುತ್ತಾರೆ. ಈ ಸ್ಥಾನ ಒಂದೇ ಆದರೂ ಅವರಲ್ಲಿ ಇರುವ ಮಹತ್ವಾಕಾಂಕ್ಷೆಯನ್ನು ನಾವಿಲ್ಲಿ ಗಮನಿಸಬೇಕು. ಕಠಿಣ ಪರಿಶ್ರಮ, ಪ್ರೇರೇಪಣೆ ಇದ್ದರೆ ಸಾಧನೆ ಖಂಡಿತ ಸಾಧ್ಯವಾಗಲಿದೆ. ಓಬೆರಾಯ್, ಎನ್.ಆರ್.ನಾರಾಯಣಮೂರ್ತಿ, ಧೀರೂಬಾಯಿ ಅಂಬಾನಿ ಅವರ ಯಶಸ್ಸಿನ ಹಿಂದೆ ಕಠಿಣ ಪರಿಶ್ರಮವಿದೆ ಎಂದು ಹೇಳಿದರು.

ಸಿ.ರಾಜಗೋಪಾಲಾಚಾರಿ 'ಇಂಗ್ಲಿಷ್, ಭಾರತಕ್ಕೆ ಸರಸ್ವತಿಯ ಶ್ರೇಷ್ಠ ಕೊಡುಗೆಯಾಗಿದೆ' ಎಂದು ಹೇಳಿದ್ದಾರೆ. ಭಾರತೀಯರು ಭಾಷೆಗಳ ಕಲಿಕೆಯಲ್ಲಿ ಮುಂದಿದ್ದೇವೆ. ಆದರೆ ಕೆನಡಾ ಮತ್ತು ಅಮೇರಿಕದವರಿಗೆ ಗೊತ್ತಿರುವುದು ಒಂದೇ ಭಾಷೆ. ಇದು ಭಾಷೆಗಳ ಕಲಿಕೆಯಲ್ಲಿ ಭಾರತೀಯರ ವಿಶಿಷ್ಟ ಪಾಂಡಿತ್ಯವಾಗಿದೆ. ಇಂಗ್ಲಿಷ್ ಕಲಿಯಲು ಮೊದಲು ಅದನ್ನು ಮಾತನಾಡಲು ಪ್ರಾರಂಭಿಸಬೇಕು. ಆದರೆ ನಮ್ಮಲ್ಲಿ ಬಹುತೇಕ ಮಂದಿ ಪ್ರಯತ್ನವನ್ನೇ ಮಾಡುವುದಿಲ್ಲ ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಅಧ್ಯಕ್ಷ ಅರುಣ್ ಬೆಳವಾಡಿ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ಆರ್.ಗುರು, ರೋಟರಿ ಜಿಲ್ಲೆ 3181ರ ಜಿಲ್ಲಾ ಗೌರ್ನರ್ ಹೆಚ್.ಆರ್. ಕೇಶವ್, ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಶ್ರೀಮತಿ ರ್‍ಯಾಲಿ ಗಣಪತಿ, 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಮ್ ಮುತ್ತಣ್ಣ, ಸಂಪಾದಕ ಎಂ.ಗೋವಿಂದೇಗೌಡ, ರೋಟರಿ ಮೈಸೂರು ಉಪಾಧ್ಯಕ್ಷೆ ರೂಪಾ ವೆಂಕಟೇಶ್, ಸದಸ್ಯರಾದ ನಂಜರಾಜೇ ಅರಸ್ ಮತ್ತಿತರರು ಹಾಜರಿದ್ದರು.


ತ್ಯಾಜ್ಯ ಮರುಬಳಸಿ ಜನೋಪಯೋಗಿ ತಾಣ ರೂಪಿಸಿದ ವಿದ್ಯಾರ್ಥಿಗಳು!

ಮೈಸೂರು,ಸೆ.30(ಎಸ್‌ಬಿಡಿ)–ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ವಿದ್ಯಾರ್ಥಿಗಳು ತ್ಯಾಜ್ಯ ಹಾಗೂ ಮರುಬಳಕೆ ವಸ್ತುಗಳನ್ನು ಬಳಸಿ, ಜನೋಪಯೋಗಿ ನಿರ್ಮಾಣ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ನ್ಯಾಷನಲ್ ಅಸೋಸಿಯೇಷನ್ ಆಫ್ ಸ್ಟೂಡೆಂಟ್ಸ್ ಆಫ್ ಆರ್ಕಿಟೆಕ್ಚರ್(ನಾಸಾ) ವತಿಯಿಂದ ಆಯೋಜಿಸಲಾಗಿರುವ 66ನೇ ವಾರ್ಷಿಕ ನಾಸಾ ವಿನ್ಯಾಸ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಸ್ಪರ್ಧೆಯ ಥೀಮ್(reduce, reuse, recycle) ಅನುಸಾರವಾಗಿ ಮೈಸೂರಿನ ವಿಜಯನಗರ 3ನೇ ಹಂತದ ಉದ್ಯಾನವನದಲ್ಲಿ ತ್ಯಾಜ್ಯ ಮತ್ತು ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಬಳಸಿ ಕನಿಷ್ಠ 6 ಜನರಿಗೆ ಮೊಗಸಾಲೆ ಮತ್ತು ಪೀಠೋಪಕರಣಗಳನ್ನು ನಿರ್ಮಿಸಿದ್ದಾರೆ. ವಾಹನಗಳ ಟೈರ್, ಪ್ಲಾಸ್ಟಿಕ್, ಇಟ್ಟಿಗೆ ಚೂರು ಇನ್ನಿತರ ವಸ್ತುಗಳ ಬಳಸಿ ಗೆಜೆಬೋ (ತೆರೆದ ವಿಶ್ರಾಂತಿ ತಾಣ) ಮಾದರಿಯಲ್ಲಿ ನಿರ್ಮಿಸಿರುವುದು ಅತ್ಯಾಕರ್ಷಕವಾಗಿದೆ. ಇದಕ್ಕಾಗಿ ಅಧ್ಯಾಪಕರ ಮಾರ್ಗದರ್ಶನದಲ್ಲಿ ಸುಮಾರು 25 ವಿದ್ಯಾರ್ಥಿಗಳು 10 ದಿನ ಶ್ರಮಿಸಿದ್ದಾರೆ.



ವಿಜಯನಗರದಲ್ಲಿ ಸಿಕ್ಕಿಬಿದ್ದ ಸರಗಳ್ಳ



ಮೈಸೂರು, ಸೆ.30(ಎಸ್‌ಬಿಡಿ)– ಖದೀಮನೊಬ್ಬ ಮಹಿಳೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಲೆತ್ನಿಸಿ ಸಿಕ್ಕಿ ಬಿದ್ದಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ಶನಿವಾರ ಸಂಜೆ ನಡೆದಿದೆ. ವಿಜಯನಗರ 3ನೇ ಹಂತ, ಸಂಗಮ ವೃತ್ತ, ಎಸ್‌ಬಿಐ ಪಕ್ಕದ ರಸ್ತೆಯಲ್ಲಿ ಮಹಿಳೆಯೊಬ್ಬರು ಮಗುವಿನೊಂದಿಗೆ ದ್ವಿಚಕ್ರ ವಾಹನದ ಬಳಿ ನಿಂತಿದ್ದಾಗ ಸುಮಾರು 25 ವರ್ಷದ ಖದೀಮ ಏಕಾಏಕಿ ಚಿನ್ನದ ಸರ ಕಿತ್ತುಕೊಂಡು ಓಡಿದ್ದಾನೆ. ಮಹಿಳೆ ಕೂಗಿದ್ದರಿಂದ ಪಕ್ಕದಲ್ಲೇ ಹೋಗುತ್ತಿದ್ದ ಯುವಕ ಖದೀಮನ ಬೆನ್ನತ್ತಿ ಹಿಡಿದಿದ್ದಾನೆ. ಆದರೂ ಆತ ತಪ್ಪಿಸಿಕೊಳ್ಳಲು ಯತ್ನಿಸಿದನಾದರೂ ಅದೇ ವೇಳೆ ವಿಜಯಶ್ರೀಪುರದ ಕಡೆಯಿಂದ ಜೀಪ್‌ನಲ್ಲಿ ಬರುತ್ತಿದ್ದ ಜಯಲಕ್ಷ್ಮಿಪುರಂ ಇನ್‌ಸ್ಪೆಕ್ಟರ್ ಕುಮಾರ್, ಸಿಬ್ಬಂದಿ ದೇವರಾಜ್, ಭರತ್ ಹಾಗೂ ಚಾಲಕ ಸೇರಿ ಆತನನ್ನು ವಶಕ್ಕೆ ಪಡೆದಿದ್ದಾರೆ. ನಂತರ ಸರಹದ್ದಿನ ಆಧಾರದಲ್ಲಿ ಖದೀಮನನ್ನು ವಿಜಯನಗರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಈತ ಸಂಜೆ ಸುಮಾರು 7 ಗಂಟೆ ಸಮಯದಲ್ಲಿ ಪಕ್ಕದ ರಸ್ತೆಯಲ್ಲಿ ಬೈಕ್ ನಿಲ್ಲಿಸಿ, ಕಳ್ಳತನಕ್ಕೆ ಹೊಂಚು ಹಾಕಿದ್ದ. ವಾಕ್ ಮಾಡುವವನಂತೆ ನಟಿಸಿ ದ್ವಿಚಕ್ರ ವಾಹನದ ಪಕ್ಕದಲ್ಲಿ ಮಗುವಿನೊಂದಿಗೆ ನಿಂತಿದ್ದ ಮಹಿಳೆಯ ಸುಮಾರು 40 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಓಡಿ ಹೋಗಿ ಪಕ್ಕದ ರಸ್ತೆಯಲ್ಲಿದ್ದ ತನ್ನ ಬೈಕ್ ಏರುವಷ್ಟರಲ್ಲಿ ಸಿಕ್ಕಿ ಬಿದ್ದಿದ್ದಾನೆ ಎಂದು ತಿಳಿದುಬಂದಿದೆ. ಸದ್ಯ ವಿಜಯನಗರ ಪೊಲೀಸರು ವಿಚಾರಣೆ ಮುಂದುವರೆಸಿದ್ದು, ಖದೀಮನ ಬಗ್ಗೆ ಮಾಹಿತಿ ತಿಳಿಯಬೇಕಿದೆ.

ಮಹಾ ಮಳೆಗೆ ನಲುಗಿದ ನ್ಯೂಯಾರ್ಕ್

ಮೂರೇ ಮೂರು ಗಂಟೆಯ ಮಳೆಗೆ ತತ್ತರಿಸಿದ ಜನ



ನ್ಯೂಯಾರ್ಕ್, ಸೆ. 30– ಭಾರಿ ಮಳೆಯಿಂದಾಗಿ ಅಮೇರಿಕಾದ ಪ್ರಸಿದ್ಧ ನಗರ ನ್ಯೂಯಾರ್ಕ್ ನಗರ ಸಂಪೂರ್ಣವಾಗಿ ಜಲಾವೃತವಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಎಂದೂ ಕಂಡು ಕೇಳರಿಯದ ಮಹಾ ಮಳೆಗೆ ನ್ಯೂಯಾರ್ಕ್ ನಲುಗಿರುವ ಹಿನ್ನೆಲೆಯಲ್ಲಿ ಅಲ್ಲಿನ ಮೇಯರ್ ತುರ್ತು ಪರಿಸ್ಥಿತಿ ಘೋಷಿಸಿದ್ದು, ನಾಗರಿಕರು ಮನೆಯಿಂದ ಹೊರ ಬರಬಾರದೆಂದು ಸೂಚಿಸಿದ್ದಾರೆ.

ಅಲ್ಲಿನ ಕಾಲಮಾನ ಶುಕ್ರವಾರ ರಾತ್ರಿ 9.50ಕ್ಕೆ ಆರಂಭವಾದ ಮಳೆ 3 ಗಂಟೆಗಳ ಕಾಲ ರಣಭೀಕರವಾಗಿ ಸುರಿದಿದ್ದು, 220 ಮಿಲಿಮೀಟರ್ ಮಳೆಯಾಗಿದೆ. ಇದರ ಪರಿಣಾಮವಾಗಿ ನ್ಯೂಯಾರ್ಕ್ ರಸ್ತೆಗಳಲ್ಲಿ ನದಿಯಂತೆ ನೀರು ಹರಿದು ಹಲವಾರು ವಾಹನಗಳು ಮುಳುಗಿವೆ. ನ್ಯೂಯಾರ್ಕ್‌ನ ರೈಲ್ವೆ ನಿಲ್ದಾಣ ಜಲಾವೃತವಾಗಿದ್ದು, ಅಂಡರ್‌ಪಾಸ್‌ಗಳು ನೀರಿನಲ್ಲಿ ಮುಳುಗಿವೆ. ಪ್ರಸಿದ್ಧ ಅಪಾರ್ಟ್‌ಮೆಂಟ್‌ಗಳ ನೆಲಮಹಡಿಗಳು ಮುಳುಗಡೆಯಾಗಿದ್ದು, ಅಲ್ಲಿ ವಾಸಿಸುತ್ತಿದ್ದ ಲಕ್ಷಕ್ಕೂ ಹೆಚ್ಚು ಮಂದಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವರದಿಗಳು ತಿಳಿಸಿವೆ.

ಭೀಕರ ಮಳೆಯ ನಡುವೆಯೂ ರಸ್ತೆಗಳಲ್ಲಿ ಬೆಂಕಿ ಜ್ವಾಲೆ ಕಾಣಿಸಿಕೊಂಡಿದೆ. ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಒಂದು ತಿಂಗಳ ಮಳೆ ಕೇವಲ ಮೂರು ಗಂಟೆ ಕಾಲದಲ್ಲೇ ಸುರಿದಿದೆ ಎಂದು ಹೇಳಲಾಗುತ್ತಿದ್ದು, ಸ್ಥಳೀಯ ಆಡಳಿತವು ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆಯಾದರೂ, ಪ್ರವಾಹದೋಪಾದಿಯಲ್ಲಿ ನೀರು ಹರಿಯುತ್ತಿದ್ದರಿಂದ ಪರಿಹಾರ ಕಾರ್ಯಕ್ಕೆ ಅಡಚಣೆ ಉಂಟಾಗಿತ್ತು. ಅಲ್ಲಿನ ಕಾಲಮಾನ ಶನಿವಾರ ಬೆಳಗ್ಗೆ ವೇಳೆಗೆ ಪ್ರವಾಹ ಪರಿಸ್ಥಿತಿ ಕಡಿಮೆಯಾಗಿದೆ. ಆದರೆ, ಅಪಾರ್ಟ್‌ಮೆಂಟ್‌ಗಳ ನೆಲಮಹಡಿಗಳಲ್ಲಿ ನೀರು ನಿಂತಿದ್ದು, ಅಲ್ಲಿ ವಾಸವಿದ್ದ ನಿವಾಸಿಗಳ ರಕ್ಷಣಾ ಕಾರ್ಯ ನಡೆಯುತ್ತಿದೆ. ಅಂಡರ್ ಪಾಸ್‌ಗಳು ಮುಳುಗಿರುವುದರಿಂದ ವಾಹನ ಸಂಚಾರ ಸ್ಥಗಿತಗೊಂಡಿದೆ. ಮಳೆ ವೇಳೆ ಮುಳುಗಡೆಯಾಗಿದ್ದ ವಾಹನಗಳ ರಕ್ಷಣಾ ಕಾರ್ಯವು ನಡೆಯುತ್ತಿದೆ ಎಂದು ವರದಿಗಳು ತಿಳಿಸಿವೆ.

ಮೈಸೂರು ಮಿತ್ರ ಭಾನುವಾರ 1 ಅಕ್ಟೋಬರ್ 2023

ನಕ್ಕರೆ ಅದೇ ಸ್ವರ್ಗ

ಸುಬ್ಬಕ್ಕ : "ಈಗಿನ ಕಾಲದ ಮಕ್ಕಳು ಅಜ್ಜಿ ಮನೆಗೆ ಹೋಗೋದು ಕಡಿಮೆ ಅಲ್ವಾ?"
ಗುಂಡಮ್ಮ: ಹೌದು ಸುಬ್ಬಕ್ಕ, ಮೊದಲೆಲ್ಲಾ ಮಕ್ಕಳು ಅಜ್ಜಿ ಮನೇಲಿ ಹುಟ್ಟುತ್ತಿದ್ದರು. ಅದಕ್ಕೆ ಪದೇ ಪದೆ ಅಜ್ಜಿ ಮನೆಗೆ ಹೋಗ್ತಿದ್ರು, ಈಗಿನ ಮಕ್ಕಳು ಆಸ್ಪತ್ರೆಯಲ್ಲಿ ಹುಟ್ತಾರೆ ಅದಕ್ಕೆ ಪದೇ ಪದೆ ಆಸ್ಪತ್ರೆಗೆ ಹೋಗ್ತಾರೆ!"

ಮೈಸೂರು ಮಿತ್ರ
ಭಾನುವಾರ, 1 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತನಗೂ ಒಂದು ದಿನ ಸಾವಿದೆ ಎಂದು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ನಿಮ್ಮ ಪತ್ರಗಳು

ಮೈಸೂರು–ಚಾ.ನಗರ ಮಾರ್ಗಕ್ಕೆ ಹೆಚ್ಚಿನ ರೈಲುಗಳು ಸಂಚರಿಸಲಿ

ಮಾನ್ಯರೆ,

ಮೈಸೂರು–ಚಾಮರಾಜನಗರ ಮಾರ್ಗ ರೈಲು ಸೌಲಭ್ಯವಿದ್ದು, ಹೆಚ್ಚಿನ ಪ್ರಯಾಣಿಕರು ರೈಲು ಸೌಲಭ್ಯವನ್ನು ಅವಲಂಬಿಸಿದ್ದಾರೆ. ಆದರೆ ಕೆಲವು ಸಮಯದಲ್ಲಿ ರೈಲು ಸಂಚಾರ ಇಲ್ಲದೆ ಬಸ್ ಅನ್ನು ಅವಲಂಬಿಸುವಂತಾಗಿದೆ.

ತಮಿಳುನಾಡಿನ ಕೊಯಮತ್ತೂರು ಹತ್ತಿರವಿದ್ದು, ಈ ಪ್ರದೇಶದಲ್ಲಿ ಕೈಗಾರಿಕೆ ಹೆಚ್ಚಾಗಿದೆ. ಮೈಸೂರಿನ ಮೂಲಕ ಬೆಂಗಳೂರು ಸೇರಿ ಮತ್ತಿತರ ಪ್ರದೇಶಗಳಿಗೆ ತೆರಳುವುದಕ್ಕೆ, ವ್ಯಾಪಾರ ವಹಿವಾಟು ನಡೆಸುವುದಕ್ಕೆ ಮತ್ತು ಚಾಮರಾಜನಗರದಿಂದ ಕೇರಳವು ಗುಂಡ್ಲುಪೇಟೆ ಮಾರ್ಗ ಹತ್ತಿರವಿದೆ. ಆದ್ದರಿಂದ ಈ ಭಾಗದ ಜನರು ಹೆಚ್ಚಾಗಿ ರೈಲನ್ನು ಅವಲಂಬಿಸಿದ್ದಾರೆ. ಕೆಲವು ರೈಲುಗಾಡಿಗಳು ಬೆಳಗಿನ ಸಮಯದಲ್ಲಿ ಮೈಸೂರಿಗೆ ತಲುಪಿ ಸಂಜೆ ಮತ್ತು ರಾತ್ರಿಯವರೆಗೆ ಅಲ್ಲಿ ನಿಂತು ಆನಂತರ ಹೊರಡುತ್ತದೆ. ಆದ್ದರಿಂದ ಅಂತಹ ರೈಲುಗಳನ್ನು ಚಾಮರಾಜನಗರಕ್ಕೆ ವಿಸ್ತರಿಸುವ ಮೂಲಕ ಈ ಭಾಗದ ಸಾರ್ವಜನಿಕರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರ ವಹಿವಾಟು ಮಾಡಲು ಅನುಕೂಲವಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟ ಭಾರತೀಯ ರೈಲ್ವೆ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಸಂಸದರು, ಶಾಸಕರು ಯೋಚಿಸಿ ಈ ಮಾರ್ಗದ ರೈಲು ಸೇವೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಚಿಂತಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಕರುನಾಡ ಕಾವೇರಿ ಕಂದಮ್ಮಗಳ ಗೋಳು, ಅಳಲು

ಮಾನ್ಯರೆ,

ಶುಕ್ರವಾರ ನಡೆದ ಕರ್ನಾಟಕ ಬಂದ್‌ನಿಂದ ರಾಜ್ಯಾದ್ಯಂತ ರಸ್ತೆ ಸಂಚಾರ ಮತ್ತು ಜನ ಸಂಚಾರ ನಿಂತಿತೇ ಹೊರತು ಕಾವೇರಿಯ ಸಂಚಾರ ಸ್ಥಗಿತವಾಗಲಿಲ್ಲ.

ಈ ಕಾನೂನು ಹೋರಾಟ ಕಟಕಟೆಯಲ್ಲಿ ಆಗಬೇಕೇ ಹೊರತು ರಸ್ತೆಯಲ್ಲಿ ಹೋರಾಟದಿಂದ ಏನೂ ಪ್ರಯೋಜನವಿಲ್ಲವೆಂಬುದು ಮತ್ತೊಮ್ಮೆ ಸಾಬೀತಾಯಿತು.

ನೀರಿನ ನಷ್ಟ, ವ್ಯಾಪಾರ ವಹಿವಾಟು ನಷ್ಟ, ಆರ್ಥಿಕ ನಷ್ಟ ಆಯಿತು ಅಷ್ಟೇ ಹೊರತು ಮತ್ತೇನು ಅನುಕೂಲವಾಗಲಿಲ್ಲ. ನಮಗೆ ಬುದ್ಧಿ ಬಂದಾಗಿನಿಂದಲೂ ನೋಡ್ತಿದೀವಿ ಮುಂದೆ ನಮ್ಮ ಮಕ್ಕಳು, ಮೊಮ್ಮಕ್ಕಳು ಇದನ್ನೇ ನೋಡ್ಬೇಕಾ? ಇದಕ್ಕೆ ಶಾಶ್ವತ ಪರಿಹಾರವೇ ಇಲ್ವಾ?

ಕಾಶ್ಮೀರದಲ್ಲಿ ಆರ್ಟಿಕಲ್ 360 ಜಾರಿ ಆದ ಹಾಗೇ, ಕಾವೇರಿ ಸಮಸ್ಯೆಯನ್ನು ರಾಜ್ಯದ ಸಂಸದರ ನಿಯೋಗದೊಡನೆ ಪ್ರಧಾನಮಂತ್ರಿಗಳಿಗೆ ಒತ್ತಡ ಹೇರಿ ಅವರ ಮಧ್ಯಸ್ಥಿಕೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹಾಗೂ ನೆರೆ ರಾಜ್ಯದ ನಿಯೋಗಕ್ಕೆ ವಾಸ್ತವ ಅಂಶ ಅರ್ಥೈಸುವ ಮುಖೇನ ಏಕೆ ಬಗೆಹರಿಸಬಾರದು? ಇದು ಚುನಾಯಿತ ಪ್ರತಿನಿಧಿಗಳ ಕರ್ತವ್ಯವಲ್ಲವೇ? ಇದಕ್ಕೆ ಸಾಂಘಿಕ ಹೋರಾಟದ ಅಗತ್ಯವಿದೆ. ಇನ್ನಾದರೂ ನಮ್ಮ ಜನಪ್ರತಿನಿಧಿಗಳು ಪಕ್ಷಭೇದ ಬದಿಗೊತ್ತಿ ಎಚ್ಚೆತ್ತುಕೊಂಡು ಸಂಘಟಿತರಾಗಿ ಮತದಾರರಿಗೆ ಮತ್ತು ಕರುನಾಡಿಗೆ ನ್ಯಾಯ ಒದಗಿಸಿಕೊಡಲಿ..

ನಮ್ಮ ರೈತರ ಬೆಳೆಗಳಿಗೆ ನೀರಿನ ಸಮಸ್ಯೆ ಇರುವಾಗ, ನಾಗರಿಕರಿಗೆ ಕುಡಿಯಲು ನೀರಿನ ಸಮಸ್ಯೆ ಎದುರಾಗುವಾಗ ಇನ್ನು ನೆರೆ ರಾಜ್ಯಕ್ಕೆ ಎಲ್ಲಿಂದ? ಇದೊಂದು ಬಗೆಹರಿಸೋಕಾಗ್ತಿರೋ ಸಮಸ್ಯೆನಾ?

ನಮ್ದೇ ಮನೆ, ನಮ್ದೇ ಅಡುಗೆ ಹಂಚಿ ತಿನ್ನೋಕ್ಕೆ ನಮಗೆ ಕೊರತೆ ಇದ್ದಾಗ, ಇಷ್ಟೇ ಕೊಡಿ, ಅಷ್ಟೇ ಕೊಡಿ ಅಂತ ಯಾಕೀ ತೀರ್ಮಾನ? ಅವರಿಗೂ ಸಹ ಮೆಟ್ಟೂರು ಜಲಾಶಯ ಇದೆ. ಮಳೆ ಬಂದಾಗ ಶೇಖರಿಸಿ ಇಟ್ಟುಕೊಂಡು ಸೂಕ್ತ ಸಮಯದಲ್ಲಿ ಬಳಕೆ ಮಾಡಿಕೊಳ್ಳಲಿ ಬಿಡಿ. ಕಾವೇರಿ ಜಲ ವಿವಾದ ಬಂದಾಗಲೆಲ್ಲ ನಮ್ಮ ಕರುನಾಡಿಗೆ ಆಗುತ್ತಿರುವ ಅನ್ಯಾಯವನ್ನು ಇನ್ನು ಮುಂದಾದರೂ ಆಗದಂತೆ ಆಶಿಸೋಣ.

–ಎಂ. ಎನ್. ತುಕಾರಾಮ್ ರಾವ್,
ಪ್ರಜ್ಞಾವಂತ ನಾಗರಿಕ ಬಳಗ, ವಿ.ವಿ ಮೊಹಲ್ಲಾ ಮೈಸೂರು.

ರಸ್ತೆ ಮಟ್ಟದಲ್ಲಿ ಮ್ಯಾನ್‌ಹೋಲ್ ದುರಸ್ತಿಗೊಳಿಸಿ



ಮಾನ್ಯರೇ,

ಮೈಸೂರಿನ ಮಾತೃಮಂಡಳಿ ವೃತ್ತ ಬಳಿ ಇರುವ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದ ಹಿಂಭಾಗದ ರಸ್ತೆಯ ಮಧ್ಯ ಭಾಗದಲ್ಲಿ ಇರುವ ಮ್ಯಾನ್‌ಹೋಲ್, ರಸ್ತೆಗಿಂತ ಸುಮಾರು ಅರ್ಧ ಅಡಿ ಎತ್ತರದಲ್ಲಿದೆ. ಹೀಗಾಗಿ, ಇಲ್ಲಿ ಓಡಾಡುವ ವಾಹನ ಚಾಲಕರಿಗೆ ಇದು ತಲೆನೋವಾಗಿ ಪರಿಣಮಿಸಿದ್ದು, ಸಣ್ಣ–ಪುಟ್ಟ ಅಪಘಾತಗಳೂ ಆಗಿವೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ಮ್ಯಾನ್‌ಹೋಲ್ ಅನ್ನು ರಸ್ತೆಗೆ ಸಮತಟ್ಟಾಗಿ ಇರುವಂತೆ ದುರಸ್ತಿಗೊಳಿಸಿ, ಆಗಬಹುದಾದ ಅನಾಹುತಗಳನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸೊಳ್ಳೆ ತಾಣಗಳ ನಿರ್ಮೂಲನೆಯೇ ಡೆಂಗ್ಯೂ ನಿಯಂತ್ರಣಕ್ಕೆ ಏಕೈಕ ಮಾರ್ಗ



"ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಡೆಂಗ್ಯೂ ಜ್ವರದ ಪ್ರಕರಣಗಳಿಗೆ ಈಡೀಸ್ ಈಜಿಪ್ಟೈ ಸೊಳ್ಳೆಗಳು ಹೆಚ್ಚಾಗಿ ಕಾರಣವಾಗಿವೆ. ಈಡೀಸ್ ಅಲ್ಬಾಫೀಕ್ಟಸ್ ಸೊಳ್ಳೆಗಳು ಮೂಲತಃ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿದ್ದು ಇವು ಇತ್ತೀಚೆಗೆ ನಗರ ಪ್ರದೇಶದ ವಾಸಕ್ಕೆ ಹೊಂದಿಕೊಂಡಿವೆ. ನಗರ ಪ್ರದೇಶದಲ್ಲಿನ ಜನರಿಗೆ ಬರುವ ಡೆಂಗ್ಯೂ ಜ್ವರದ ಪ್ರಕರಣಕ್ಕೆ ಕಾರಣವಾಗಿವೆ. ಒಟ್ಟಾರೆ ಸಾರ್ವಜನಿಕರು ವಾಸಿಸುವ ಪ್ರದೇಶಗಳಲ್ಲಿ ಈಡೀಸ್ ಕುಲದ ಸೊಳ್ಳೆಗಳ ಸಂತಾನೋತ್ಪತ್ತಿಯ ತಾಣಗಳನ್ನು ಗುರುತಿಸಿ ನಿರ್ಮೂಲನೆ ಮಾಡುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದು.

ಎನ್.ಪ್ರಸಾದ್
ಆರೋಗ್ಯ ಇಲಾಖೆ, ಚಾಮರಾಜನಗರ.



ಮನುಷ್ಯನಿಗೆ ಮಲೇರಿಯಾದಂತೆ ಸೊಳ್ಳೆಗಳಿಂದ ಹರಡುವ ಅತ್ಯಂತ ಮಾರಕ ಮತ್ತೊಂದು ಕಾಯಿಲೆ ಎಂದರೆ ಅದು ಡೆಂಗ್ಯೂ ಜ್ವರ. ಇಂತಹ ಕಾಯಿಲೆ ಉಂಟು ಮಾಡುವ ಸೊಳ್ಳೆಗಳು ಪ್ರಪಂಚದ ಉಷ್ಣ ವಲಯ ಮತ್ತು ಉಪ ಉಷ್ಣವಲಯ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ವಿಶ್ವದಾದ್ಯಂತ ಲಕ್ಷಾಂತರ ಮಂದಿ ಪ್ರತಿ ವರ್ಷ ಡೆಂಗ್ಯೂ ಜ್ವರದ ಸೋಂಕಿಗೆ ಗುರಿಯಾಗುತ್ತಿದ್ದಾರೆ.

ಡೆಂಗ್ಯೂ ತಡೆಗಟ್ಟಲು ಸಂಶೋಧಕರು ಡೆಂಗ್ಯೂ ಜ್ವರದ ಲಸಿಕೆ ತಯಾರಿಯಲ್ಲಿ ನಿರತರಾಗಿದ್ದರೆ, ಈಗಿನ ಸನ್ನಿವೇಶ ನೋಡಿದರೆ ಡೆಂಗ್ಯೂ ರೋಗದ ತುರ್ತು ನಿಯಂತ್ರಣಕ್ಕಾಗಿ ಸಾಧ್ಯವಾದಷ್ಟು ಸೊಳ್ಳೆಗಳ ಸಂತತಿಯನ್ನು ಕಡಿಮೆ ಮಾಡುವುದೊಂದೇ ಇದಕ್ಕಿರುವ ಪರಿಹಾರ ಮಾರ್ಗವಾಗಿದೆ. ಇತ್ತೀಚಿನ ದಶಕಗಳಲ್ಲಿ ಡೆಂಗ್ಯೂ ಜ್ವರ ಸೋಂಕಿತ ಪ್ರಕರಣಗಳು ಜಾಗತಿಕ ಮಟ್ಟದಲ್ಲಿ ಏರುಗತಿಯಲ್ಲಿ ಬೆಳವಣಿಗೆಯಾಗುತ್ತಿವೆ. ಅಂದರೆ ಪ್ರಪಂಚದ ಶೇ.50ರಷ್ಟು ಜನರು ಪ್ರತಿ ವರ್ಷ ಡೆಂಗ್ಯೂ ಸೋಂಕಿತರಾಗುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳು ತಿಳಿಸುತ್ತಿವೆ. ಆ ಕಾರಣದಿಂದಲೇ ಈ ಕಾಯಿಲೆಯನ್ನು ಭಾರತ ದೇಶದಲ್ಲಿ ಸಾಂಕ್ರಾಮಿಕ ರೋಗ (ಎಪಿಡೆಮಿಕ್ ಡಿಸೀಸ್) ಕಾಯ್ದೆಯಡಿಯಲ್ಲಿ ನೋಟಿಫೈಯಬಲ್ ಡಿಸೀಸ್ ಪಟ್ಟಿಯಲ್ಲಿ ಸೇರಿಸಲಾಗಿದೆ.

ಡೆಂಗ್ಯೂ ಜ್ವರಕ್ಕೆ ಕಾರಣವಾಗಿರುವುದು ರೋಗ ಕಾರಕ **ಫ್ಲೇವಿ ವೈರಸ್**. ಒಂದು ವೇಳೆ ಡೆಂಗ್ಯೂ ಜ್ವರವನ್ನು ನಿರ್ಲಕ್ಷಿಸಿದರೆ ಮಾರಣಾಂತಿಕವಾಗುವುದರಲ್ಲಿ ಯಾವ ಸಂದೇಹವಿಲ್ಲ. ಡೆಂಗ್ಯೂ ಜ್ವರವು ಈಡೀಸ್ ಈಜಿಪ್ಟೈ ಮತ್ತು ಈಡೀಸ್ ಅಲ್ಬಾಪೀಕ್ಟಸ್ ಸೊಳ್ಳೆಗಳಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗವಾಗಿದೆ.

ಈ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದಾದ ಸಾಂಕ್ರಾಮಿಕ ರೋಗಗಳ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಮನುಷ್ಯನಿಗೆ ಇಂತಹ ಜ್ವರವು ಮೊದಲನೇ ಬಾರಿಗೆ ಕಾಣಿಸಿಕೊಂಡಾಗ ಪ್ರಥಮ ಡೆಂಗ್ಯೂ ಸೋಂಕಿತ ವ್ಯಕ್ತಿ ಎಂದು ಕರೆಯುತ್ತೇವೆ. ಮೊದಲನೇ ಬಾರಿ ಸೋಂಕು ಉಂಟು ಮಾಡಿದ ಡೆಂಗ್ಯೂ ವೈರಸ್ ತಳಿಯನ್ನು ಹೊರತುಪಡಿಸಿ ಉಳಿಕೆಯ ಮೂರು ತಳಿಗಳಲ್ಲಿ ಯಾವುದಾದರೂ ತಳಿಗಳಿಂದ ಅಥವಾ ಮೊದಲನೇ ಬಾರಿ ಸೋಂಕು ಉಂಟು ಮಾಡಿದ್ದ ತಳಿಯಿಂದ ಅದೇ ವ್ಯಕ್ತಿಗೆ ಪುನಃ ಡೆಂಗ್ಯೂ ಜ್ವರ ಬಂದರೆ ದ್ವಿತೀಯ ಡೆಂಗ್ಯೂ ಜ್ವರ ಸೋಂಕಿತ ವ್ಯಕ್ತಿ ಎಂದು ಕರೆಯುತ್ತೇವೆ, ದ್ವಿತೀಯ ಡೆಂಗ್ಯೂ ಜ್ವರ ಸೋಂಕಿತ ವ್ಯಕ್ತಿ ಅತ್ಯಂತ ಅಪಾಯದಲ್ಲಿ ಇರುತ್ತಾರೆ. ಇಂತಹ ಸಂದರ್ಭಗಳಲ್ಲಿ ಕಿರುಬಿಲ್ಲೆ(ಪ್ಲೇಟ್ ಲೇಟ್ಸ್)ಗಳ ಸಂಖ್ಯೆ ಕಡಿಮೆಯಾಗಿ ಮನುಷ್ಯನಲ್ಲಿ ರಕ್ತಸ್ರಾವ ಉಂಟಾಗಿ ಸಾವು ಸಂಭವಿಸಬಹುದಾದ ಸಾಧ್ಯತೆ ಹೆಚ್ಚಾಗಿರುತ್ತದೆ.

ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ವರದಿಯಾಗುತ್ತಿರುವ ಸೋಂಕಿತ ಡೆಂಗ್ಯೂ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಾಗಿ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ನಗರ ಪ್ರದೇಶಗಳಲ್ಲಿ ಡೆಂಗ್ಯೂ ಜ್ವರ ಪ್ರಕರಣಗಳು ಹೆಚ್ಚಾಗಲು ಈಡೀಸ್ ಅಲ್ಬಾಫೀಕ್ಟಸ್ ಸೊಳ್ಳೆ ಹೆಚ್ಚಾಗಿ ಕಾರಣವಾಗಿದೆ. ನಗರ ಪ್ರದೇಶಗಳಲ್ಲಿ ಸ್ವಚ್ಛತೆ ಮರೀಚಿಕೆಯಾಗಿರುವುದೇ ಅಲ್ಬಾಫೀಕ್ಟಸ್ ಸೊಳ್ಳೆಗಳ ಸಂತಾನೋತ್ಪತ್ತಿ ಹೆಚ್ಚಲು ಕಾರಣವಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನದಂತೆ ಪೂರ್ವ ಮುಂಗಾರು ಪ್ರತಿ ವರ್ಷ ಡೆಂಗ್ಯೂ ಜ್ವರ ವಿರೋಧಿ ಮಾಸಾಚರಣೆಯಾಗಿ ಆರೋಗ್ಯ ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಮತ್ತು ಈಡೀಸ್ ಕುಲದ ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಡೆಂಗ್ಯೂ ಜ್ವರದ ಸೋಂಕು ಹರಡಲು ರೋಗ ಕಾರಕ, ರೋಗವಾಹಕ ಮತ್ತು ರೋಗವಾಹಕ ಉತ್ಪತ್ತಿ ತಾಣಗಳು ಇವು ತ್ರಿಕೋನವಾಗಿ ಒಂದಕ್ಕೊಂದು ಪೂರಕವಾಗಿ ಡೆಂಗ್ಯೂ ಬೆಳವಣಿಗೆಗೆ ಕಾರಣವಾಗುತ್ತವೆ. ಪ್ರಮುಖವಾಗಿ ರೋಗವಾಹಕ ಉತ್ಪತ್ತಿ ತಾಣಗಳನ್ನು ಗುರುತಿಸಿ ನಿರ್ಮೂಲನೆ ಮಾಡಿದರೆ ಮಾತ್ರವೇ ಡೆಂಗ್ಯೂ ಜ್ವರವನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿ ಇಡಬಹುದು.

ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಡೆಂಗ್ಯೂ ಜ್ವರದ ಪ್ರಕರಣಗಳಿಗೆ ಈಡೀಸ್ ಈಜಿಪ್ಟೈ ಸೊಳ್ಳೆಗಳು ಹೆಚ್ಚಾಗಿ ಕಾರಣವಾಗಿವೆ. ಈಡೀಸ್ ಅಲ್ಬಾಫೀಕ್ಟಸ್ ಸೊಳ್ಳೆಗಳು ಮೂಲತಃ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿದ್ದು ಇವು ಇತ್ತೀಚೆಗೆ ನಗರ ಪ್ರದೇಶಕ್ಕೂ ಹೊಂದಿಕೊಂಡಿವೆ. ನಗರ ಪ್ರದೇಶದಲ್ಲಿನ ಜನರಿಗೆ ಬರುವ ಡೆಂಗ್ಯೂ ಜ್ವರದ ಪ್ರಕರಣಕ್ಕೆ ಕಾರಣವಾಗಿವೆ. ಒಟ್ಟಾರೆ ಸಾರ್ವಜನಿಕರು ವಾಸಿಸುವ ಪ್ರದೇಶಗಳಲ್ಲಿ ಈಡೀಸ್ ಸೊಳ್ಳೆಗಳ ಸಂತಾನೋತ್ಪತ್ತಿಯ ತಾಣಗಳನ್ನು ಗುರುತಿಸಿ ನಿರ್ಮೂಲನೆ ಮಾಡುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದು.

ಇನ್ನೂ ಡೆಂಗ್ಯೂ ಜ್ವರದ ರೋಗ ಲಕ್ಷಣಗಳಾದ ತೀವ್ರವಾದ ಜ್ವರ, ತಲೆಯ ಹಣೆ ಭಾಗದ ವಿಪರೀತ ನೋವು, ಮೂಳೆ ಮುರಿತ ನೋವು, ಕೀಲು ನೋವು, ಕಣ್ಣಿನ ಗುಡ್ಡೆಯ ವಿಪರೀತ ನೋವು. ಹೀಗೆ ನೋವು, ಜ್ವರದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ರಕ್ತ ಪರೀಕ್ಷೆ ಮಾಡಿಸಿ ಡೆಂಗ್ಯೂ ಜ್ವರವೆಂದು ದೃಢಪಟ್ಟರೆ ಹತ್ತಿರದ ಆಶಾ ಕಾರ್ಯಕರ್ತೆ, ಆರೋಗ್ಯ ಸಹಾಯಕಿ ಅಥವಾ ವೈದ್ಯರ ಸಲಹೆಯಂತೆ ಪಥ್ಯಾಹಾರ ಹಾಗೂ ಔಷಧೋಪಚಾರಗಳನ್ನು ಅನುಸರಿಸುವುದರ ಮೂಲಕ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದು.

ಸೊಳ್ಳೆಗಳ ಕುರಿತು ಸಾಮಾನ್ಯ ಮಾಹಿತಿ:

ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಲು ಮುಖ್ಯವಾಗಿ ಸೊಳ್ಳೆಗಳ ಜೀವನ ಚಕ್ರ, ಬೆಳವಣಿಗೆ ಆಹಾರ ಪದ್ಧತಿ, ಸಂತಾನೋತ್ಪತ್ತಿ ಮುಂತಾದ ಕುರಿತು ಮಾಹಿತಿ ತಿಳಿದುಕೊಳ್ಳುವುದು ಅಗತ್ಯ. ವಿಶ್ವದಾದ್ಯಂತ 3565 ಜಾತಿಯ (Species) ಸೊಳ್ಳೆಗಳ ಕಂಡುಹಿಡಿಯಲಾಗಿದ್ದು, ಎಲ್ಲಾ ಜಾತಿಯ ಸೊಳ್ಳೆಗಳು ಸರಿ ಸುಮಾರು 42–56 ದಿನಗಳು ಜೀವಿತಾವಧಿಯನ್ನು ಹೊಂದಿರುತ್ತವೆ. ಎಲ್ಲಾ ಜಾತಿಯ ಸೊಳ್ಳೆಗಳು ಜೀವಿತಾವಧಿಯಲ್ಲಿ ಮೊಟ್ಟೆ–ಲಾರ್ವಾ–ಪ್ಯೂಪ ಹಾಗೂ ಪ್ರೌಢಾವಸ್ಥೆ ಹೀಗೆ ನಾಲ್ಕು ಹಂತಗಳನ್ನು ಪೂರೈಸುತ್ತವೆ. ಪ್ರೌಢಾವಸ್ಥೆಯಲ್ಲಿ ಗಂಡು ಮತ್ತು ಹೆಣ್ಣು ಸೊಳ್ಳೆಗಳು ಪರಸ್ಪರ ಮಿಲನ ಹೊಂದಿದ ಸಮಯದಲ್ಲಿ ಹೆಣ್ಣು ಸೊಳ್ಳೆಗಳು ಮೊಟ್ಟೆಗಳ ಉತ್ಪಾದನೆಗಾಗಿ ಪ್ರೋಟೀನ್ ಅವಶ್ಯಕತೆಗಾಗಿ ಮನುಷ್ಯರು ಅಥವಾ ಪ್ರಾಣಿಗಳಿಂದ ರಕ್ತ ಹೀರುತ್ತವೆ. ಪ್ರೋಟೀನ್, ಮೊಟ್ಟೆಗಳ ಉತ್ಪಾದನೆಗೆ ಹಾಗೂ ಬೆಳವಣಿಗೆಗೆ ಅವಶ್ಯವಾಗಿರುತ್ತದೆ.

ಗಂಡು ಪ್ರೌಢಾವಸ್ಥೆ ಸೊಳ್ಳೆಯು ಹಸಿರು ಎಲೆಯ ರಸವನ್ನು, ಹೂವಿನ ಮಕರಂದವನ್ನು ಹೀರಿಕೊಂಡು ಹೆಣ್ಣು ಸೊಳ್ಳೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಂಡು ಜೀವಿತಾವಧಿಯನ್ನು ಪೂರ್ಣಗೊಳಿಸುತ್ತವೆ. ಗಂಡು ಸೊಳ್ಳೆಗಳಿಗೆ ಮನುಷ್ಯ ಅಥವಾ ಪ್ರಾಣಿಗಳ ದೇಹದಿಂದ ರಕ್ತ ಹೀರುವಷ್ಟು ಅವುಗಳ ಬಾಯಿಯ ಅಂಗಗಳು ರಚನೆಗೊಂಡಿರುವುದಿಲ್ಲ. ಆದ್ದರಿಂದ ಹೆಣ್ಣು ಸೊಳ್ಳೆಯು ಸಂತಾನೋತ್ಪತ್ತಿಯ ಸಮಯದಲ್ಲಿ ಮೊಟ್ಟೆಗಳ ಉತ್ಪಾದನೆಗಾಗಿ ಪ್ರೋಟಿನ್ ಅಂಶವನ್ನು ಮನುಷ್ಯ ಅಥವಾ ಪ್ರಾಣಿಗಳ ರಕ್ತವನ್ನು ಹೀರುವ ಮೂಲಕ ಪಡೆಯುತ್ತವೆ. ನಂತರ ಮೊಟ್ಟೆಗಳನ್ನು ನೀರು ಸಂಗ್ರಹವಾಗಿರುವ ತಾಣದಲ್ಲಿನ ನೀರಿನ ಮೇಲ್ಮೈ ಸ್ಥಳದಲ್ಲಿ ಇಡುತ್ತವೆ. ಹಾಗಾಗಿ ಮನೆಯ ಒಳಾಂಗಣದಲ್ಲಿರುವ ತೊಟ್ಟಿಗಳು, ನೀರಿನ ಡ್ರಂಗಳು, ಸಿಮೆಂಟು ತೊಟ್ಟಿಗಳು, ಬಕೆಟ್‌ಗಳು, ಮಡಿಕೆಗಳು, ಏರ್ ಕೂಲರ್‌ಗಳು, ಫ್ರಿಜ್ ಕೆಳಗೆ ಸಂಗ್ರಹವಾಗುವ ನೀರು, ಆಲಂಕಾರಿಕ ಸಸ್ಯಗಳ ಕುಂಡಗಳು ಇನ್ನು ಮುಂತಾದ ಜಾಗಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಹೊರಾಂಗಣದಲ್ಲಾದರೆ ಮರದ ಪೊಟರೆಗಳಲ್ಲಿ, ಬಿದಿರು ಗಿಡಗಳಲ್ಲಿ ಸಂಗ್ರಹವಾಗಿರುವ ಮಳೆನೀರು, ಸಿಮೆಂಟು ತೊಟ್ಟಿಗಳು, ಮುಚ್ಚಳಿಕೆ ಇಲ್ಲದ ಓವರ್ ಹೆಡ್ ಟ್ಯಾಂಕ್‌ನಲ್ಲಿರುವ ನೀರು, ಅಂಗಳದಲ್ಲಿ ಬಿಸಾಡಿರುವ ಟಿನ್, ಕ್ಯಾನ್, ಟೈರುಗಳು, ಪ್ಲಾಸ್ಟಿಕ್ ಲೋಟಗಳು, ಒರಳು ಕಲ್ಲು, ಒಡೆದು ಹೋಗಿರುವ ಪ್ಲಾಸ್ಟಿಕ್ ಡಬ್ಬಗಳಲ್ಲಿ ಸಂಗ್ರಹವಾಗಿರುವ ನೀರುಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ.

ಸೊಳ್ಳೆಗಳ ನಿರ್ಮೂಲನೆಯಲ್ಲಿ ಅನುಸರಿಸಬೇಕಾದ ಕ್ರಮಗಳು

ಹೆಣ್ಣು ಸೊಳ್ಳೆಯು ತನ್ನ ಜೀವಿತಾವಧಿಯಲ್ಲಿ ಸರಿ ಸುಮಾರು 400ರಿಂದ 600 ಮೊಟ್ಟೆಗಳನ್ನು ಸ್ವಚ್ಛವಾದ ನೀರಿನ ತಾಣದಲ್ಲಿ ಇಡುತ್ತವೆ. ಸೊಳ್ಳೆಯ ಜೀವನ ಚಕ್ರದ ಮೂರು ಹಂತಗಳಾದ ಮೊಟ್ಟೆ, ಲಾರ್ವ, ಪ್ಯೂಪಗಳು ನೀರುಗಳಲ್ಲಿ ಮಾತ್ರ ಜೀವಂತವಾಗಿದ್ದು, ಬೆಳವಣಿಗೆಯನ್ನು ಪೂರ್ಣಗೊಳಿಸಲು ಸರಿ ಸುಮಾರು 7 ರಿಂದ 10 ದಿನಗಳು ಬೇಕಾಗುತ್ತದೆ. ಆದ್ದರಿಂದ ಪ್ರತಿ ವಾರಕ್ಕೊಮ್ಮೆ ಒಳಾಂಗಣ ಮತ್ತು ಹೊರಾಂಗಣಗಳಲ್ಲಿ ಸಂಗ್ರಹವಾಗಿರುವ ನೀರುಗಳನ್ನು ಖಾಲಿ ಮಾಡಿ, ಒಣಗಿಸಿ, ಪುನಃ ಅವಶ್ಯಕತೆ ಇರುವ ನೀರನ್ನು ಶೇಖರಿಸಬೇಕು. ಹೀಗೆ ನಾಗರಿಕರು ವಾಸಿಸುವ ಪ್ರದೇಶದಲ್ಲಿನ ಪರಿಸರದಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡುವುದರಿಂದ ಈಡೀಸ್ ಸೊಳ್ಳೆಗಳು ಇಲ್ಲದಂತೆ ಮಾಡಬಹುದು. ಹೀಗೆ ತಡೆಗಟ್ಟುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರಣದಲ್ಲಿ ಇಡಬಹುದು.

ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಲು ರಾಸಾಯನಿಕ ವಸ್ತುಗಳಾದ ಸೊಳ್ಳೆಗಳ ನಿರೋಧಕಗಳನ್ನು ಬಳಕೆ ಮಾಡಬೇಕು. ಹಾಗೆಯೇ ಯಾವುದೇ ಜ್ವರ ಬರಲಿ ಉದಾಸೀನ ಮಾಡದೆ ರಕ್ತ ಪರೀಕ್ಷೆ ಮಾಡಿಸಬೇಕು. ಪರೀಕ್ಷೆಯಲ್ಲಿ ಡೆಂಗ್ಯೂ ಎಂದು ಗೊತ್ತಾದ ಕೂಡಲೇ ವೈದ್ಯರ ಸಲಹೆಯಂತೆ ಔಷಧಿಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಡೆಂಗ್ಯೂ ಜ್ವರವು ಸಮುದಾಯದಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದನ್ನು ತಪ್ಪಿಸಬಹುದು. ಇನ್ನು ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಗಪ್ಪಿ ಮತ್ತು ಗ್ಯಾಂಬೂಸೀಯಾ ಜಾತಿಯ ಮೀನುಗಳನ್ನು ನೀರು ಸಂಗ್ರಹಗಳಲ್ಲಿ ಬಿಡಲಾಗು ತ್ತದೆ. ಈ ಮೀನುಗಳು ಸೊಳ್ಳೆ ಇಡುವ ಮೊಟ್ಟೆಗಳನ್ನು, ಲಾರ್ವಗಳನ್ನು, ಪ್ಯೂಪಗಳನ್ನು, ಆಹಾರವನ್ನಾಗಿ ತಿನ್ನುವುದರಿಂದ ಸೊಳ್ಳೆಗಳ ಸಂತಾನೋತ್ಪತ್ತಿಯು ಕಡಿಮೆಯಾಗುತ್ತದೆ.

ಸೊಳ್ಳೆಗಳು ಆಹಾರ ಪಡೆದ ನಂತರ ಮನೆಯಿಂದ ಹೊರಗೆ ತೇವಾಂಶ ಇರುವ ಕಡೆಯಲ್ಲಿ, ದನದ ಕೊಟ್ಟಿಗೆಯಲ್ಲಿ, ಮರದ ಪೊಟರುಗಳಲ್ಲಿ ವಿಶ್ರಾಂತಿ ಪಡೆಯುವ ಕಾರಣ, ಒಳಾಂಗಣದ ಜೊತೆಗೆ ಹೊರಾಂಗಣದಲ್ಲೂ ಕೀಟನಾಶಕವನ್ನು ಸಿಂಪಡಣೆ ಮಾಡಬೇಕು.

ಆರೋಗ್ಯ ಇಲಾಖೆ ಪಾತ್ರ

ಡೆಂಗ್ಯೂ ಜ್ವರ ನಿಯಂತ್ರಣದಲ್ಲಿ ಆರೋಗ್ಯ ಇಲಾಖೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ, ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಸದಾ ಸಿದ್ಧವಾಗಿದೆ. ಕರ್ನಾಟಕ ರಾಜ್ಯದಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 'ಶೀಘ್ರ ಪತ್ತೆ ತ್ವರಿತ ಚಿಕಿತ್ಸೆ' ಘೋಷವಾಕ್ಯದೊಂದಿಗೆ ಅಧಿಕಾರಿ/ನೌಕರರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ರೋಗಿಯ ಕಣ್ಗಾವಲು, ಸಕ್ರಿಯ ಕಣ್ಗಾವಲು, ಸ್ಥಿತ ಕಣ್ಗಾವಲು, ಲಾರ್ವಾ ಸಮೀಕ್ಷೆ, ಒಣದಿನ, ಆರೋಗ್ಯ ಶಿಕ್ಷಣ ಕಾರ್ಯಕ್ರಮ, ಆಪ್ತ ಸಮಲೋಚನೆ ಮುಂತಾದ ಕಾರ್ಯಾಚರಣೆಯ ಮೂಲಕ ರೋಗಿಯು ಚೇತರಿಸಿಕೊಳ್ಳುವ ತನಕ ರೋಗಿಯ ಸಂಪರ್ಕದಲ್ಲಿರುತ್ತಾರೆ. ಸಮುದಾಯದಲ್ಲಿ ಡೆಂಗ್ಯೂ ಹರಡದಂತೆ ತಡೆಗಟ್ಟಲು ಆಶಾ ಕಾರ್ಯಕರ್ತೆಯರು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಲಾರ್ವ ನಾಶಕಗಳನ್ನು ರೋಗಿ ಮನೆಯ ಸುತ್ತಮುತ್ತ ಸಿಂಪಡಣೆಗೆ ಕ್ರಮ ಕೈಗೊಳ್ಳುತ್ತಾರೆ. ವಿಜ್ಞಾನಿಗಳು ಹೊಸ ಹೊಸ ಪ್ರಯೋಗಗಳನ್ನು ಮಾಡಿ ಸಾಂಕ್ರಾಮಿಕ ಖಾಯಿಲೆಗಳ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದಾರೆ. ಆದರೂ ಡೆಂಗ್ಯೂ ರೋಗ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರವು ಅತೀ ಮುಖ್ಯವಾದುದ್ದು, ಸರ್ಕಾರಗಳು ತಿಳಿಸುವ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವ ಮುಖೇನ "ಡೆಂಗ್ಯೂ ಜ್ವರ"ವನ್ನು ನಿಯಂತ್ರಣದಲ್ಲಿಡಲು ಸಹಕರಿಸಬೇಕು.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಮುಂದುವರೆದ ಹೋರಾಟ

ಕಾವೇರಿ ನದಿಗೆ ರಕ್ತ ಚೆಲ್ಲಲು ಯತ್ನ; ಮಾಜಿ ಶಾಸಕ ಅನ್ನದಾನಿ–ಪೊಲೀಸರ ನಡುವೆ ಮಾತಿನ ಚಕಮಕಿ

ಮಳವಳ್ಳಿ, ಸೆ.30(ಮೋಹನ್‌ರಾಜ್)– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ, ಮಾಜಿ ಶಾಸಕ ಡಾ.ಕೆ. ಅನ್ನದಾನಿ ನೇತೃತ್ವದಲ್ಲಿ ಹೋರಾಟಗಾರರು ಇಂದು ಕಾವೇರಿ ನದಿಗೆ ರಕ್ತ ಚೆಲ್ಲುವ ಚಳುವಳಿ ಹಮ್ಮಿಕೊಂಡಿದ್ದರು. ಆದರೆ ಪೊಲೀಸರು ಇದಕ್ಕೆ ಅವಕಾಶ ಕೊಡದಿದ್ದಾಗ ಹೋರಾಟಗಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆದ ಘಟನೆ ಪಟ್ಟಣದಲ್ಲಿ ಶನಿವಾರ ನಡೆಯಿತು.



ಪಟ್ಟಣದ ಅನಂತರಾಂ ವೃತ್ತದಲ್ಲಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಜಮಾಯಿಸಿದ ನೂರಾರು ಜೆಡಿಎಸ್ ಕಾರ್ಯಕರ್ತರು ಹಾಗೂ ಹೋರಾಟಗಾರರು, ಸಿರಿಂಜ್ ಮೂಲಕ ಎಲ್ಲರೂ ರಕ್ತ ಸಂಗ್ರಹಿಸಿ, ಬಾಟಲ್‌ಗಳಿಗೆ ತುಂಬಿಸಿಕೊಂಡರು. ಬಳಿಕ ಬೈಕ್ ರ್‍ಯಾಲಿ ಮೂಲಕ ಸತ್ತೇಗಾಲ ಹ್ಯಾಂಡ್ ಪೋಸ್ಟ್‌ಗೆ ತೆರಳಿ ಕಾವೇರಿ ನದಿ ಸೇತುವೆ ಬಳಿ ರಕ್ತ ಚೆಲ್ಲುವ ಚಳವಳಿ ಹಮ್ಮಿಕೊಂಡಿದ್ದರು. ಸತ್ತೇಗಾಲ ಹ್ಯಾಂಡ್ ಪೋಸ್ಟ್‌ಗೆ ಹೋರಾಟಗಾರರು ಬರುತ್ತಿದ್ದಂತೆಯೇ ಬ್ಯಾರಿಕೇಡ್ ಹಾಕಿ ಸೇತುವೆ ಬಳಿ ಬಿಡದ ಪೊಲೀಸರು ಹೋರಾಟಗಾರರನ್ನು ಅಡ್ಡಗಟ್ಟಿದರು. ಇದರಿಂದ ಕೆರಳಿದ ಹೋರಾಟಗಾರರು, ನದಿಗೆ ರಕ್ತ ಚೆಲ್ಲಲು ಬಿಡಿ ಎಂದು ಮನವಿ ಮಾಡಿದರು.ಆದರೆ ಪೊಲೀಸರು ಮಾತ್ರ ನದಿ ನೀರಿಗೆ ರಕ್ತ ಚೆಲ್ಲಲು ಅವಕಾಶ ವಿಲ್ಲ. ಕೇವಲ ಪ್ರತಿಭಟನೆ ನಡೆಸುವಂತೆ ಮನವಿ ಮಾಡಿದರು.

ಈ ಸಂದರ್ಭ ರೊಚ್ಚಿಗೆದ್ದ ಹೋರಾಟಗಾರರು ಬ್ಯಾರಿಕೇಡ್ ಭೇದಿಸಿ, ಸೇತುವೆಗೆ ನುಗ್ಗಲು ಯತ್ನಿಸಿದಾಗ ಹೋರಾಟಗಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನಾವು ನೀವು ತಡೆದರೂ ರಕ್ತವನ್ನು ನೀರಿನ ಜೊತೆಗೆ ನದಿಗೆ ಹರಿಸುತ್ತೇವೆ ಎಂದು ಮಾಜಿ ಶಾಸಕರು ಆರ್ಭಟಿಸಿದರು. ಈ ವೇಳೆ ಡಿವೈಎಸ್ಪಿ ಸೋಮೇಗೌಡ ನದಿಗೆ ರಕ್ತ ಹಾಕುವುದರಿಂದ ನೀರು ಕಲುಷಿತ ಆಗುತ್ತದೆ ನಾವು ಬಿಡಲ್ಲ ಎಂದರು. ಬಳಿಕ ಪ್ರತಿಭಟನಾಕಾರರು ಟಿಎಂಸಿಗಟ್ಟಲೇ ನೀರು ಹೋಗಿದೆ, ಕೆಆರ್‌ಎಸ್ ಬರಿದಾಗುತ್ತಿದೆ. ಇದನ್ನು ಯಾರು ತಡೆಯುತ್ತಿಲ್ಲ. ನಮ್ಮ ರಕ್ತ ಕೊಡ್ತೀವಿ ಅಂದರೆ ತಡೆಯಲು ಬರುತ್ತೀರಾ ಎಂದು ಹೋರಾಟಗಾರರು ಹಾಗೂ ಪೊಲೀಸರ ನಡುವೆ ತಳ್ಳಾಟ–ನೂಕಾಟ ನಡೆಯಿತು. ಬಳಿಕ ಹೋರಾಟಗಾರರ ಬಳಿ ಇದ್ದ ರಕ್ತದ ಬಾಟಲನ್ನು ಪೊಲೀಸರು ಕಿತ್ತುಕೊಂಡು ವಾಪಸ್ ಕಳುಹಿಸಿದರು. ರಾಜ್ಯ ಸರ್ಕಾರ, ಕಾವೇರಿ ಪ್ರಾಧಿಕಾರದ ವಿರುದ್ಧ ಧಿಕ್ಕಾರ, ರಕ್ತ ಕೊಟ್ಟೇವು, ನೀರು ಕೊಡಲ್ಲ ಎಂಬ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಪುರಸಭಾ ಸದಸ್ಯರಾದ ಪ್ರಶಾಂತ್, ನಂದಕುಮಾರ್, ಸಿದ್ದರಾಜು, ನಾಗೇಶ್, ನೂರ್ ಉಲ್ಲಾ, ಜಯಸಿಂಹ, ಜಯ ಕರ್ನಾಟಕ ಜನಪರ ವೇದಿಕೆ ತಾಲೂಕು ಅಧ್ಯಕ್ಷ ಎಂ.ಪಿ.ನಾಗೇಶ್, ಹೋರಾಟಗಾರರಾದ ನಾಗರಾಜು, ಅನಂತ್, ಶಂಕರೇಗೌಡ, ಶ್ರೀಧರ್, ನಾರಾಯಣ, ರಾಜಣ್ಣ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ರಸಗೊಬ್ಬರ ಪೂರೈಕೆಗೆ ಯಾವುದೇ ಅಡ್ಡಿಯಿಲ್ಲ



ಬೆಂಗಳೂರು, ಸೆ.30(ಕೆಎಂಶಿ)– ರಾಜ್ಯದಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ರೀತಿಯ ಕೊರತೆಯಾಗದಂತೆ ನಿಗಾ ವಹಿಸಲಾಗಿದೆ ಎಂದು ಕೃಷಿ ಸಚಿವರಾದ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಕಳೆದ ನಾಲ್ಕೈದು ದಿನ ರೈಲ್ವೆ ಸಾರಿಗೆ ಸಮಸ್ಯೆಯಿಂದ ಸಾಗಾಣಿಕೆ ವಿಳಂಬವಾಗಿತ್ತು. ಈಗ ಎಲ್ಲಾ ಸರಿಯಾಗಿದ್ದು ಗೋದಾಮುಗಳಲ್ಲಿ ದಾಸ್ತಾನಾಗುತ್ತಿದೆ. ಯಾವುದೇ ವ್ಯತ್ಯಯ ಆಗದಂತೆ ಅಧಿಕಾರಿಗಳು ಎಚ್ಚರ ವಹಿಸಲು ಸೂಚನೆ ನೀಡಲಾಗಿದೆ ಎಂದರು. ಬೆಳೆ ಸಮೀಕ್ಷೆ ಶೀಘ್ರ ಪೂರ್ಣಗೊಳಿಸಿ, ಹವಾಮಾನ, ರೈತರ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಸರ್ವೆ ನಡೆಸಿ ಮಾಹಿತಿ ನಮೂದಿಸಬೇಕು. ಇ.ಕೆವೈಸಿ ಶೇ.100ರಷ್ಟು ಗುರಿಸಾಧನೆಯಾಗಬೇಕು ಎಂದು ಅವರು ನಿರ್ದೇಶನ ನೀಡಿದರು. ಕಳೆದ ಮೂರ್ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿದ್ದ ಕೃಷಿ ಭಾಗ್ಯ ಯೋಜನೆ ಪುನಾರಂಭ ಮಾಡಲಾಗಿದೆ. ಮುಂದಿನ ವರ್ಷ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಜಾರಿಗೊಳಿಸಲಾಗುವುದು ಎಂದರು. ಬ್ಯಾಂಕ್‌ಗಳು ಸರ್ಕಾರದಿಂದ ರೈತರ ಖಾತೆಗೆ ಹಾಕಲಾಗುವ ಸಬ್ಸಿಡಿ ಹಾಗೂ ನೆರವಿನ ಅನುದಾನವನ್ನು ಸಾಲಕ್ಕೆ ಕಡಿತ ಮಾಡದಂತೆ ಡಿಸಿ, ಜಿಪಂ ಸಿಇಓಗೆ ಸೂಚಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಳ್ಳಿ: ನಾಗಣ್ಣಗೌಡ



ಮೈಸೂರು, ಸೆ.30(ಎಂಟಿವೈ)– ವಿದ್ಯಾರ್ಥಿಗಳು ಯಾವುದೇ ದುಶ್ಚಟಗಳಿಗೆ ಒಳಗಾಗದೆ ಉತ್ತಮವಾಗಿ ಅಧ್ಯಯನ ಮಾಡುವುದರೊಂದಿಗೆ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ತಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳುವತ್ತ ಗಮನಹರಿಸುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಸಲಹೆ ನೀಡಿದರು.

ಮೈಸೂರಿನ ಬೋಗಾದಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಪದವಿಪೂರ್ವ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮೈಸೂರು ವತಿಯಿಂದ ಆಯೋಜಿಸಿದ್ದ ಮಾದಕ ವಸ್ತು ಮತ್ತು ಮದ್ಯಪಾನ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಆಯೋಜಿಸಿದ್ದ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 4 ಲಕ್ಷ ಮಕ್ಕಳು ಹಾಸ್ಟೆಲ್‌ಗಳಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ. ಶಾಲಾ-ಕಾಲೇಜು ಅವಧಿಯಲ್ಲಿ ಪ್ರತಿಯೊಬ್ಬರೂ ಸಂಸ್ಕಾರ ಬೆಳೆಸಿಕೊಳ್ಳಬೇಕು. ಮಾದಕ ಸೇವನೆ, ಮದ್ಯಪಾನದಂತಹ ದುಶ್ಚಟಕ್ಕೆ ಒಳಗಾಗದೇ, ನಮ್ಮ ಹಕ್ಕು, ಕರ್ತವ್ಯ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಂಡು ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಧನೆ ಮಾಡಲೆಂದು ಪೋಷಕರು ಬಯಸುತ್ತಾರೆ. ಕಷ್ಟಪಟ್ಟು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಹಂಬಲಿಸುತ್ತಾರೆ. ಪೋಷಕರ ಕಷ್ಟವನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ನೀವು ಯಾವುದಾದರೂ ಸಾಧನೆ ಮಾಡಿ, ನಿಗದಿತ ಗುರಿ ತಲುಪಿದಾಗ ಪೋಷಕರು ಸಂಭ್ರಮಿಸುತ್ತಾರೆ ಎಂದು ತಿಳಿಸಿದರು.

ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಬೇಕಾದ ಸವಲತ್ತು ಕಲ್ಪಿಸಲಾಗಿದೆ. ಅಧ್ಯಯನಕ್ಕೆ ಅವಶ್ಯಕತೆ ಇದ್ದರೆ ನುರಿತ ತಜ್ಞರಿಂದ ಹೆಚ್ಚಿನ ತರಬೇತಿಯನ್ನು ನೀಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು. ಸಮಾರಂಭದಲ್ಲಿ ಜಿಲ್ಲಾ ವಾರ್ಡನ್ ಸಂಘದ ಅಧ್ಯಕ್ಷ ಶಿವಮಲ್ಲಯ್ಯ, ಚಂದ್ರಕುಮಾರ್, ಬಾಲರಾಜ್, ವಿಠಲಗೌಡ, ಸುಮಂತ್, ನಿಲಯಪಾಲಕರಾದ ಚಿಕ್ಕೀರಯ್ಯ, ಪ್ರದೀಪ್, ರಾಜೇಶ್ವರಿ, ಗಾಯತ್ರಿ, ಕಮಲಾಕ್ಷಿ, ವಸಂತಕುಮಾರಿ, ಸತೀಶ್‌ಕುಮಾರ್ ಹಾಗೂ ಸಿಬ್ಬಂದಿ ಇದ್ದರು.



ಮೈಸೂರು ವಿವಿ ಪುರಂ ಹೆರಿಗೆ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸಭೆಗೆ ಸದಸ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ವಿನಾಯಕನಗರದ ಕೆ.ಕೃಷ್ಣ ಹಾಗೂ ಸದಸ್ಯ ಬಸವರಾಜು ಅವರಿಗೆ ಶಾಸಕ ಕೆ.ಹರೀಶ್‌ಗೌಡ ಆದೇಶ ಪತ್ರ ವಿತರಿಸಿದರು. ಈ ವೇಳೆ ಕಾರ್ಪೋರೇಟರ್ ಶ್ರೀಮತಿ ಭಾಗ್ಯ ಮಹದೇಶ್ ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತಿ ಕಲಾವಿದರ ಒಕ್ಕೂಟ ಅಸ್ತಿತ್ವಕ್ಕೆ




ಮೈಸೂರು,ಸೆ.20(ಜಿಎ)–ರಾಜ್ಯ ಡಾ. ಬಿ.ಆರ್.ಅಂಬೇಡ್ಕರ್ ವೃತ್ತಿ ಕಲಾವಿದರ ಒಕ್ಕೂಟ ಅಸ್ತಿತ್ವಕ್ಕೆ ಬಂದಿದ್ದು, ಅ.3ರಂದು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಎಂ.ಪುಟ್ಟಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಮುಖಂಡರಾದ ಮಾಜಿ ಮೇಯರ್ ಪುರುಷೋತ್ತಮ್, ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ. ವಿಜಯಕುಮಾರ್, ಉದ್ಯಮಿ ದೌಲತ್ ಭಾಗವಹಿಸುವರು ಎಂದು ತಿಳಿಸಿದರು.

ಒಕ್ಕೂಟದಲ್ಲಿ 200ಕ್ಕೂ ಅಧಿಕ ರಂಗಭೂಮಿ ಕಲಾವಿದರು, ಜಾನಪದ ಕಲಾವಿದರು ಮೊದಲಾದವರು ಸೇರಿದ್ದಾರೆ. ಇವರಿಗೆ ಸರ್ಕಾರದ ಸೌಲಭ್ಯ, ಅನುದಾನ ದೊರಕಿಸುವ ಮೂಲಕ ನೆರವಾಗುವ ಉದ್ದೇಶದಿಂದ ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಂ.ಮಂಜುನಾಥ್, ಪಿ.ಸಂತೋಷ್‌ಕುಮಾರ್, ರಾಮಚಂದ್ರ, ಉಮೇಶ್, ಪಿ.ಕಿರಣ್ ಉಪಸ್ಥಿತರಿದ್ದರು.

ನಾಳೆ ಪಾನಮುಕ್ತರ ಸಮಾವೇಶ; ಅಭಿನಂದನಾ ಕಾರ್ಯಕ್ರಮ



ಮೈಸೂರು, ಸೆ.30(ಜಿಎ)–ಗಾಂಧಿ ಜಯಂತಿ ಅಂಗವಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಮತ್ತು ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ವತಿಯಿಂದ ಅ.2ರಂದು ಪಾನಮುಕ್ತರ ಸಮಾವೇಶ, ನವ ಜೀವನ ಸಮಿತಿ ಸದಸ್ಯರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಎಂ.ಪ್ರಭುಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಕೇರ್ಗಹಳ್ಳಿಯ ಹೊಂಬಾಳಮ್ಮ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಪಾನಮುಕ್ತರ ಸಮಾವೇಶ ಏರ್ಪಡಿಸಿದ್ದು, ಚಾಮುಂಡಿ ಬೆಟ್ಟದ ಪ್ರಧಾನ ಅರ್ಚಕ ಎನ್.ಶಶಿಶೇಖರ ದೀಕ್ಷಿತ್ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮೇಯರ್ ಶಿವಕುಮಾರ್, ವರುಣ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ ಉಪಸ್ಥಿತರಿರಲಿದ್ದಾರೆ ಎಂದರು.

ವ್ಯಸನಮುಕ್ತ ಸಮಾಜ ನಿರ್ಮಾಣ ಜಾಗೃತಿಗಾಗಿ ಅ.2ರಿಂದ 15ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿದೆ. ಈ ಮೂಲಕ ಲಕ್ಷಕ್ಕೂ ಹೆಚ್ಚು ಮಂದಿಯನ್ನು ವ್ಯಸನ ಮುಕ್ತರನ್ನಾಗಿಸಲು ಪ್ರಯತ್ನಿಸಲಾಗುವುದು. ಮದ್ಯವರ್ಜನ ಶಿಬಿರ, ಜಾಗೃತಿ ಮತ್ತು ಪ್ರಚಾರ, ವ್ಯಸನಮುಕ್ತರಿಗೆ ನವಜೀವನ ಸಮಿತಿ ರಚನೆ, ಶಾಲಾ ಕಾಲೇಜುಗಳಲ್ಲಿ ಸ್ವಾಸ್ಥ್ಯ ಸಂಕುಲ, ಮಾದಕ ವಸ್ತುಗಳ ತಡೆಗಟ್ಟುವಿಕೆ ಸೇರಿದಂತೆ ಇನ್ನಿತರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಎಂ.ಎ.ಕಮಲ, ಕೆ.ವರದರಾಜ್, ಸೋಮಶೇಖರ್, ಕೋಶಾಧಿಕಾರಿ ಬನ್ನೂರು ನಾರಾಯಣ್, ನಿರ್ದೇಶಕ ಲಕ್ಷ್ಮಣ, ಕಿರಗಸೂರು ಶಂಕರ್ ಉಪಸ್ಥಿತರಿದ್ದರು.

ಇಂದು ಯಕ್ಷಗಾನ ಪ್ರಸಂಗ–ಶ್ರೀದೇವಿ ಮಹಾತ್ಮೆ


ಮೈಸೂರು, ಸೆ. 30– ಮೈಸೂರಿನ ದಕ್ಷಿಣ ಕನ್ನಡ ವೈದ್ಯರ ಸಾಂಸ್ಕೃತಿಕ ಸಂಘದ ವತಿಯಿಂದ ಅ. 1 ರಂದು ಸಂಜೆ 5.30ಕ್ಕೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸುಪ್ರಸಿದ್ಧ ಯಕ್ಷಗಾನ ಕಲಾವಿದರ ಸಮಾಗಮ, ದಕ್ಷಿಣ ಕನ್ನಡ ಇವರಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ಏರ್ಪಡಿಸಲಾಗಿದೆ. ಪ್ರವೇಶ ಉಚಿತವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

‘ಗಾಂಧಿ ಗ್ರಾಮ ಪುರಸ್ಕಾರ’ಕ್ಕೆ ರಾಜ್ಯಾದ್ಯಂತ 233 ಗ್ರಾಮಗಳ ಆಯ್ಕೆ

ಮೈಸೂರು ತಾಲೂಕಿನ ಗೋಪಾಲಪುರ ಸೇರಿದಂತೆ ಜಿಲ್ಲೆಯ 8 ಗ್ರಾಮಗಳು ಆಯ್ಕೆ

ಮೈಸೂರು, ಸೆ.30(ಎಸ್‌ಪಿಎನ್)– ಮೈಸೂರು, ಕೊಡಗು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲಾ ವ್ಯಾಪ್ತಿಯ 33 ಗ್ರಾಮಗಳು ಸೇರಿದಂತೆ ರಾಜ್ಯದ 31 ಜಿಲ್ಲೆಗಳ 233 ಗ್ರಾಮ ಪಂಚಾಯ್ತಿಗಳಿಗೆ ‘ಗಾಂಧಿ ಗ್ರಾಮ ಪುರಸ್ಕಾರ’ ಹಾಗೂ 4 ಗ್ರಾಮ ಪಂಚಾಯ್ತಿಗಳಿಗೆ ‘ವಿಶೇಷ ಗಾಂಧಿ ಗ್ರಾಮ ಪುರಸ್ಕಾರ’ಕ್ಕೆ ಆಯ್ಕೆಯಾಗಿದ್ದು, ಈ ಪ್ರಶಸ್ತಿಯನ್ನು ಅ.2ರ ಗಾಂಧಿ ಜಯಂತಿಯಂದು ಬೆಳಗ್ಗೆ 10ಕ್ಕೆ ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

2022–23ನೇ ಸಾಲಿಗೆ ಜಿಲ್ಲಾ ಮಟ್ಟದ ಗ್ರಾಂಧಿ ಗ್ರಾಮ ಪುರಸ್ಕಾರ ಆಯ್ಕೆ ಸಮಿತಿಯಲ್ಲಿ ದೃಢೀಕರಿಸಿ ಸಲ್ಲಿಸಿರುವ ಆಯ್ಕೆ ಪಟ್ಟಿಯನ್ನು ದಿನಾಂಕ: 25.09. 2023ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ (ಪಂಚಾಯತ್ ರಾಜ್) ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಂತಿಮಗೊಳಿಸಲಾಗಿದೆ.



ಅ.2ರಂದು ನಡೆಯುವ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಗಾಂಧಿ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರು ಮತ್ತು ಪಿಡಿಒಗಳು ಸೇರಿದಂತೆ ಇತರರು ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಲು ಹಾಜರಿರುವಂತೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರು ಕೋರಿದ್ದು, 31 ಜಿಲ್ಲೆಗಳ ಎಲ್ಲಾ ಸಿಇಓಗಳಿಗೆ ಸುತ್ತೋಲೆ ಹೊರಡಿಸಿದ್ದಾರೆ. 2022–23ನೇ ಸಾಲಿನಲ್ಲಿ ವಿಶೇಷ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಉಡುಪಿ ಜಿಲ್ಲೆಯ ಕುಂದಾಪುರದ ಹೊಸಾಡು, 80 ಬಡಗಬೆಟ್ಟು, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಟ್ಟೀಗೇರಿ, ಬೆಳವಟಿಗೆ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಗಾಂಧಿ ಪುರಸ್ಕಾರಕ್ಕೆ ಆಯ್ಕೆ ಗ್ರಾಪಂಗಳ ವಿವರ ಇಂತಿದೆ.

ಮೈಸೂರು ಜಿಲ್ಲೆಯ ಮೈಸೂರು ತಾಲೂಕಿನ ಗೋಪಾಲಪುರ, ನಂಜನಗೂಡು ತಾಲೂಕಿನ ಮರಳೂರು, ತಿ.ನರಸೀಪುರದ ಹೊಸಕೋಟೆ, ಹುಣಸೂರಿನ ಉಮ್ಮತ್ತೂರು, ಕೆ.ಆರ್.ನಗರದ ಹೆಬ್ಬಾಳು, ಸಾಲಿಗ್ರಾಮದ ಭೇರ್ಯ, ಪಿರಿಯಾಪಟ್ಟಣದ ಪಂಚವಳ್ಳಿ, ಹೆಚ್.ಡಿ. ಕೋಟೆಯ ಹೊಸಹೊಳಲು, ಸರಗೂರಿನ ಮನುಗನಹಳ್ಳಿ, **ಚಾಮರಾಜನಗರ ಜಿಲ್ಲೆಯ** ಗುಂಡ್ಲುಪೇಟೆಯ ತೆರಕಣಾಂಬಿ, ಚಾಮರಾಜನಗರ ತಾಲೂಕಿನ ಮಣಜನೂರು, ಕೊಳ್ಳೇಗಾಲ ತಾಲೂಕಿನ ಸಿಂಗಾನಲ್ಲೂರು, ಹನೂರು ತಾಲೂಕಿನ ಲೊಕ್ಕನಹಳ್ಳಿ, ಯಳಂದೂರು ತಾಲೂಕಿನ ಅಂಬಳೆ, **ಹಾಸನ ಜಿಲ್ಲೆಯ** ಆಲೂರು ತಾಲೂಕಿನ ಪಾಳ್ಯ, ಅರಕಲಗೂಡಿನ ಬಸವಾಪಟ್ಟಣ, ಅರಸೀಕೆರೆ ಕಣಕಟ್ಟೆ, ಬೇಲೂರು ತಾಲೂಕಿನ ಇಬ್ಬೀಡು, ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿ, ಹಾಸನ ತಾಲೂಕಿನ ನಿಟ್ಟೂರು, ಹೊಳೇನರಸೀಪುರ ತಾಲೂಕಿನ ಹಳ್ಳಿಮೈಸೂರು, ಸಕಲೇಪುರ ತಾಲೂಕಿನ ಐಗೂರು, **ಕೊಡಗು ಜಿಲ್ಲೆಯ** ಮಡಿಕೇರಿ ತಾಲೂಕಿನ ಗಾಳೀಬೀಡು, ಸೋಮವಾರಪೇಟೆ ತಾಲೂಕಿನ ಮಾದಾಪುರ, ವಿರಾಜಪೇಟೆ ಕಣ್ಣಂಗಾಲ, ಕುಶಾಲನಗರ ತಾಲೂಕಿನ ಗುಡ್ಡೆಹೊಸೂರು, ಪೊನ್ನಂಪೇಟೆಯ ಹಾತೂರು, **ಮಂಡ್ಯ ಜಿಲ್ಲೆಯ** ಕೆ.ಆರ್.ಪೇಟೆಯ ಬಳ್ಳೇಕೆರೆ, ಮದ್ದೂರಿನ ಭಾರತೀಪುರ, ಮಳವಳ್ಳಿಯ ಬಿ.ಜಿ.ಪುರ, ಮಂಡ್ಯದ ಹೊಡಘಟ್ಟ, ನಾಗಮಂಗಲದ ಹುಲಿಕೆರೆ, ಪಾಂಡವಪುರದ ಮೇಲುಕೋಟೆ, ಶ್ರೀರಂಗಪಟ್ಟಣದ ಟಿ.ಎಂ. ಹೊಸೂರು ‘ಗಾಂಧಿ ಪುರಸ್ಕಾರ’ ನೀಡಲಾಗಿದೆ.

ಕಾವೇರಿ ವಿಚಾರ: ಕೇಂದ್ರ ಮಧ್ಯ ಪ್ರವೇಶಕ್ಕೆ ರೈತಸಂಘ ಒತ್ತಾಯ



ಮೈಸೂರು, ಸೆ.30(ಜಿಎ)–ಕೇಂದ್ರ ಸರಕಾರ ಮಧ್ಯ ಪ್ರವೇಶ ಮಾಡಿ, ಕಾವೇರಿ ವಿಚಾರವನ್ನು ತಾರ್ಕಿಕ ಅಂತ್ಯ ಮಾಡಬೇಕಿದೆ. ರಾಜ್ಯ ರಾಜ್ಯಗಳ ನಡುವೆ ಕಚ್ಚಾಟವಾಗುವುದನ್ನ ನಿಲ್ಲಿಸಬೇಕು. ಮೇಕೆದಾಟು ಅಣೆಕಟ್ಟೆ ಯೋಜನೆಗೆ ಅನುಮತಿ ನೀಡಲೇಬೇಕು ಹಾಗೂ ಶೇ.50 ಹಣವನ್ನು ಡ್ಯಾಂ ಕಟ್ಟಲು ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನೀರಿನ ವಿಚಾರದಲ್ಲಿ ತುರ್ತು ಅಧಿವೇಶನ ಕರೆದು, ನೀರು ಬಿಡದಿರಲು ನಿರ್ಣಯ ಕೈಗೊಳ್ಳಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಬಗ್ಗೆ ಯೋಚಿಸಬೇಕು. ಶಾಸಕಾಂಗ ತೆಗೆದುಕೊಳ್ಳುವ ನಿರ್ಣಯಕ್ಕೆ ಹೆಚ್ಚಿನ ಮಹತ್ವವಿದೆ. ಹಾಗಾಗಿ ವಿಧಾನಸಭೆಯ ವಿಶೇಷ ಅಧಿವೇಶನ ಕರೆದು ನಿರ್ಣಯ ಮಾಡಬೇಕು ಎಂದು ಆಗ್ರಹಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡದಿದ್ದರೆ, ಕೇಂದ್ರ ಸರಕಾರ ಕಾನೂನು ಉಲ್ಲಂಘನೆ ಎಂದು ಆದೇಶ ಹೊರಡಿಸಬಹುದು ಎಂಬ ಭಯ ಮತ್ತು ಆತಂಕ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರಿಗೆ ಮನೆ ಮಾಡಿದೆ. ಆದರೆ ನೀರಿಲ್ಲದಿರುವುದನ್ನ ಮನವರಿಕೆ ಮಾಡಿದರೆ ಎಲ್ಲವೂ ಬಗೆಹರಿಯಲಿದೆ. ಸರ್ಕಾರ ಇಚ್ಛಾಶಕ್ತಿ ಮೀರಿ ಧೈರ್ಯ ಮಾಡಬೇಕು ಎಂದರು.

ದೆಹಲಿಯಲ್ಲಿರುವ ಕಾವೇರಿ ನಿಯಂತ್ರಣ ಸಮಿತಿಯವರನ್ನು ರೈತರೇ ಖುದ್ದು ಭೇಟಿ ಮಾಡಲು ಚಿಂತಿಸಿದ್ದು, ರೈತರೇ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲು ಚಿಂತಿಸಲಾಗಿದೆ. ಈ ವಿಚಾರವಾಗಿ ಸಿಎಂ, ಡಿಕೆಶಿ ಧೈರ್ಯ ಮಾಡಿದರೆ ರಾಜ್ಯ ರೈತಸಂಘ ಬೆಂಬಲ ನೀಡಲಿದೆ. ಸರಕಾರದ ಪರ ರೈತರು ನಿಲ್ಲುತ್ತಾರೆ ಎಂದು ತಿಳಿಸಿದರು.

ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದರೆ ಅದು ತಪ್ಪು. ಪಾಲಿಸಲು ಆಗದ ಆದೇಶ ಉಲ್ಲಂಘನೆ ಮಾಡಿದರೆ ಅದು ತಪ್ಪಲ್ಲ. ಆದೇಶ ಉಲ್ಲಂಘನೆ ಮಾಡಿದರೆ ಜಲಾಶಯದ ಕೀ ಕಿತ್ತುಕೊಳ್ಳುವ ಭಯ ನಿಮಗಿದೆ ಅನಿಸುತ್ತದೆ. ನಿಮ್ಮಿಂದ ಕೀ ಕಿತ್ತುಕೊಳ್ಳಬಹುದು, ರೈತರಿಂದಲ್ಲ ಎಂದರು.

ವಾಟಾಳ್ ನಾಗರಾಜ್ ಅವರು ಅ.5 ರಂದು ನಡೆಸಲಿರುವ ಕೆಆರ್‌ಎಸ್ ಮುತ್ತಿಗೆಗೆ ನಮ್ಮ ಬೆಂಬಲವಿದೆ. ಕಾವೇರಿ ನೀರಿಗಾಗಿ ಎಲ್ಲರೂ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ನೇತ್ರಾವತಿ, ಕೆಂಪೂಗೌಡ, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಶಿರಮಳ್ಳಿ ಸಿದ್ದಪ್ಪ, ಆನಂದೂರು ಪ್ರಭಾಕರ್ ಇನ್ನಿತರರು ಉಸಪ್ಥಿತರಿದ್ದರು.

ನಾಳೆ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ

ಮೈಸೂರು, ಸೆ.30– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಹಾತ್ಮ ಗಾಂಧಿ ಪೀಠದ ವತಿಯಿಂದ 154ನೇ ಗಾಂಧಿ ಜಯಂತಿ ಅಂಗವಾಗಿ ಅ.2 ರಂದು ಬೆಳಗ್ಗೆ 9 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ಗಾಂಧಿವನದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಜೀ ಅವರ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಕರಾಮುವಿಯ ಕುಲಪತಿಗಳು ಹಾಗೂ ವಿ.ವಿ ನಿಲಯದ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಗಾಂಧಿ ಅಧ್ಯಯನ ಪೀಠದ ನಿರ್ದೇಶಕರು, ಕುಲಪತಿಗಳು ಮತ್ತು ಕುಲಸಚಿವರು ಭಾಗವಹಿಸುವರು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಕವಿಗೋಷ್ಠಿಗೆ ಅರ್ಜಿ ಆಹ್ವಾನ

ಮೈಸೂರು, ಸೆ.30– ದಸರಾ ಪ್ರಯುಕ್ತ ಅ.17ರಿಂದ 21ರವರೆಗೆ ಮೈಸೂರಿನ ವಿವಿಧ ವೇದಿಕೆಗಳಲ್ಲಿ ದಸರಾ ಕವಿಗೋಷ್ಠಿ ಪ್ರಯುಕ್ತ ಚಿಗುರು ಕವಿಗೋಷ್ಠಿ, ಯುವ ಕವಿಗೋಷ್ಠಿ, ಪ್ರಾದೇಶಿಕ ಕವಿಗೋಷ್ಠಿ ಮತ್ತು ಮಹಿಳಾ ಕವಿಗೋಷ್ಠಿಯನ್ನು ಆಯೋಜಿಸಲಾಗುವುದು.

ಕವಿಗೋಷ್ಠಿಯಲ್ಲಿ ಕವಿತೆಗಳನ್ನು ವಾಚಿಸಲು ಬಯಸುವ ಕವಿ, ಕವಯತ್ರಿ ಅವರು ತಮ್ಮ ಸ್ವ–ರಚಿತ 3 ಕವಿತೆಗಳು ಮತ್ತು ಭಾವಚಿತ್ರವುಳ್ಳ ಸ್ವ–ವಿವರಗಳನ್ನು ಅ.7ರೊಳಗೆ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ವಿಜಯಕುಮಾರಿ ಕರಿಕಲ್ ಮೊ: 9448797992 ಅಥವಾ ಮಿಂಚಂಚೆ: dasarakavigosthi 2023@gmail.comಗೆ ಕಳುಹಿಸಿ ಕೊಡುವಂತೆ ತಿಳಿಸಲಾಗಿದೆ ಮಾಹಿತಿಗಾಗಿ ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯದರ್ಶಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ್ ಮೊ: 94808 73100 ಸಂಪರ್ಕಿಸಬಹುದು ಎಂದು ಕವಿಗೋಷ್ಠಿ ಉಪಸಮಿತಿ–2023ರ ಉಪವಿಶೇಷಾಧಿಕಾರಿ ಡಾ.ದಾಸೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಕೃಷ್ಣ ಗಾನಸಭಾದಿಂದ ಸಂಗೀತ ಕಾರ್ಯಕ್ರಮ



ಮೈಸೂರು, ಸೆ.30(ಎಸ್‌ಪಿಎನ್)– ನೀಲಗಾರರು ಹಾಡುತ್ತಿದ್ದ ‘ಶ್ರೀ ಮಂಟೇಸ್ವಾಮಿ ಕಾವ್ಯ’ಗಳ ದಾಖಲೀಕರಣಕ್ಕೆ ಸಹಕರಿಸಿದವರಲ್ಲಿ ಸರ್ದಾರ್ ಎಂ.ಎಲ್.ರಾಜೇ ಅರಸ್‌ರ ಕೊಡುಗೆಯೂ ಇದೆ ಎಂದು ಕಪ್ಪಡಿ, ಮಳವಳ್ಳಿ ಮತ್ತು ಹೊನ್ನಾಯಕನಹಳ್ಳಿ ಮಠದ ಶ್ರೀ ವರ್ಚಸ್ವಿ ಸಿದ್ದಲಿಂಗ ರಾಜೇ ಅರಸ್ ಅಭಿಪ್ರಾಯಪಟ್ಟರು.

ಮೈಸೂರು ಗೋಕುಲಂ 3ನೇ ಹಂತದ ಶ್ರೀ ಕೃಷ್ಣ ಗಾನಸಭಾಮಂಟಪದಲ್ಲಿ ಶ್ರೀ ಕೃಷ್ಣ ಗಾನಸಭಾ ವತಿಯಿಂದ ಕಪ್ಪಡಿ, ಮಳವಳ್ಳಿ ಮತ್ತು ಹೊನ್ನಾಯಕನಹಳ್ಳಿ ಮಠದ ಸರ್ದಾರ್ ಎಂ.ಎಲ್.ರಾಜೇಅರಸ್ ಹಾಗೂ ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಸ್ಮರಣಾರ್ಥ ಆಯೋಜಿಸಿದ್ದ 2 ದಿನದ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ದಿವಂಗತ ಎಂ.ಎಲ್.ರಾಜೇ ಅರಸ್ ಅವರು ಮೈಸೂರಿನವರು, ಕಪ್ಪಡಿ, ಮಳವಳ್ಳಿ ಮತ್ತು ಹೊನ್ನಾಯಕನಹಳ್ಳಿ ಮಠದ 1944–1989ರವರಗೆ ಪೀಠಾಧ್ಯಕ್ಷರಾಗಿ ಕಾವೇರಿ ತೀರದ ಕಪ್ಪಡಿ ಕ್ಷೇತ್ರದ ದೇವಸ್ಥಾನ ಜೀರ್ಣೋದ್ಧಾರ ಮಾಡುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ ಎಂದರು.

ಅಲ್ಲದೆ ಮಳವಳ್ಳಿ ಮತ್ತು ಹೊನ್ನಾಯಕಹಳ್ಳಿ ಮಠದಗಳಲ್ಲಿಯ ಹಲವು ಅಭಿವೃದ್ಧಿ ಕಾರ್ಯಗಳಾಗಿವೆ. ಅಲ್ಲದೆ, ಮಂಟೇಸ್ವಾಮಿ ಕಾವ್ಯವನ್ನು ಪ್ರೊ.ಜಿ.ಶಂ.ಪ ಅವರಿಂದ ರಚಿಸಿ, ಪ್ರಕಟಿಸಲು ಕಾರಣೀಭೂತರಾಗಿದ್ದಾರೆ. ಮಂಟೇಸ್ವಾಮಿಯ ಬಗ್ಗೆಯ ಪ್ರಕಟಗೊಂಡ ಪ್ರಾರಂಭ ಬರಹಗಳಲ್ಲಿ ಪ್ರಮುಖವಾದುದು. ಇತ್ತೀಚಿನ ದಿನಗಳಲ್ಲಿ ಅನೇಕ ಬರಹಗಳನ್ನು ಕಾಣಬಹುದು ಎಂದರು.

ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಹಲವು ಬಗೆಯ ಜಾನಪದ ಗೀತೆಗಳಿವೆ. ಸುದೀರ್ಘವಾಗಿ ಜನಪದ ಕಾವ್ಯಗಳನ್ನು ಕಲಿತು ಹಾಡುವ ಗಾಯಕರಿದ್ದಾರೆ. ಮಂಟೇಸ್ವಾಮಿ ಗಾಯನದಲ್ಲಿ ನೀಲಗಾರರು ಪ್ರಮುಖರು. ಅಲ್ಲದೆ, ನೀಲಗಾರರು ಲಾವಣಿಯ ರೂಪದಲ್ಲಿ ಹಾಡುತ್ತಿದ್ದುದ್ದನ್ನು ಸಂಗ್ರಹಿಸುವ ಕೆಲಸ ದಿವಂಗತ ಎಂ.ಎಲ್.ರಾಜೇ ಅರಸ್ ಅವರಿಗೆ ಪ್ರಿಯವಾದ ಕೆಲಸವಾಗಿತ್ತು ಎಂದರು.

ಮಂಟೇಸ್ವಾಮಿ ಚರಿತ್ರೆ ಕೇವಲ ಹಳೆ ಮೈಸೂರು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ಉತ್ತರ ಕರ್ನಾಟಕದ ಕೊಡಕಲ್ಲು ಸ್ಥಳದಿಂದಲೂ ಮಂಟೇಸ್ವಾಮಿ ಕಾವ್ಯದ ಐತಿಹಾಸಿಕ ಹೆಜ್ಜೆಗಳು ಸಾಗುತ್ತದೆ. ಒಟ್ಟಿನಲ್ಲಿ ಮಂಟೇಸ್ವಾಮಿ ಕಾವ್ಯಗಳ ಬಗ್ಗೆ ಶರಣರ ಕಾಲದ ಅನೇಕ ಐತಿಹಾಸಿಕ ಘಟನೆಗಳ ಬಗ್ಗೆ ಉಲ್ಲೇಖವಿರುವುದನ್ನು ಕಾಣಬಹುದು ಎಂದರು.

ಈ ಸಂದರ್ಭದಲ್ಲಿ ಹಿರಿಯ ಕಲಾವಿದ ಬಸವರಾಜ್ ಜೆ.ಭಂಟನೂರು ಅವರು, ಮಂಟೇಸ್ವಾಮಿ ಕಾವ್ಯಗಳನ್ನು ಸೊಗಸಾಗಿ ಹಾಡಿದರು. ಇವರಿಗೆ ವಿದ್ವಾನ್ ಭೀಮಾಶಂಕರ್(ತಬಲ), ವಿದ್ವಾನ್ ಅರುಣ್ ಕುಮಾರ್ (ರಿದಂ), ವಿದುಷಿ ಸುನಿತಾ ಸಂಸ್ಥಾನ ಮಠ (ತಂಬೂರಿ), ಶಿವದೇವ ಸಂಸ್ಥಾನಮಠ (ಹಾರ್ಮೋನಿಯಂ) ನುಡಿಸಿ ಸಾಥ್ ನೀಡಿದರು. ವೇದಿಕೆಯಲ್ಲಿ ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರ್ ರಾಜೇ ಅರಸು, ಕಾರ್ಯದರ್ಶಿ ಮಹೇಶ್, ಗುರುರಾಜ್, ಪ್ರಾಯೋಜಕಿ ಎಂ.ಆರ್.ಭಾರತಿ ಅರಸ್ ಇತರರಿದ್ದರು.

ಸಂಸ್ಕೃತ ಭಾಷೆ ಅಧ್ಯಯನದಿಂದ ದೇಶದ ಸಂಸ್ಕೃತಿ ದರ್ಶನ

ಪ್ರತಿಭಾ ಪುರಸ್ಕಾರದಲ್ಲಿ ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಅಭಿಮತ



ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಂಸ್ಕೃತ ವಿಷಯದಲ್ಲಿ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಸನ್ಮಾನಿಸಿದರು.

ಮೈಸೂರು,ಸೆ.30(ಎಂಟಿವೈ)– ಸಂಸ್ಕೃತ ಭಾಷೆಯನ್ನು ಅರಿತು ಅಧ್ಯಯನ ಮಾಡಿದರೆ ದೇಶದ ಸಂಸ್ಕೃತಿ ಹಾಗೂ ಜ್ಞಾನ ಸಂಪತ್ತಿನ ದರ್ಶನವಾಗುತ್ತದೆ ಎಂದು ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕರ ಸಂಘ ಹಾಗೂ ಮೈಸೂರು ವಿಭಾಗೀಯ ಪ್ರೌಢಶಾಲಾ ಸಂಸ್ಕೃತ ಶಿಕ್ಷಕರ ಸಂಘವು ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಾಚೀನ ಭಾಷೆಯಾಗಿರುವ ಸಂಸ್ಕೃತ ಭಾಷೆ ಸಂಸ್ಕಾರ ಕಲಿಸುತ್ತದೆ. ದೇಶದ ಸಂಸ್ಕೃತಿ ಹಾಗೂ ಪರಂಪರೆಯನ್ನು ಸಂಸ್ಕೃತ ಬಿಂಬಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಸಂಸ್ಕೃತ ಕಲಿಯಲು ಮುಂದೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಸಂತೋಷಕರ ಸಂಗತಿ. ಸಂಸ್ಕೃತ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಇದಕ್ಕೆ ಅಂತ್ಯವಿಲ್ಲ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಂಸ್ಕೃತ ಭಾಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ನಿವೃತ್ತ ಶಿಕ್ಷಕ ಶ್ರೀಪಾದ ಭಟ್ಟ, ಹೇರಂಬ ಆರ್.ಭಟ್ಟ, ಎಂ.ಸಿ.ನಾಗಲಕ್ಷ್ಮೀ, ಎನ್. ಉದಯಶಂಕರ, ಡಾ.ಡಿ.ಮಹೇಶ್, ಸಂಸ್ಕೃತ ವಿಷಯ ಪರಿವೀಕ್ಷಕ ವೆಂಕಟರಮಣಭಟ್ಟ, ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘದ ಅಧ್ಯಕ್ಷ ಕೃಷ್ಣ ವಿ.ಭಟ್ ಇದ್ದರು.



ಮೈಸೂರು ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಮತ್ತು ಪ್ರವಾಸೋದ್ಯಮ ಪಾಲುದಾರರ ಸಹಯೋಗದೊಂದಿಗೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ವಾರ್ಡ್ ನಂ.40ರ ಶ್ರೀ ಕೃಷ್ಣ ಉದ್ಯಾನವನದಲ್ಲಿ ಸಸಿಗಳನ್ನು ನೆಡಲಾಯಿತು. ವಾರ್ಡ್‌ನ ಕಾರ್ಪೋರೇಟರ್ ಸತೀಶ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಗೈಡ್ ಅಸೋಸಿಯೇಷನ್‌ನ ಅಶೋಕ್, ಪುನೀತ್, ಬ್ರಹ್ಮಚಾರ್, ನಾರಾಯಣ ನಾಣಿ ಇನ್ನಿತರರು ಉಪಸ್ಥಿತರಿದ್ದರು.

ತಿಂಗಳ ಮೊದಲ ಶನಿವಾರ ‘ಹೆರಿಟೇಜ್ ವಾಕ್’, ಕಡೇ ಶನಿವಾರದಂದು ‘ಹೆರಿಟೇಜ್ ಟಾಕ್’

ತಲಕಾಡು ಉತ್ಖನನ ಕುರಿತು ಪ್ರೊ. ಎಂ.ಎಸ್.ಕೃಷ್ಣಮೂರ್ತಿಯವರಿಂದ ಉಪನ್ಯಾಸ

ಮೈಸೂರು,ಸೆ.30(ಆರ್‌ಕೆ)– ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಆಯುಕ್ತರ ಕಚೇರಿಯಿಂದ ತಿಂಗಳ ಮೊದಲ ಶನಿವಾರ ಹೆರಿಟೇಜ್ ವಾಕ್ (ಪಾರಂಪರಿಕ ನಡಿಗೆ) ಮತ್ತು ಕಡೇ ಶನಿವಾರ ಹೆರಿಟೇಜ್ ಟಾಕ್ (ಪಾರಂಪರಿಕ ಮಾತು) ಕಾರ್ಯಕ್ರಮ ಆರಂಭಿಸಲಾಗಿದೆ.



ಮೊದಲನೇ ಶನಿವಾರ ಮೈಸೂರಿನ ಪುರಭವನದಿಂದ ಆರಂಭವಾಗುವ ಪಾರಂಪರಿಕ ನಡಿಗೆಯು, ದೊಡ್ಡ ಗಡಿಯಾರ, ಅರಮನೆ ಉತ್ತರ ದ್ವಾರ, ಚಾಮರಾಜ ಒಡೆಯರ್ ಪ್ರತಿಮೆ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆಯ ಚಿಕ್ಕಗಡಿಯಾರ, ದೇವರಾಜ ಮಾರುಕಟ್ಟೆ, ಕೆ.ಆರ್. ಆಸ್ಪತ್ರೆ, ಮೈಸೂರು ಮೆಡಿಕಲ್ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು, ಕೇಂದ್ರ ಗ್ರಂಥಾಲಯ, ಕಾವಾ ಹಳೇ ಕಚೇರಿ ಪಾರಂಪರಿಕ ಕಟ್ಟಡ, ಹಳೇ ಬ್ಯಾಂಕ್ ರೋಡ್ ಮತ್ತು ಗಾಂಧಿ ಸ್ಕ್ವೇರ್ ಮೂಲಕ ಮರಳಿ ಟೌನ್‌ಹಾಲ್ ಬಳಿಗೆ ಹಿಂದಿರುಗಲಾಗುವುದು. ಆ ವೇಳೆ ಪಾರಂಪರಿಕ ತಜ್ಞರು ಹಾಜರಿದ್ದು ಪಾರಂಪರಿಕ ಕಟ್ಟಡಗಳ ಇತಿಹಾಸ, ಪರಂಪರೆ ಕುರಿತಂತೆ ಮಾಹಿತಿ ನೀಡುವರು. ಸೆಪ್ಟೆಂಬರ್ ಮೊದಲ ಶನಿವಾರ ನಡೆದ ಪಾರಂಪರಿಕ ನಡಿಗೆ ಕಾರ್ಯಕ್ರಮದಲ್ಲಿ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಪಾರಂಪರಿಕ ಸ್ಮಾರಕಗಳ ಇತಿಹಾಸದ ಬಗ್ಗೆ ಮಾಹಿತಿ ನೀಡಿದ್ದರು. ಅದೇ ರೀತಿ ಆಗಸ್ಟ್ 4ನೇ ವಾರ ದೊಡ್ಡಕೆರೆ ಮೈದಾನದ ಆವರಣದಲ್ಲಿರುವ ಪಾರಂಪರಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಹೆರಿಟೇಜ್ ವಾಕ್ ಕಾರ್ಯಕ್ರಮದಲ್ಲಿ ಕರ್ನಾಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಓಯು)ದ ಪ್ರಾಧ್ಯಾಪಕ ಪ್ರೊ. ಸರ್ಪಪಿಳ್ಳೆ ಅಯ್ಯಂಗಾರ್ ಅವರು ಮೇಲುಕೋಟೆಯ ಪ್ರಾಚೀನ ಮತ್ತು ಪುರಾತತ್ವ ಹಿನ್ನೆಲೆ ಕುರಿತು ಉಪನ್ಯಾಸ ನೀಡಿದ್ದರು.

ಸೆಪ್ಟೆಂಬರ್ ಕಡೇ ಶನಿವಾರವಾದ ಇಂದು (ಸೆ.30) ಮೈಸೂರು ವಿಶ್ವವಿದ್ಯಾನಿಲಯ ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಎಸ್.ಕೃಷ್ಣಮೂರ್ತಿ ತಲಕಾಡಿನ ಇತಿಹಾಸ, ಹಿನ್ನೆಲೆ, ಪುರಾತನ ಪಳೆಯುಳಿಕೆಗಳು, ಪತ್ತೆಯಾಗಿರುವ ಅಪರೂಪದ ಶಾಸನಗಳು, ಸಂರಕ್ಷಣೆ ಬಗ್ಗೆ ಸವಿವರ ಮಾಹಿತಿ ನೀಡಿದರು.

ಇಂದು ಕರ್ನಾಟಕ ಸೇನಾಪಡೆಯಿಂದ ಗಾಂಧಿ, ಶಾಸ್ತ್ರಿ ಜಯಂತಿ

ಮೈಸೂರು, ಸೆ.30–ಮಹಾತ್ಮ ಗಾಂಧಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಕಾರ್ಯಕ್ರಮವನ್ನು ಕರ್ನಾಟಕ ಸೇನಾಪಡೆ ವತಿಯಿಂದ ಅ.1ರಂದು ಬೆಳಗ್ಗೆ 11.30ಕ್ಕೆ ಅಗ್ರಹಾರ ವೃತ್ತದಲ್ಲಿ ಆಯೋಜಿಸಲಾಗಿದೆ. ಅಂದು ಕಾರ್ಯಕ್ರಮದಲ್ಲಿ ಯೋಗಾನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಹೋರಾಟಗಾರರ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪುಷ್ಪಾರ್ಚನೆ ಮಾಡಲಿದ್ದಾರೆ. ಡಿ.ದೇವರಾಜು ಅರಸು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆರ್.ಕೌಟಿಲ್ಯ ರಘು, ಪ್ರಧಾನ ಭಾಷಣ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಅಖಿಲ ಒಕ್ಕಲಿಗರ ಸಂಘದ ರಾಜ್ಯ ಉಪಾಧ್ಯಕ್ಷ ಸಿ.ಜಿ.ಗಂಗಾಧರ್, ಬಿಜೆಪಿ ಮುಖಂಡರಾದ ಡಾ.ಸಿ.ವೈ.ಶಿವೇಗೌಡ, ರಘು ಜೂ. ವಿಷ್ಣು, ಸುರೇಶ್‌ಗೋಲ್ಡ್ ಮತ್ತಿತರರು ಆಗಮಿಸಲಿದ್ದಾರೆ ಎಂದು ಸೇನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ತಿಳಿಸಿದ್ದಾರೆ.

ಪಾಂಡವಪುರದಲ್ಲಿ ಸ್ವಚ್ಛ ಭಾರತ್ ಅಭಿಯಾನಕ್ಕೆ ಚಾಲನೆ



ಪಾಂಡವಪುರ, ಸೆ.30– ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ನ್ಯಾಯಾಧೀಶರು, ವಕೀಲರು, ಪುರಸಭೆ ಅಧಿಕಾರಿಗಳು ಸ್ವಚ್ಛತಾ ಕಾರ್ಯ ಕೈಗೊಳ್ಳುವ ಮೂಲಕ ಸ್ವಚ್ಛ ಭಾರತ್ ಅಭಿಯಾನಕ್ಕೆ ಚಾಲನೆ ನೀಡಿದರು.

ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ನ್ಯಾಯಾಧೀಶರಾದ ಎಂ.ಮಂಜುನಾಥ್, ಬಿ.ಪಾರ್ವತಮ್ಮ, ಕೆ.ಎಂ.ಕಿಶೋರ್ ಕುಮಾರ್, ಪದ್ಮ, ವಕೀಲರು ಹಾಗೂ ಪುರಸಭೆ ಅಧಿಕಾರಿಗಳು ಕಸ ಸ್ವಚ್ಛಗೊಳಿಸುವ ಮೂಲಕ ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದರು. ನ್ಯಾಯಾಧೀಶ ಎಂ.ಮಂಜುನಾಥ್ ಮಾತನಾಡಿ, ಗಾಂಧಿ ಜಯಂತಿ ಅಂಗವಾಗಿ ದೇಶದೆಲ್ಲೆಡೆ ಸ್ವಚ್ಛ ಭಾರತ್ ಅಭಿಯಾನ ನಡೆಸಲಾಗುತ್ತಿದ್ದು, ಅದರಂತೆ ಪಟ್ಟಣದಲ್ಲೂ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಸಾರ್ವಜನಿಕರು ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿಕೊಂಡು ತಮ್ಮ ಮನೆ, ಮನೆಯಂಗಳ, ಕಚೇರಿ ಸೇರಿದಂತೆ ಎಲ್ಲೆಡೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಕಾಳೇಗೌಡ, ಕಾರ್ಯದರ್ಶಿ ನಾಗರಾಜು, ಶಿರಸ್ತೇದಾರ್ ಮಂಜುನಾಥ್, ಮುಖ್ಯಾಧಿಕಾರಿ ವೀಣಾ, ನ್ಯಾಯಾಲಯದ ಸಿಬ್ಬಂದಿ ವಕೀಲರು, ಪೌರಕಾರ್ಮಿಕರು ಹಾಜರಿದ್ದರು.

ನಾಳೆ ಗಾಂಧಿ ಜಯಂತಿ

ಮಂಡ್ಯ, ಸೆ.30– ಜಿಲ್ಲಾಡಳಿತ, ಜಿಪಂ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಿರ್ಮಿತಿ ಕೇಂದ್ರ, ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜೀ ಹಾಗೂ ಲಾಲಾ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಅ.2 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಕಾವೇರಿ ಉದ್ಯಾನವನದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಭಜನೆ, ಸರ್ವಧರ್ಮ ಪ್ರಾರ್ಥನೆ, ಉಪನ್ಯಾಸ, ರಕ್ತದಾನ ಶಿಬಿರ ಸೇರಿದಂತೆ ಇನ್ನಿತರ ಕಾರ್ಯಕ್ರಮ ನಡೆಯಲಿದೆ

ರೈತರನ್ನು ಕೆಣಕುವ ಆದೇಶ ನೀಡುತ್ತಿರುವ

ಪ್ರಾಧಿಕಾರದ ನಡೆ ಸರಿಯಲ್ಲ: ಪುಟ್ಟರಾಜು ಕಿಡಿ

ಮಂಡ್ಯ, ಸೆ.30– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಬರೆ ಮೇಲೆ ಬರೆ ಹಾಕುತ್ತಿದೆ. ನಮ್ಮ ರೈತರನ್ನು ಕೆಣಕುವ ಆದೇಶ ನೀಡುತ್ತಾ, ತಮಿಳುನಾಡಿಗೆ ನೀರು ಹರಿಸುವಂತೆ ಸೂಚಿಸುತ್ತಿರುವುದು ಸರಿಯಲ್ಲ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕಿಡಿಕಾರಿದರು.

ಶನಿವಾರ ನಗರದ ಸರ್‌ಎಂವಿ ಪ್ರತಿಮೆ ಬಳಿ ರೈತ ಹಿತರಕ್ಷಣಾ ಸಮಿತಿಯ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್ ಆದೇಶ ಧಿಕ್ಕರಿಸಿ ನೀರು ನಿಲ್ಲಿಸಬೇಕು. ನಿಮ್ಮ ಜೊತೆ ನಾವಿದ್ದೇವೆ. ಮಂಡ್ಯ ಜನರು ನಿಮ್ಮ ಜೊತೆ ನಿಲ್ಲುತ್ತಾರೆ ಎಂದು ಆಗ್ರಹಿಸಿದರು.

ನಮ್ಮ ಜಿಲ್ಲೆಯ ರೈತರನ್ನು ಪ್ರಾಧಿಕಾರ ಕೆಣಕುತ್ತಿದೆ. ಚಳವಳಿ ತೀವ್ರಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಹಾಲಿ ಶಾಸಕರು ಸ್ಪಂದಿಸುವ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಎಲ್ಲಾ ತಾಲ್ಲೂಕಿನಲ್ಲೂ ಮಾಜಿ ಶಾಸಕರ ನೇತೃತ್ವದಲ್ಲಿ ಹೋರಾಟ ಮಾಡಲು ಮುಂದಾಗಿದ್ದೇವೆ. ದೊಡ್ಡ ಮಟ್ಟದ ಚಳವಳಿ ಮುಂದುವರೆಯಲಿದೆ. ನ್ಯಾಯಕ್ಕಾಗಿ ಹೋರಾಟ ಮಾಡಲೇಬೇಕಿದೆ. ಯಾವ ನ್ಯಾಯ ಮಂಡಳಿ, ನ್ಯಾಯಾಲಯ, ಸರ್ಕಾರ ಹಾಗೂ ಪ್ರಾಧಿಕಾರದಿಂದಲೂ ನಮಗೆ ನ್ಯಾಯ ಸಿಗಲ್ಲ. ಸರ್ಕಾರ ಪ್ರಾಧಿಕಾರ ಸೂಚನೆ ಕೊಡದಿದ್ದರೂ ಆಗಲೇ ಗೇಟ್ ತೆಗೆದು ನೀರು ಬಿಡಲು ನಿಂತಿರುತ್ತಾರೆ. ಆದೇಶ ಬಂದ ಒಂದು ಗಂಟೆಯಲ್ಲಿ ನೀರು ಹೆಚ್ಚಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ನಮ್ಮ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವುದರಲ್ಲಿ ಉತ್ಸುಕವಾಗಿದ್ದು, ಅವಿವೇಕತನದ ನಿರ್ಧಾರ ಕೈಗೊಂಡಿದೆ. ತಕ್ಷಣ ನೀರು ನಿಲ್ಲಿಸಿ, ಕುಡಿಯಲು ನೀರು ಉಳಿಸಿಕೊಳ್ಳಬೇಕು. ನಮಗೆ ನ್ಯಾಯ ಸಿಗುತ್ತದೆ ಎನ್ನುವ ಭರವಸೆ ಇತ್ತು. ಆದರೆ ಕಾವೇರಿ ನೀರು ನಿರ್ವಹಣಾ ಮಂಡಳಿ ಕರ್ನಾಟಕವನ್ನು ಕೈಬಿಟ್ಟಿದ್ದು, ರಾಜ್ಯ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಕುಡಿಯುವ ನೀರನ್ನು ಸಹ ಪ್ರಾಧಿಕಾರ ಒದಗಿಸಿ ಕೊಟ್ಟಿಲ್ಲ ಎಂದು ಆರೋಪಿಸಿದರು.

ಮಳವಳ್ಳಿಯ ಧನಗೂರು ಮಠದ ಷಡಕ್ಷರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕಾವೇರಿ ಮಾತೆ ಆಶೀರ್ವಾದ ಇಲ್ಲದಿದ್ದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಗುರಿ ಮುಟ್ಟಲು ಸಾಧ್ಯವಾಗದು ಎಂದು ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ ಅವರು, ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ನಿರಂತರ ಅನ್ಯಾಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುನ್ನೆಚ್ಚರಿಕೆ ವಹಿಸದೆ ಕಡೆಗಣಿಸಿದರೆ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಅಧಿಕಾರದ ಹುಮ್ಮಸ್ಸಿನಲ್ಲಿರುವ ಅವರಿಗೆ ಕಾವೇರಿ ಮಾತೆ ಆಶೀರ್ವಾದ ಬೇಕಾಗುತ್ತದೆ. ಹಾಗಾಗಿ ರೈತರ ಹಿತ ಕಾಯಲು ದೃಢ ನಿರ್ಧಾರ ಮಾಡಬೇಕೆಂದರು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಜನರ ಪರ ನಿಲ್ಲಬೇಕು. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ನೀರು ನಿಲ್ಲಿಸದಿದ್ದರೆ ದೊಡ್ಡಮಟ್ಟದ ಹೋರಾಟ ಮಾಡಲಾಗುವುದು. ಅಲ್ಲದೇ ಪ್ರಾಧಿಕಾರ ವಜಾ ಮಾಡಬೇಕು. ಮುಖ್ಯಮಂತ್ರಿಗಳು ರೈತರ ಪರ ದೃಢ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮುಂದೆ ಜನಪ್ರತಿನಿಧಿಗಳ ಮನೆ ಎದುರು ಹೋರಾಟ ಮಾಡಲಾಗುವುದು. ಎಲ್ಲರೂ ಒಗ್ಗಟ್ಟಿನಿಂದ ಕಾವೇರಿ ಹೋರಾಟದಲ್ಲಿ ಭಾಗವಹಿಸಬೇಕು.
> - ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಈ ಹಿಂದೆ ಬಂಗಾರಪ್ಪ ಮುಖ್ಯಮಂತ್ರಿ ಆಗಿದ್ದಾಗ ಸುಗ್ರೀವಾಜ್ಞೆ ಜಾರಿಗೆ ತಂದು ರೈತರ ಕಾವಲು ಮುಂದಾಗಿದ್ದರು. ಈಗಲೂ ಸಹ ಮುಖ್ಯಮಂತ್ರಿ ಸಿದ್ದರಾಮಯ್ಯ ಕಠಿಣ ನಿರ್ಧಾರಕ್ಕೆ ಮುಂದಾಗಬೇಕು. ಕೇಂದ್ರದ ಬಳಿಗೆ ತುರ್ತಾಗಿ ಸರ್ವ ಪಕ್ಷ ನಿಯೋಗ ಕೊಂಡೊಯ್ಯಬೇಕು. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಆಳುವ ಸರ್ಕಾರಗಳ ಮಲತಾಯಿ ಧೋರಣೆ ಸಲ್ಲದು. ಸಂಕಷ್ಟ ಪರಿಸ್ಥಿತಿಯಲ್ಲಿ ಪ್ರಧಾನಿ ಮೋದಿ ಮಧ್ಯಪ್ರವೇಶಿಸಿ ಪರಿಹಾರ ರೂಪಿಸಬೇಕಾಗಿದೆ ಎಂದರು.

ನಾಡು, ನುಡಿ, ಜಲ ವಿಚಾರದಲ್ಲಿ ಪ್ರತಿಯೊಬ್ಬರೂ ಹೋರಾಟ ನಡೆಸಬೇಕು. ಕನ್ನಂಬಾಡಿ ಕಟ್ಟೆ ನಿರ್ಮಾಣವಾದಾಗಿನಿಂದ ನೀರು ಹಂಚಿಕೆ ವಿಚಾರವಾಗಿ ಸಮಸ್ಯೆ ತಲೆದೋರಿದೆ. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಗಂಗಾ–ಕಾವೇರಿ ನದಿ ಜೋಡಣೆಗೆ ಯೋಜನೆ ರೂಪಿಸಿದ್ದರು. ಅದು ಕಾರ್ಯಗತವಾಗಿದ್ದರೆ ಕಾವೇರಿ ನದಿ ನೀರಿನ ಸಮಸ್ಯೆ ಉಲ್ಬಣವಾಗುತ್ತಿರಲಿಲ್ಲ. ಇಂತಹ ಶಾಶ್ವತ ಪರಿಹಾರದ ಕಡೆ ಯೋಚಿಸಬೇಕಾಗಿದೆ. ವರುಣ ಅವಕೃಪೆಯಿಂದ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ. ರೈತರು ಬೆಳೆಗೆ ನೀರಿಲ್ಲ. ಕುಡಿಯುವ ನೀರಿಗೂ ಸಂಕಷ್ಟ ಎದುರಾಗಲಿದೆ. ಆಳುವ ಸರ್ಕಾರಗಳ ನಿರ್ಧಾರ ಜನಪರ ಇರಲಿ. ಮುಂದಿನ ದಿನಗಳಲ್ಲಿ ಮಳೆಯಾಗಿ ನಾಡು ಸುಭಿಕ್ಷವಾಗಿರಲಿ ಎಂದು ಆಶಿಸಿದರು.

ಲಿಂಗಪಟ್ಟಣದ ಓಂಕಾರೇಶ್ವರಸ್ವಾಮಿ ಮಾತನಾಡಿದರು. ಧರಣಿಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಅಪ್ಪಾಜಿ ನಾರಾಯಣಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಮುಖಂಡರಾದ ಅರವಿಂದ್, ಡಾ.ಇಂದ್ರೇಶ್, ಶಿವು, ಸಿ.ಟಿ.ಮಂಜುನಾಥ್, ರೈತ ರಕ್ಷಣಾ ಸಮಿತಿ ಸುನಂದಾ ಜಯರಾಂ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ರೈತ ಮುಖಂಡರಾದ ಚಂದ್ರಶೇಖರ್, ಸಿದ್ದರಾಮೇಗೌಡ, ಕನ್ನಡಸೇನೆ ಮಂಜುನಾಥ್, ಜಯ ಕರ್ನಾಟಕ ಯೋಗೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಅ.16ರಿಂದ 3 ದಿನ ಶ್ರೀರಂಗಪಟ್ಟಣ ದಸರಾ: ರಮೇಶ್‌ಬಾಬು



ಮಂಡ್ಯ, ಸೆ.30– ಜಿಲ್ಲಾಡಳಿತದಿಂದ ವಿಶ್ವವಿಖ್ಯಾತ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಅಕ್ಟೋಬರ್ 16, 17, 18 ರಂದು 3 ದಿನಗಳ ಕಾಲ ಸಾಂಪ್ರದಾಯಿಕ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ಶನಿವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಸಾರುವ ದಸರಾ ಮಹೋತ್ಸವವನ್ನು ಜನರ ಉತ್ಸವವನ್ನಾಗಿ ಅಚ್ಚುಕಟ್ಟಾಗಿ ನೆರವೇರಿಸಬೇಕು. ಎಲ್ಲಾ ಉಪಸಮಿತಿಗಳು ಸಮನ್ವಯ ಸಾಧಿಸಿ ಅತ್ಯುತ್ತಮ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ದಸರಾ ಮಹೋತ್ಸವ ಯಶಸ್ವಿಯಾಗಿಸಬೇಕು ಎಂದರು.

ದಸರಾ ಮಹೋತ್ಸವವನ್ನು ಅಚ್ಚುಕಟ್ಟಾಗಿ, ಪಾರಂಪರಿಕವಾಗಿ, ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಆಯೋಜಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ ಅವರು, 3 ದಿನಗಳ ಕಾರ್ಯಕ್ರಮಗಳ ರೂಪರೇಷೆಗಳನ್ನು ಸಿದ್ಧಪಡಿಸಬೇಕು. ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಿ. ಜೊತೆಗೆ ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯಕ್ರಮ ಆಯೋಜನೆ ಮಾಡಬೇಕು. ಜಿಲ್ಲೆಯ ಸಂಸ್ಕೃತಿ ಬಗ್ಗೆ ಹೆಚ್ಚಿನ ಕಾರ್ಯಕ್ರಮ ಆಯೋಜಿಸಿ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ವಿಧಾನಸಭಾ ಹಾಗೂ ವಿಧಾನಪರಿಷತ್ ಶಾಸಕರನ್ನೊಳಗೊಂಡ ಸಂಪೂರ್ಣ ದಸರಾ ಆಚರಣಾ ಸಮಿತಿ, ವೇದಿಕೆ ಸಮಿತಿ, ಸಾಂಸ್ಕೃತಿಕ ಸಮಿತಿ, ಮೆರವಣಿಗೆ, ವಸ್ತು ಪ್ರದರ್ಶನ, ಆರೋಗ್ಯ, ನಗರ ಅಲಂಕಾರ, ಕ್ರೀಡಾ, ಆಹಾರ ಹಾಗೂ ಹಣಕಾಸು ಸಮಿತಿ ರಚಿಸಲಾಗಿದೆ. ಎಲ್ಲಾ ಸಮಿತಿ ಸದಸ್ಯರು ಸಮನ್ವಯ ಸಾಧಿಸಿ ದಸರಾ ಮಹೋತ್ಸವ ಯಶಸ್ವಿಗೊಳಿಸಿ ಎಂದರು. ದಸರಾ ಮಹೋತ್ಸವದ ಮುಖ್ಯ ಆಯಾಮವೇ ಸಾಂಸ್ಕೃತಿಕ ಕಾರ್ಯಕ್ರಮ. ಹಾಗಾಗಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವಿವಿಧ ಕಲಾತಂಡಗಳ ಮೆರುಗು ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗು ವುದು. ಜೊತಗೆ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುವುದು ಎಂದರು.

ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್ ಮಾತನಾಡಿ, ಕಿರಂಗೂರು ಬನ್ನಿಮಂಟಪ, ಜಂಬೂ ಸವಾರಿ ಸಾಗುವ ರಸ್ತೆ, ಕಾರ್ಯಕ್ರಮ ನಡೆಯುವ ವೇದಿಕೆ ಸ್ಥಳಗಳನ್ನು ಸ್ವಚ್ಛಗೊಳಿಸುವ ಕೆಲಸ ಬರದಿಂದ ಸಾಗಲಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಪಾಂಡವಪುರ ಎಸಿ ನಂದೀಶ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಶ್ರೀರಂಗಪಟ್ಟಣ ತಹಸೀಲ್ದಾರ್ ಶ್ವೇತಾ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕ ಎಂ.ಕೃಷ್ಣಕುಮಾರ್ ಇನ್ನಿತರಿದ್ದರು.

ಹಲಗೂರು: ಇಬ್ಬರು ಆನೆ ದಂತ ಕಳ್ಳರ ಬಂಧನ



ಹಲಗೂರು, ಸೆ.30– ಆನೆದಂತ ಕಳವು ಮಾಡಿ ಮಾರಲು ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಹಲಗೂರಿನ ಮುತ್ತತ್ತಿ ಗ್ರಾಮದ ನಿವಾಸಿ ಕೋಣನ ಕರಿಯ ಮತ್ತು ಸಿದ್ದರಾಜು ಬಂಧಿತ ಆರೋಪಿಗಳು. ಖಚಿತ ಮಾಹಿತಿ ಮೇರೆಗೆ ಕನಕಪುರ ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗೇಂದ್ರ ಪ್ರಸಾದ್ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ರವಿ ಬುರ್ಜಿ ಹಾಗೂ ಸಿಬ್ಬಂದಿ ಆರೋಪಿಗಳನ್ನು ಆನೆ ದಂತಗಳ ಸಮೇತ ವಶಕ್ಕೆ ಪಡೆದು ವನ್ಯಜೀವಿ ರಕ್ಷಣೆ ಕಾಯ್ದೆ 1972ರಡಿ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾವೇರಿ ವನ್ಯಜೀವಿ ವಲಯ ಹಲಗೂರು ಉಪ ವಲಯದ ಶಿಂಷಾ ಶಾಖೆಯ ಮರಚಲುಕಡ ಅರಣ್ಯ ಪ್ರದೇಶದಲ್ಲಿ ಗಂಡಾನೆ ಮೃತಪಟ್ಟಿದ್ದು, ದಂತಗಳನ್ನು ಕಳುವು ಮಾಡಿರುವ ಬಗ್ಗೆ ಸೆ.27ರಂದು ಪ್ರಕರಣ ದಾಖಲಾಗಿತ್ತು. ಆರೋಪಿಗಳ ಬಂಧನಕ್ಕೆ ತಂಡ ರಚಿಸಿ ತನಿಖೆ ಕೈಗೊಳ್ಳಲಾಗಿತ್ತು. ಸೆ.29ರಂದು ಬೆಳಗ್ಗೆ ಖಚಿತ ಮಾಹಿತಿ ಮೇರೆಗೆ ಇಬ್ಬರು ಆರೋಪಿಗಳನ್ನು ಬಂಧಿಸಿ, ದಂತಗಳನ್ನು ಮಾರಾಟ ಮಾಡಲು ಬಚ್ಚಿಟ್ಟಿದ್ದ ಪ್ರದೇಶಕ್ಕೆ ತೆರಳಿ ಆನೆ ದಂತಗಳನ್ನು ವಶಕ್ಕೆ ಪಡೆಯಲಾಗಿದೆ.

ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳಾದ ಪ್ರವೀಣ್ ಕುಮಾರ್, ಕುಮಾರ್ ಸ್ವಾಮಿ, ಗಸ್ತು ಅರಣ್ಯಪಾಲಕರಾದ ಮಲ್ಲಿಕಾರ್ಜುನ, ಪ್ರಕಾಶ್, ಸಿದ್ದರಾಮ ಪೂಜಾರಿ, ಶಿವರಾಜ್, ಶ್ರೇಯಾಂಶ ವಸವಾಡೆ, ಮಲ್ಲಿಕಾರ್ಜುನ ಬಿರದಾರ್, ಮೌನೇಶ, ಮಾಳಪ್ಪ, ಜಯರಾವ್, ತಿಮ್ಮಪ್ಪ, ಚೇತನ್, ಕಿರಣ್ ಪಾಲ್ಗೊಂಡಿದ್ದರು.

ಯುವಕರಿಗೆ ನಮ್ಮ ಆಚಾರ ವಿಚಾರ, ಸಂಸ್ಕೃತಿ ಅರಿವು ಅಗತ್ಯ

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಅಭಿಪ್ರಾಯ



ಮಂಡ್ಯ, ಸೆ.30– ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿದ್ದ ಆಚಾರ ವಿಚಾರ ಮತ್ತು ಸಂಸ್ಕೃತಿ ನಶಿಸಿ ಹೋಗುತ್ತಿದ್ದು, ಯುವ ಪೀಳಿಗೆ ಆಧುನಿಕತೆಗೆ ತಕ್ಕಂತೆ ಬದಲಾಗುತ್ತಿದ್ದಾರೆ. ಆ ನಿಟ್ಟಿನಲ್ಲಿ ಯುವಕರಲ್ಲಿ ಅರಿವು ಮೂಡಿಸಿ ಹಿರಿಯರ ಆಚಾರ ವಿಚಾರಗಳನ್ನು ಉಳಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ತಿಳಿಸಿದರು.

ಶನಿವಾರ ನಗರದ ಗಾಂಧಿ ಭವನದಲ್ಲಿ ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್, ಹಿರಿಯ ಸಹಕಾರಿ ಧುರೀಣ ಎನ್.ರಾಜು ಸಂಸ್ಮರಣ ಅಭಿಮಾನಿ ಬಳಗ, ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಜೀವನಯಾತ್ರಿ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಯುವ ಪೀಳಿಗೆಯಿಂದ ನಮ್ಮ ಹಳೆಯ ಸಂಸ್ಕೃತಿ ನಶಿಸಿ, ಪಾಶ್ಚಿಮಾತ್ಯ ಪದ್ಧತಿ ಹೆಚ್ಚಾಗುತ್ತಿದೆ. ಆದರೆ ಪ್ರಸ್ತುತ ಎನ್.ರಾಜು ಕುರಿತು ಲೇಖಕ ಲೋಕೇಶ್ ಚಂದಗಾಲು ರಚಿಸಿರುವ ಜೀವನಯಾತ್ರಿ ಪುಸ್ತಕದಲ್ಲಿ ಸಂಸ್ಕೃತಿ ಪ್ರತಿಬಿಂಬಿಸುವ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದೆ ಎಂದು ಶ್ಲಾಘಿಸಿದರು.

ಸಹಕಾರಿ ಕ್ಷೇತ್ರದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಎನ್.ರಾಜಣ್ಣ ಕಾರ್ಯ ನಿರ್ವಹಿಸಿ ಹೆಸರು ಸಂಪಾದಿಸಿದ್ದಾರೆ. ಜೊತೆಗೆ ಮನ್‌ಮುಲ್ ನಿರ್ದೇಶಕರಾಗಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಅವರು, ಕಾವೇರಿ ಹೋರಾಟ ಹಾಗೂ ಗಾಂಧಿ ಭವನ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದು ಸ್ಮರಿಸಿದರು.

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಸಹಕಾರ, ಹೋರಾಟ ಕ್ಷೇತ್ರದಲ್ಲಿ ಎನ್.ರಾಜಣ್ಣ ಅವರದ್ದು ಮಹತ್ವದ ಹೆಸರಾಗಿದೆ. ಜಿಲ್ಲೆಯಲ್ಲಿ ತನ್ನದೇ ಆದ ಚಾಪು ಮೂಡಿಸಿದ್ದ ದಿ.ರಾಜಣ್ಣ ಅವರು ದಿ.ಜಿ.ಮಾದೇಗೌಡರ ಒಡನಾಡಿಯಾಗಿ ಅನೇಕ ಮಹತ್ಕಾರ್ಯಗಳನ್ನು ಮಾಡಿದ್ದಾರೆ. ನನ್ನ ಶಿಕ್ಷಣ ಹಾಗೂ ರಾಜಕೀಯ ಕ್ಷೇತ್ರಗಳ ಏಳ್ಗೆಗೆ ಅವರ ಪಾತ್ರವೂ ಇದೆ. ಇಂತಹ ಶ್ರೇಷ್ಠ ವ್ಯಕ್ತಿತ್ವದ ಮನುಷ್ಯ ಬೇಗ ಅಗಲಿದ್ದು, ಬಹಳ ಬೇಸರದ ಸಂಗತಿ ಎಂದರು.

ಇದೇ ವೇಳೆ ಲೇಖಕ ಲೋಕೇಶ್ ಚಂದಗಾಲು ಅವರು ಎನ್.ರಾಜಣ್ಣ ಕುರಿತು ರಚಿಸಿರುವ ಜೀವನ ಯಾತ್ರಿ ಪುಸ್ತಕ ಬಿಡುಗಡೆ ಮಾಡಲಾಯಿತು. ಜೊತೆಗೆ ಮೇಲುಕೋಟೆ ಜಿಪಂ ಮಾಜಿ ಸದಸ್ಯ ಕೆ.ಬಿ.ನರಸಿಂಹೇಗೌಡ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಹಕಾರ ಇಲಾಖೆ ನಿವೃತ್ತ ನಿರ್ದೇಶಕ ಪಿ.ರಾಮಕೃಷ್ಣೇಗೌಡ, ಲೇಖಕ ಲೋಕೇಶ್ ಚಂದಗಾಲು, ಅವಿನಾಶ್ ಗ್ರಾಫಿಕ್ಸ್‌ನ ಎನ್.ನಾಗರಾಜು, ರಾಜು ರವರ ಧರ್ಮಪತ್ನಿ ಸಾವಿತ್ರಮ್ಮ ಉಪಸ್ಥಿತರಿದ್ದರು.

ಪೌರಕಾರ್ಮಿಕರು ಸಮಾಜದ ಆರೋಗ್ಯ ರಕ್ಷಕರು

ಹುಣಸೂರು ಪೌರಕಾರ್ಮಿಕರ ದಿನಾಚರಣೆಯಲ್ಲಿ ಪೌರಾಯುಕ್ತೆ ಮಾನಸ



ಹುಣಸೂರು, ಸೆ.30– ಪೌರ ಕಾರ್ಮಿಕರು ಸಮಾಜದ ಆರೋಗ್ಯ ರಕ್ಷಕರು. ನಿಮ್ಮ ವೃತ್ತಿ ಬಗ್ಗೆ ಕೀಳರಿಮೆ ಬೇಡ ಎಂದು ನಗರಸಭೆ ಪೌರಾಯುಕ್ತೆ ಮಾನಸ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಮಿಕ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ನಾವು ನಮ್ಮ ವೃತ್ತಿ ಗೌರವಿಸುವುದರಿಂದ ಆ ಕೆಲಸದಲ್ಲಿ ಪರಿಪೂರ್ಣತೆ ಸಿಗಲಿದೆ. ಪೌರ ಕಾರ್ಮಿಕ ಎಂಬ ಕೀಳರಿಮೆ ನಿಮ್ಮ ಬೆಳವಣಿಗೆಗೆ ಮಾರಕವಾಗಲಿದೆ. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಅವರು ಹೊಸ ಬದುಕು ಕಟ್ಟಿಕೊಳ್ಳುವಂತೆ ಮಾಡಬೇಕು ಎಂದು ಸಲಹೆ ನೀಡಿದರು. ಪುರಸಭಾ ಸದಸ್ಯೆ ರಾಣಿ ಪೆರುಮಾಳ್ ಮಾತನಾಡಿ, ಪೌರ ಕಾರ್ಮಿಕರಿಗೆ ಪ್ರತಿಯೊಂದು ಹಂತದಲ್ಲೂ ಅನ್ಯಾಯವಾಗುತ್ತಿದೆ. ನಗರ ಸ್ವಚ್ಛತೆ ಕಾಯ್ದುಕೊಳ್ಳುವ ನಮ್ಮ ಸಮು ದಾಯಗಳಿಗೆ ಕುಡಿಯಲು ಶುದ್ಧ ಕಾವೇರಿ ನೀರು ಕಲ್ಪಿಸಲು ಮೀನಾಮೇಷ ಎಣಿಸಲಾಗುತ್ತಿದೆ. ಕಳೆದ 3 ವರ್ಷಗಳಿಂದ ಪೌರ ಕಾರ್ಮಿಕರಿಗೆ ವಸತಿ ಕಲ್ಪಿಸುವಂತೆ ಮನವಿ ಮಾಡಿದರೂ ಜನಪ್ರತಿನಿಧಿಗಳು ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಗರದ ಪೌರ ಕಾರ್ಮಿಕರೊಬ್ಬರು ವರ್ಷದ ಹಿಂದೆ ಮೃತಪಟ್ಟಿದ್ದು, ಅವರ ಕುಟುಂಬಕ್ಕೆ ನಗರಸಭೆಯಲ್ಲಿ ಸಿಗಬೇಕಿರುವ ವಿಮೆ ಹಣ ಈವರೆಗೂ ಸಿಕ್ಕಿಲ್ಲ ಎಂದು ಆರೋಪಿಸಿದರು. ಪೌರಕಾರ್ಮಿಕ ಸಂಘದ ಅಧ್ಯಕ್ಷ ಮುರುಗೇಶ್ ಮಾತನಾಡಿ, ಪೌರಕಾರ್ಮಿಕರಿಗೆ ನಿವೇಶನ, ವಿದ್ಯುತ್ ಚಾಲಿತ ದ್ವಿಚಕ್ರವಾಹನ ನೀಡಬೇಕು ಎಂದು ಒತ್ತಾಯಿಸಿ ಮನವಿ ನೀಡಿದರು. ಸದಸ್ಯರಾದ ಸತೀಶ್‌ಕುಮಾರ್, ಕೃಷ್ಣರಾಜಗುಪ್ತ, ಸ್ವಾಮಿಗೌಡ ಮಾತನಾಡಿದರು.

ಪೌರ ಕಾರ್ಮಿಕರಾದ ನಾಗರಾಜು, ಕಿಟ್ಟಿ, ಗಣೇಶ್, ಚಂದ್ರು, ಬನ್ನಾರಿ ಅವರನ್ನು ಸನ್ಮಾನಿಸಲಾಯಿತು. ಕ್ರೀಡಾಕೂಟದಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಲಾಯಿತು. ಪರಿಸರ ಇಂಜಿನಿಯರ್ ರೂಪ, ಆರೋಗ್ಯ ನಿರೀಕ್ಷಕರಾದ ಸತೀಶ್, ಶಶಿ ಕುಮಾರ್, ಸೋಮಸುಂದರ್, ಮಧುಸೂದನ್, ಇಂಜಿನಿಯರ್ ಶರ್ಮಿಳ, ಸಮಂತ್, ಸದಸ್ಯರಾದ ದೇವರಾಜು.ಸಿ, ಮಾಲಿಕ್‌ಪಾಷ, ಸಯ್ಯದ್ ಉನ್ನಿಸಾ, ಯಾಸ್ಮೀನ್ ತಾಜ್, ಗೀತಾ ನಿಂಗರಾಜು, ಶ್ರೀನಾಥ್ ಉಪಸ್ಥಿತರಿದ್ದರು.

ನೂತನ ಸಿಪಿಐಗೆ ಅಭಿನಂದನೆ



ಕೆ.ಆರ್.ಪೇಟೆ, ಸೆ.30– ಪಟ್ಟಣ ಪೊಲೀಸ್ ಠಾಣೆ ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿದ ಸುಮಾರಾಣಿ ಅವರನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಹಾಗೂ ವಕೀಲ ವಿ.ಎಸ್. ಧನಂಜಯ್ ಕುಮಾರ್ ಹೂಗುಚ್ಛ ನೀಡಿ ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಿಪಿಐ ಸುಮಾರಾಣಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸುವ ಊರು ಕೃಷ್ಣರಾಜಪೇಟೆ ತಾಲೂಕಿನ ಜನತೆ ನಾನು ಇಲ್ಲಿಗೆ ಬಂದಾಗಿನಿಂದಲೂ ನಿತ್ಯ ಹತ್ತಾರು ಮಂದಿ ಅಭಿನಂದಿಸುತ್ತಿದ್ದು, ಅವರ ಹೃದಯ ವೈಶಾಲ್ಯತೆಗೆ ಬೆಲೆ ಕಟ್ಟಲಾಗದು. ತಾಲೂಕಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳನ್ನು ಹತ್ತಿಕ್ಕಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಸೆ.30– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ವೃತ್ತಿಪರ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಮತ್ತು ಪ.ಜಾ/ಪ.ವರ್ಗ ಸೇರಿದ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅ.11ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಹೊಂದಬೇಕು



ನಾಗಮಂಗಲ, ಸೆ.30– ಸರ್ಕಾರಿ ಶಾಲಾ ಮಕ್ಕಳಿಗೆ ಹಾಲು, ಬಿಸಿ ಊಟ ಮತ್ತು ಮೊಟ್ಟೆ ವಿತರಿಸುತ್ತಿದ್ದು, ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಹೊಂದಬೇಕು ಎಂದು ಚೀಣ್ಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ಉಮಾಶಂಕರ್ ತಿಳಿಸಿದರು.

ತಾಲೂಕಿನ ಚೀಣ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದಿಂದ ಆಯೋಜಿಸಿದ್ದ ರಾಷ್ಟ್ರೀಯ ಪೋಷಣಾ ಅಭಿಯಾನ ಉದ್ಘಾಟಿಸಿ ಮಾತನಾಡಿ, ಪೋಷಣೆಗೆ ಸಂಬಂಧಿಸಿದಂತೆ ಸರ್ಕಾರ ನೀಡುತ್ತಿರುವ ಹಾಲು, ಬಿಸಿಯೂಟ ಮತ್ತು ಮೊಟ್ಟೆ ವಿತರಣೆ ಬಗ್ಗೆ ವಿವರಣೆ ನೀಡಿದರು. ಅಲ್ಲದೇ ಸರ್ಕಾರದ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಿಕ್ಷಕಿ ಪಿ.ತೇಜಸ್ವಿನಿ, ಶಿಕ್ಷಕ ಬಸವೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಶಿಕ್ಷಕರಾದ ಗಾಯಿತ್ರಿ, ಶೃತಿ, ಶ್ರೀಧರ್, ಪ್ರಕಾಶ್, ರುದ್ರೇಶ್ ಹಾಗೂ ಅಡುಗೆ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.

ತಲಕಾಡು ಸರ್ಕಾರಿ ಪಿಯು ಕಾಲೇಜು ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆ



ತಿ.ನರಸೀಪುರ, ಸೆ.30– ತಾಲೂಕು ಮಟ್ಟದಲ್ಲಿ ನಡೆದ ಪ್ರಸಕ್ತ ಸಾಲಿನ ಕ್ರೀಡಾಕೂಟದಲ್ಲಿ ತಲಕಾಡು ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಾಲೇಜಿನ ಪ್ರಾಚಾರ್ಯರಾದ ಬಿ.ನಾಗರತ್ನ ತಂಡದ ಪರಿಶ್ರಮವನ್ನು ಶ್ಲಾಘಿಸಿದ್ದು, ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ತಾಲೂಕಿನ ಜನತೆ ಹೆಮ್ಮೆ ಪಡುವಂತೆ ಮಾಡಿದೆ. ಕಾಲೇಜಿನ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಿ ಇಪ್ಪತ್ತೊಂದು ಪದಕಗಳನ್ನು ಪಡೆಯುವುದರ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ ಎಂದರು. ಅಲ್ಲದೇ ಈ ರೀತಿ ಒಂದೇ ಕಾಲೇಜಿನ ವಿದ್ಯಾರ್ಥಿಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪದಕ ಪಡೆದಿರುವುದು ಉತ್ತಮ ಸಾಧನೆಯಾಗಿದ್ದು, ಕಾಲೇಜು, ಪೋಷಕರು ಹಾಗೂ ಗ್ರಾಮದ ಜನತೆಗೆ ಸಂತಸ ತಂದಿದೆ ಎಂದು ಬಣ್ಣಿಸಿದರು. ಉಪನ್ಯಾಸಕರಾದ ವಿ.ಎಂ. ಮಲ್ಲೇಶ್ ಮಾತನಾಡಿ, ಶಾಲೆಯ ವಿದ್ಯಾರ್ಥಿಗಳಿಗೆ ಒಟ್ಟು ಇಪ್ಪತ್ತೊಂದು ಪದಕಗಳು ದೊರೆತಿವೆ ಎಂದರು.

ಇದೇ ಸಂದರ್ಭದಲ್ಲಿ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕಗಳನ್ನು ಪಡೆದ ವಿದ್ಯಾರ್ಥಿಗಳಾದ ಕಿಶೋರ್, ಮಹದೇವಸ್ವಾಮಿ, ರಾಜೇಶ, ಅರುಣ್, ಮಲ್ಲಿಕಾರ್ಜುನ, ಯಾಮಿನಿ, ಅನುಷಾ, ಲಕ್ಷ್ಮೀ ಮತ್ತು ಅಮೂಲ್ಯ ಅವರುಗಳನ್ನು ಕಾಲೇಜಿನ ಸಿಬಿಸಿ ಉಪಾಧ್ಯಕ್ಷ ಹಾಗೂ ತಾಪಂ ಮಾಜಿ ಸದಸ್ಯ ನರಸಿಂಹಮಾದ ನಾಯಕ ಮತ್ತು ಕಾಲೇಜಿನ ಅಧ್ಯಾಪಕ ವೃಂದ ಅಭಿನಂದಿಸಿದರು.

ಉಪನ್ಯಾಸಕರಾದ ಎನ್. ಚಂದ್ರಶೇಖರ್, ಟಿ.ಎಸ್. ಅನಸೂಯ, ಎಸ್.ಜಿ. ಸುಧೀರ್, ಲೋಕೇಶ್, ಮಾಲಿನಿ, ಎಸ್. ಪರಶಿವಮೂರ್ತಿ, ಚೈತ್ರಶ್ರೀ, ವಿ.ಎಂ. ಮಲ್ಲೇಶ್, ಜಿ. ಆನಂದ್ ಕುಮಾರ್ ಉಪಸ್ಥಿತರಿದ್ದರು.

ಇಂದು ಗುರುವಂದನೆ, ಅಪೂರ್ವ ಸಮ್ಮಿಲನ

ಭೇರ್ಯ, ಸೆ.30– ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದಲ್ಲಿ ಹಳೆಯ ವಿದ್ಯಾರ್ಥಿ ಬಳಗದಿಂದ ಗುರು ವಂದನೆ ಮತ್ತು ಅಪೂರ್ವ ಸಮ್ಮಿಲನ ಕಾರ್ಯಕ್ರಮವನ್ನು ಅ.1 ರಂದು ಬೆಳಗ್ಗೆ 11 ಗಂಟೆಗೆ ಗ್ರಾಮದ ಎಂಟಿಎಂ ಫಂಕ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

1991 ಮತ್ತು 93ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಮಿಥಿಲಾ ವಿದ್ಯಾ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಪ್ರಪ್ರಥಮ ಬಾರಿಗೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ದರ್ಶನ್ ಜನಾರ್ಧನ್ ನಿರ್ದೇಶಕರು ಹಣಕಾಸು ಬೆಸ್ಕಾಂ ಬೆಂಗಳೂರು ಇವರು ಉದ್ಘಾಟಿಸಲಿದ್ದು , ನಿರ್ಮಿತಿ ಕೇಂದ್ರ ಮೈಸೂರು ನಿವೃತ್ತ ಎಇ ಎಂ.ಟಿ. ಮಂಜುನಾಥ್ ಜ್ಯೋತಿ ಬೆಳಗಿಸಲಿದ್ದು, ಅಧ್ಯಕ್ಷತೆಯನ್ನು ಮರಿಸ್ವಾಮಿ ಎಂ. ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಮೈಸೂರು ಇವರು ವಹಿಸಲಿದ್ದಾರೆ.



ನಂಜನಗೂಡು ತಾಲೂಕಿನ ಬಿಳುಗಲಿ ಗ್ರಾಮದಲ್ಲಿ ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗೌರಿ–ಗಣೇಶನನ್ನು ಮೆರವಣಿಗೆ ಮೂಲಕ ವಿಸರ್ಜಿಸಲಾಯಿತು.

ರಾಜ್ಯೋತ್ಸವ ಪ್ರಶಸ್ತಿ: ತಜ್ಞರ ಸಲಹಾ ಸಮಿತಿ ರಚನೆ



ಬೆಂಗಳೂರು, ಸೆ.30– ಈ ಸಾಲಿನ 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ 30 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ಸರ್ಕಾರ ರಚಿಸಿದೆ.

ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ಸಾರ್ವಜನಿಕರು 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನಾಮನಿರ್ದೇಶನ ಮಾಡಬಹುದಾಗಿದೆ. ಅ.1ರಿಂದ ಅ.15ರ ವರೆಗೆ ನಾಮ ನಿರ್ದೇಶನಕ್ಕೆ ಅವಕಾಶ ನೀಡಲಾಗಿದೆ. ಸಾಧಕರ ಆಯ್ಕೆ ಸಮಿತಿಯು ಸಾಹಿತ್ಯ, ವೈದ್ಯಕೀಯ, ಕೃಷಿ, ಸಮಾಜಸೇವೆ, ಚಲನಚಿತ್ರ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಪ್ರತಿನಿಧಿಗಳು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಸಲಹಾ ಸಮಿತಿ ಸದಸ್ಯರು: ಸಾಹಿತ್ಯ ಕ್ಷೇತ್ರದಿಂದ ಜಾಣಗೆರೆ ವೆಂಕಟರಾಮಯ್ಯ, ಎಚ್.ಎಲ್.ಪುಷ್ಪ, ವೀರಣ್ಣ ದಂಡೆ, ಮೂಡ್ನಾಕೂಡು ಚಿನ್ನಸ್ವಾಮಿ, ಅಲ್ಲಮಪ್ರಭು ಬೆಟ್ಟದೂರ, ಕಾ.ತ.ಚಿಕ್ಕಣ್ಣ, ವೈದ್ಯಕೀಯ ಕ್ಷೇತ್ರದಿಂದ ಡಾ.ಸಿ.ಆರ್.ಚಂದ್ರಶೇಖರ್, ಜಾನಪದ ಕ್ಷೇತ್ರದಿಂದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಕೃಷ್ಣಮೂರ್ತಿ ಹನೂರು, ಟಾಕಪ್ಪ ಕಣ್ಣೂರು, ಪಿಚ್ಚಳ್ಳಿ ಶ್ರೀನಿವಾಸ್, ಕೃಷಿ ಕ್ಷೇತ್ರದಿಂದ ವಿಠಲ್ ಐ. ಬೆಣಗಿ, ಸಮಾಜಸೇವೆ ಕ್ಷೇತ್ರದಿಂದ ಸಣ್ಣರಾಮ ಹಾಗೂ ಹೃಷಿಕೇಶ್ ಬಹದ್ದೂರ್ ದೇಸಾಯಿ ಸದಸ್ಯರಾಗಿದ್ದಾರೆ.

ಶಿಲ್ಪಕಲೆ ಕ್ಷೇತ್ರದಿಂದ ವೆಂಕಟರಮಣಯ್ಯ, ಚಿತ್ರಕಲೆ ಹಾಗೂ ಶಿಲ್ಪಕಲೆ ಕ್ಷೇತ್ರದಿಂದ ಎಂ.ಎಸ್. ಮೂರ್ತಿ, ನೃತ್ಯ ಕ್ಷೇತ್ರದಿಂದ ಗೀತಾ ಶಿವಮೊಗ್ಗ, ಶಾಸ್ತ್ರೀಯ ಸಂಗೀತ ಕ್ಷೇತ್ರದಿಂದ ಜಯದೇವಿ ಜಂಗಮ ಶೆಟ್ಟಿ, ಯಕ್ಷಗಾನ ಕ್ಷೇತ್ರದಿಂದ ಐರೋಡಿ ಗೋವಿಂದಪ್ಪ, ಚಲನಚಿತ್ರ ಕ್ಷೇತ್ರದಿಂದ ಸಾಧುಕೋಕಿಲ, ಕ್ರೀಡಾ ಕ್ಷೇತ್ರದಿಂದ ರೀತು ಅಬ್ರಹಾಂ, ಸುಗಮ ಸಂಗೀತ ಕ್ಷೇತ್ರದಿಂದ ಸುಕನ್ಯಾ ಪ್ರಭಾಕರ್, ಹಿಂದೂಸ್ಥಾನಿ ಸಂಗೀತ ಕ್ಷೇತ್ರದಿಂದ ಫಯಾಜ್ ಖಾನ್, ವಾದ್ಯ ಸಂಗೀತ ಕ್ಷೇತ್ರದಿಂದ ನರಸಿಂಹಲು ವಡವಾಟಿ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಆಡಳಿತ ಕ್ಷೇತ್ರದಿಂದ ನಿವೃತ್ತ ಐಎಎಸ್ ಅಧಿಕಾರಿ ಡಿ.ಎನ್. ನರಸಿಂಹರಾಜು, ಶಿಕ್ಷಣ ಕ್ಷೇತ್ರದಿಂದ ಪುರುಷೋತ್ತಮ ಬಿಳಿಮಲೆ, ಪ್ರಕಾಶನ ಕ್ಷೇತ್ರದಿಂದ ಚನ್ನಬಸವಣ್ಣ, ಪತ್ರಿಕೋದ್ಯಮ ಕ್ಷೇತ್ರದಿಂದ ರಾಜಾ ಶೈಲೇಶ ಚಂದ್ರಗುಪ್ತ ಹಾಗೂ ರಂಗಭೂಮಿ ಕ್ಷೇತ್ರದಿಂದ ಜೆ. ಲೋಕೇಶ್ ಸದಸ್ಯರಾಗಿದ್ದಾರೆ.

ಸಾಮಗ್ರಿಗಳ ವಿತರಣಾ ಸಮಾರಂಭ

ಮೈಸೂರು, ಸೆ. 30– ಮೈಸೂರಿನ ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಶ್ರೀ ಮಹಾಗಣಪತಿ ಪೂಜಾ ಮಹೋತ್ಸವದ ಅಂಗವಾಗಿ ಅ. 8 ರಂದು ಸಂಜೆ 5 ಗಂಟೆಗೆ ವಿಶೇಷಚೇತನರು ಹಾಗೂ ವೃದ್ಧರಿಗೆ ಸಾಮಗ್ರಿಗಳ ವಿತರಣಾ ಸಮಾರಂಭವನ್ನು ಶ್ರೀರಾಮಪೇಟೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ರಘುಲಾಲ್ ಮೆಡಿಕಲ್ ಸ್ಟೋರ್ಸ್‌ನ ಎನ್. ರಾಘವನ್ ಭಾಗವಹಿಸಲಿದ್ದು, ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಡಾ. ಎನ್. ಶ್ರೀರಾಮ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 6.30ಕ್ಕೆ ಪರಿಮಳ ಹಾಗೂ ಪೂರ್ಣಿಮ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ ಮತ್ತು ದೇವರನಾಮ, ನಂತರ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ.



ಮೈಸೂರಿನ ಅಶೋಕಪುರಂನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ದೊಡ್ಡಗರಡಿ ಸಂಘದ ಆವರಣದಲ್ಲಿ 111ನೇ ವರ್ಷದ ಶ್ರೀ ಅಂಬಾ ಪೂಜಾ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ಮೆರವಣಿಗೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ದೊಡ್ಡಗರಡಿ ಸಂಘದ ಅಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷ ಜೋಗಿ ಮಹೇಶ್, ಕಾರ್ಯದರ್ಶಿ ದೊರೆಸ್ವಾಮಿ, ಅಶೋಕಪುರಂ ಆದಿ ಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಸಿದ್ದರಾಜು (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ರಾಜ್‌ಮೊಗ, ಕೃಷ್ಣಮೂರ್ತಿ, ದೊಡ್ಡಗರಡಿ ಉಸ್ತಾದ್ ಪೈಲ್ವಾನ್ ಪುಟ್ಟಸ್ವಾಮಿ, ಖಲೀಫ್ ಪೈಲ್ವಾನ್ ಬಿ.ಸಿದ್ದಯ್ಯ, ಸಿದ್ದರಾಜು ಇತರರು ಇದ್ದರು.

'ಸೇವನವಾರಂ' ಪ್ರಯುಕ್ತ ಸಮಾಜಮುಖಿ ಕಾರ್ಯಗಳು



ಮೈಸೂರು, ಸೆ.30–ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್, ಮೈಸೂರು ಮಾತಾ ಅಮೃತಾನಂದಮಯಿ ಮಠ ಹಾಗೂ ಅಮೃತ ಕೃಪಾ ಆಸ್ಪತ್ರೆಯ ಸಹಯೋಗದಲ್ಲಿ ಮಾತಾ ಅಮೃತಾನಂದಮಯಿಯವರ ಎಪ್ಪತ್ತನೇ ಹುಟ್ಟುಹಬ್ಬದ ಅಂಗವಾಗಿ ಆಯೋಜನೆಗೊಂಡಿರುವ 'ಸೇವನವಾರಂ' ಸೇವಾ ಸಪ್ತಾಹದ ಮೂಲಕ ಸಮಾಜಮುಖಿ ಕಾರ್ಯಗಳನ್ನು ಮಾಡಲಾಯಿತು.

ಚಾಮುಂಡಿ ಚಿಲ್ಡ್ರನ್ಸ್ ಹೋಮ್‌ಗೆ ಭೇಟಿ

ಇದೇ ವೇಳೆ ಅಮೃತವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ವಿದ್ಯಾರ್ಥಿಗಳು ಮೈಸೂರಿನ ಚಾಮುಂಡಿ ಚಿಲ್ಡ್ರನ್ಸ್ ಹೋಮ್‌ಗೆ ಭೇಟಿ ನೀಡಿ, ಅಲ್ಲಿನ ಮಕ್ಕಳೊಂದಿಗೆ ಕೆಲ ಸಮಯ ಕಳೆದರು. ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಾಚ್, ವಸ್ತ್ರಗಳು, ಹೊದಿಕೆ, ತಿಂಡಿ ತಿನಿಸುಗಳು ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳನ್ನೊಳಗೊಂಡ ಕಿಟ್‌ಗಳನ್ನು ಪ್ರತೀ ಮಗುವಿಗೂ ನೀಡಲಾಯಿತು. ಅಲ್ಲದೆ ಆಶ್ರಮಕ್ಕೆ ಬೇಕಾಗುವ ಅಗತ್ಯ ವಸ್ತುಗಳನ್ನು ಕೂಡ ಇದೇ ಸಂದರ್ಭದಲ್ಲಿ ಅವರಿಗೆ ನೀಡಲಾಯಿತು. ಈ ಕಾರ್ಯಕ್ರಮವನ್ನು ಮತ್ತಷ್ಟು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಆಶ್ರಮದ ಮಕ್ಕಳಿಂದ ಸಸಿಗಳನ್ನು ನೆಡಿಸಲಾಯಿತು. ಅಮೃತ ವಿಶ್ವವಿದ್ಯಾಪೀಠಂನ ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಸಂಪರ್ಕಾಧಿಕಾರಿ ಶಿವಪ್ರಕಾಶ್, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮಾತಾ ಅಮೃತಾನಂದಮಯಿಯವರು ಸಲ್ಲಿಸುತ್ತಿರುವ ಆರೋಗ್ಯ ಸೇವೆಯನ್ನು ಮತ್ತಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಕೂರ್ಗಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು. ರಕ್ತಪರೀಕ್ಷೆ, ಮಧುಮೇಹ, ರಕ್ತದೊತ್ತಡ, ಇಸಿಜಿ, ಸಿಬಿಸಿ, ಎಲ್‌ಎಫ್‌ಟಿ, ಕ್ರಿಯೇಟಿನೈನ್, ಲಿಪಿಡ್ ಪ್ರೊಫೈಲ್, ಎಕ್ಸ್‌ರೇ ಸೇರಿದಂತೆ ಅಗತ್ಯ ಪರೀಕ್ಷೆಗಳನ್ನು ನಡೆಸಲಾಯಿತು. ಜೊತೆಗೆ ಅಗತ್ಯ ಔಷಧಿಗಳನ್ನು ವಿತರಿಸಲಾಯಿತು. ಕೂರ್ಗಳ್ಳಿಯ ಒಟ್ಟು 136 ಸಾರ್ವಜನಿಕರು ಈ ಉಚಿತ ಆರೋಗ್ಯ ತಪಾಸಣಾ ಶಿಬಿರದ ಉಪಯೋಗ ಪಡೆದರು. ಅಮೃತ ಕೃಪಾ ಆಸ್ಪತ್ರೆಯ ವೈದ್ಯಕೀಯ ತಂಡ ಹಾಗೂ ಅಮೃತ ವಿಶ್ವವಿದ್ಯಾಪೀಠಂನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ದಸರಾ ಆರಂಭಕ್ಕೆ ಕೇವಲ 15 ದಿನ ಅಷ್ಟೇ ಇದೆ; ಇನ್ನು ಗುಂಡಿ ಮುಚ್ಚುವ ಕೆಲಸವೂ ಆರಂಭವಾಗಿಲ್ಲ!





ಮೈಸೂರು, ಸೆ.30(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಪ್ರತಿಬಾರಿಯಂತೆ ಯುದ್ಧಕಾಲೇ ಶಸ್ತ್ರಾಭ್ಯಾಸ ಎಂಬಂತೆ ಜಿಲ್ಲಾಡಳಿತ ಈಗಷ್ಟೇ ಸಿದ್ಧತೆಯಲ್ಲಿ ತೊಡಗಿದೆ. ಆದರೆ ಅರಮನೆ ಹಾಗೂ ನಗರಪಾಲಿಕೆ ಬಳಿಯ ರಸ್ತೆ ಹೊಂಡಕ್ಕಿನ್ನೂ ಮುಕ್ತಿ ದೊರೆತಿಲ್ಲ.

ಮೈಸೂರು ದಸರಾಗೆ ಅ.15ರಂದು ಚಾಲನೆ ದೊರಕಲಿದ್ದು, ಅ.24ರಂದು ಜಂಬೂಸವಾರಿ ಮೆರವಣಿಗೆ ನೆರವೇರಲಿದೆ. ನವರಾತ್ರಿ ಆರಂಭಕ್ಕಿನ್ನು 15 ದಿನ ಮಾತ್ರ ಬಾಕಿ ಇದೆ. ದಸರಾ ಸಮೀಪಿಸುತ್ತಿರುವಾಗಲೇ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತದೆ. ಆದರೆ ನಗರಪಾಲಿಕೆ ಎದುರಲ್ಲೇ ಸಯ್ಯಾಜಿರಾವ್ ರಸ್ತೆಯಲ್ಲಿ ಹೊಂಡ ಬಿದ್ದು ಹಲವು ದಿನಗಳಾಗಿವೆ. ಇದು ವಾಹನಗಳ ಓಡಾಟದಿಂದ ದಿನೇ ದಿನೆ ದೊಡ್ಡದಾಗುತ್ತಿದೆ. ನಗರ ಬಸ್ ನಿಲ್ದಾಣದಿಂದ ಒಂದರ ಹಿಂದೊಂದು ಬಸ್‌ಗಳು ಈ ಮಾರ್ಗದಲ್ಲಿ ಸಾಗುತ್ತವೆ. ಇಲ್ಲಿ ಖಾಸಗಿ ವಾಹನಗಳ ಓಡಾಟವೂ ಹೆಚ್ಚು. ಪ್ರವಾಸಿ ವಾಹನಗಳು, ಪ್ರವಾಸಿಗರನ್ನು ಸವಾರಿಗೆ ಕರೆದೊಯ್ಯುವ ಟಾಂಗಾ ಗಾಡಿಗಳು ಈ ಮಾರ್ಗದಲ್ಲಿ ಸಾಗುತ್ತವೆ. ಭಾರಿ ಹೊಂಡದಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗಿದೆ. ದ್ವಿಚಕ್ರ ವಾಹನ ಸವಾರರು ಹೊಂಡ ತಪ್ಪಿಸಲು ಪರದಾಡುವುದು ಕಂಡು ಬರುತ್ತದೆ. ಇಲ್ಲಿ ಸ್ವಲ್ಪ ತಿರುವಿರುವುದರಿಂದ ಅಪಘಾತವಾಗುವ ಸಾಧ್ಯತೆ ಇದೆ. ಇನ್ನು ಪಾಲಿಕೆ ಬಲಭಾಗ ವೀಣೆಶೇಷಣ್ಣ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಕೂಡುವ ಸ್ಥಳದಲ್ಲೂ ಹೊಂಡ ಬಿದ್ದಿದೆ. ದಸರೆಗೆ ನಗರದ ಎಲ್ಲಾ ರಸ್ತೆಗಳನ್ನು ಸುಸ್ಥಿತಿಯಲ್ಲಿಡಬೇಕಾದ ಪಾಲಿಕೆ ಪ್ರಧಾನ ಕಚೇರಿ ಬಳಿಯೇ ಈ ಅವ್ಯವಸ್ಥೆ ಇದೆ. ಮನೆ ಮುಂದಿನ ಹೊಂಡ ಮುಚ್ಚದವರು ಊರಿನ ರಸ್ತೆಗಳನ್ನು ಸಿಂಗಾರ ಮಾಡ್ತಾರಾ? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಪ್ರತಿ ಬಾರಿಯಂತೆ ದಸರಾ ಮಹೋತ್ಸವದ ಹೊಸ್ತಿಲಲ್ಲಿ ರಸ್ತೆಗೆ ತೇಪೆ ಕಾರ್ಯ ಆರಂಭವಾಗುವ ಸಾಧ್ಯತೆ ಇದೆ. ಕೆಲ ದಿನಗಳಿಂದ ತುಂತುರು ಮಳೆಯಾಗುತ್ತಿದೆ. ಈ ವೇಳೆ ತರಾತುರಿಯಲ್ಲಿ ಡಾಂಬರು ಹಾಕಿ ಗುಂಡಿ ಮುಚ್ಚಿದರೆ ಕೆಲ ದಿನಗಳಲ್ಲೇ ಕಿತ್ತು ಬರುತ್ತದೆ. ಕೂಡಲೇ ರಸ್ತೆ ದುರಸ್ತಿ ಆರಂಭಿಸಿದರೆ ಮಳೆ ವಾತಾವರಣ ನೋಡಿಕೊಂಡು ಗುಣಮಟ್ಟದ ಕಾಮಗಾರಿ ನಡೆಸಲು ಸಾಧ್ಯವಾಗುತ್ತದೆ.

ಕೂಡಲೇ ಕ್ರಮ: ನಗರ ಪಾಲಿಕೆ ಪ್ರಧಾನ ಕಚೇರಿ ಮುಂಭಾಗ ರಸ್ತೆಯಲ್ಲಿ ಹೊಂಡ ಬಿದ್ದಿರುವ ಬಗ್ಗೆ ನಾಳೆಯೇ ಪರಿಶೀಲನೆ ಮಾಡಿ, ಕ್ರಮ ಕೈಗೊಳ್ಳಲಾಗುವುದು. ರಾಜಮಾರ್ಗದ ಸುತ್ತಲಿನ ರಸ್ತೆ ತಡೆಗೋಡೆ ದುರಸ್ತಿ, ವೃತ್ತಗಳ ಸೌಂದರ್ಯೀಕರಣ ಹಾಗೂ ರಸ್ತೆಗಳ ಅಭಿವೃದ್ಧಿಗೆ 26 ಕೋಟಿ ರೂ. ಕ್ರಿಯಾಯೋಜನೆ ಸಿದ್ಧಪಡಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ದಸರಾ ಉನ್ನತ ಮಟ್ಟದ ಸಭೆಯಲ್ಲೂ ಈ ಬಗ್ಗೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದೆ. ಆದರೆ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಂತಿಲ್ಲ. ಆದರೆ ನಗರ ಪಾಲಿಕೆಯಿಂದ ಸಾಧ್ಯವಾದಷ್ಟು ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸಲಾಗಿದೆ. ರಸ್ತೆ ಗುಂಡಿ ಮುಚ್ಚಲು ಪ್ರತೀ ವಾರ್ಡ್‌ಗೆ 10 ಲಕ್ಷ ರೂ. ಬಿಡುಗಡೆಯಾಗಿ, ಟೆಂಡರ್ ಆಗಿದೆ. ಇನ್ನೆರಡು ದಿನಗಳಲ್ಲಿ ಕೆಲಸ ಆರಂಭವಾಗಲಿದೆ ಎಂದು ಮೇಯರ್ ಶಿವಕುಮಾರ್ ಭರವಸೆ ನೀಡಿದ್ದಾರೆ.

'ಮಿಸ್ ಟ್ರಾನ್ಸ್' ಫ್ಯಾಷನ್ ಶೋ

ಲಿಂಗತ್ವ ಅಲ್ಪಸಂಖ್ಯಾತರ ಆಡಿಷನ್

ಮೈಸೂರು, ಸೆ.30– 'ಮಿಸ್ ಟ್ರಾನ್ಸ್' ಫ್ಯಾಷನ್ ಶೋಗೆ ಮೈಸೂರಿನಲ್ಲಿ ಶನಿವಾರ ಆಡಿಷನ್ ನಡೆಯಿತು.

ಆಲ್ ಇಂಡಿಯಾ ಹೇರ್ ಅಂಡ್ ಬ್ಯೂಟಿ ಅಸೋಸಿಯೇಷನ್ (ಎಐಹೆಚ್‌ಬಿಎ) ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಆಡಿಷನ್‌ನಲ್ಲಿ 15 ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಭಾಗವಹಿಸಿದ್ದರು. ಮೂರು ಸುತ್ತಿನಲ್ಲಿ ನಡೆದ ಆಡಿಷನ್‌ನಲ್ಲಿ ಮೂವರನ್ನು ಆಯ್ಕೆ ಮಾಡಲಾಯಿತು. ಈ ವೇಳೆ ಲಿಂಗತ್ವ ಅಲ್ಪಸಂಖ್ಯಾತರು ಸಮಾಜದಲ್ಲಿ ತಾವು ಎದುರಿಸುವ ಸಮಸ್ಯೆಗಳನ್ನು ತೆರೆದಿಟ್ಟರು. ನಮ್ಮನ್ನೂ ಸಮಾನರಾಗಿ ಕಂಡು ಶಿಕ್ಷಣ ಹಾಗೂ ಉದ್ಯೋಗದಲ್ಲಿ ಅವಕಾಶ ಮಾಡಿಕೊಟ್ಟರೆ ಗೌರವಯುತ ಬದುಕು ಕಟ್ಟಿಕೊಳ್ಳಬಹುದು ಎಂದು ಮನವಿ ಮಾಡಿದರು.



ಈ ವೇಳೆ ಅಸೋಸಿಯೇಷನ್‌ನ ಮೈಸೂರು ಘಟಕದ ಅಧ್ಯಕ್ಷೆ ಜೆ.ಉಮಾ ಜಾದವ್, ಚಿಕ್ಕಮಗಳೂರು ಘಟಕದ ಅಧ್ಯಕ್ಷರಾದ ಅಪರ್ಣ, ಪ್ರಣತಿ ಪ್ರಕಾಶ್, ದೀಪ ಶಾಸ್ತ ಮತ್ತಿತರರು ಉಪಸ್ಥಿತರಿದ್ದರು. ಚಿಕ್ಕಮಗಳೂರು, ಮಂಗಳೂರು, ಹಾಸನ ಸೇರಿದಂತೆ ರಾಜ್ಯದ ವಿವಿಧೆಡೆ ಆಡಿಷನ್ ನಡೆಯಲಿದ್ದು, ಅ.28ರಂದು ಚಿಕ್ಕ ಮಗಳೂರಿನಲ್ಲಿ ಮಿಸ್ ಟ್ರಾನ್ಸ್ ಫಿನಾಲೆ ಹಾಗೂ ರಾಜ್ಯ ಮಟ್ಟದ ಮೇಕ್‌ಅಪ್ ಸ್ಪರ್ಧೆ ನಡೆಯಲಿದೆ.

ಕೇಂದ್ರದಲ್ಲಿ INDIA ಅಧಿಕಾರಕ್ಕೆ ಬಂದರೆ ಜಾತಿ ಗಣತಿ



ಭೋಪಾಲ್, ಸೆ.30–ಕೇಂದ್ರದಲ್ಲಿ INDIA ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ದೇಶದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ನಿಖರ ಸಂಖ್ಯೆಯನ್ನು ತಿಳಿಯಲು ಜಾತಿ ಆಧಾರಿತ ಜನಗಣತಿ ನಡೆಸುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಹೇಳಿದ್ದಾರೆ. ಮಧ್ಯಪ್ರದೇಶದ ಶಾಜಾಪುರ ಜಿಲ್ಲೆಯ ಕಲಾಪಿಪಾಲ್ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ನಾವು ಮಾಡುವ ಮೊದಲ ಕೆಲಸವೆಂದರೆ ದೇಶದಲ್ಲಿ ಒಬಿಸಿಗಳ ನಿಖರ ಸಂಖ್ಯೆಯನ್ನು ತಿಳಿಯಲು ಜಾತಿ ಆಧಾರಿತ ಜನಗಣತಿ ನಡೆಸಲಾಗುವುದು. ಈಗ ಅವರ ನಿಖರ ಸಂಖ್ಯೆ ಯಾರಿಗೂ ಗೊತ್ತಿಲ್ಲ ಎಂದಿದ್ದಾರೆ. ಕ್ಯಾಬಿನೆಟ್ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳು ಸೇರಿದಂತೆ ಕೇವಲ 90 ಅಧಿಕಾರಿಗಳು ಈ ದೇಶವನ್ನು ಆಳುತ್ತಿದ್ದಾರೆ ಎಂದು ಪ್ರತಿಪಾದಿಸಿದ ಕಾಂಗ್ರೆಸ್ ಮಾಜಿ ಅಧ್ಯಕ್ಷ, ದೇಶದಲ್ಲಿ ನೀತಿಗಳು ಮತ್ತು ಕಾನೂನುಗಳನ್ನು ರೂಪಿಸುವಲ್ಲಿ ಬಿಜೆಪಿ ಸಂಸದರು ಮತ್ತು ಶಾಸಕರದ್ದು ಯಾವುದೇ ಪಾತ್ರ ಇಲ್ಲ ಎಂದು ಟೀಕಿಸಿದ್ದಾರೆ. ಚುನಾಯಿತ ಬಿಜೆಪಿ ಸದಸ್ಯರ ಬದಲಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಮತ್ತು ಅಧಿಕಾರಿಗಳು ಕಾನೂನು ರೂಪಿಸುತ್ತಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಮಧ್ಯಪ್ರದೇಶ ದೇಶದ ಭ್ರಷ್ಟಾಚಾರದ ಕೇಂದ್ರಬಿಂದು ಎಂದು ಟೀಕಿಸಿದ ರಾಹುಲ್ ಗಾಂಧಿ, ವ್ಯಾಪಂನಂತಹ ಹಗರಣಗಳು ರಾಜ್ಯವನ್ನೇ ಬೆಚ್ಚಿಬೀಳಿಸಿದೆ ಎಂದು ವಾಗ್ದಾಳಿ ನಡೆಸಿದರು.

ತಿ.ನ.ಪುರ ಮುಖ್ಯಾಧಿಕಾರಿಗೆ 10 ಸಾವಿರ ದಂಡ

ತಿ.ನರಸೀಪುರ, ಸೆ.30–ಮಾಹಿತಿ ಹಕ್ಕು ಕಾಯಿದೆಯಡಿ ನಿಗದಿತ ಸಮಯಕ್ಕೆ ಮಾಹಿತಿ ನೀಡದ ಹಿನ್ನೆಲೆಯಲ್ಲಿ ತಿ.ನರಸೀಪುರ ಪುರಸಭೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳೂ ಆದ ಮುಖ್ಯಾಧಿಕಾರಿ ಬಸವರಾಜು ಅವರಿಗೆ ರಾಜ್ಯ ಮಾಹಿತಿ ಆಯುಕ್ತ ಡಾ.ಎಸ್.ಬಿ.ಬೊಮ್ಮನಹಳ್ಳಿ 10 ಸಾವಿರ ರೂ. ದಂಡ ವಿಧಿಸಿದ್ದಾರೆ.

ತಿ.ನರಸೀಪುರದ ಮಹದೇವ ಎಂಬುವರು 2018ರ ಸೆ.14ರಿಂದ 2019ರ ಮಾ.27 ರವರೆಗೆ ಹಾಗೂ 2019ರ ಜೂನ್ 15ರಿಂದ 2021ರ ಜೂನ್ 21ರವರೆಗೆ ಪುರಸಭೆಯಿಂದ ನೀಡಿರುವ ವಾಣಿಜ್ಯ ಮಳಿಗೆಗಳ ಹಾಗೂ ಇನ್ನಿತರೆ ಕಟ್ಟಡಗಳ ಪರವಾನಗಿ ನೀಡಿರುವವರ ಹೆಸರನ್ನು ದಿನಾಂಕಾವಾರು ನೀಡುವಂತೆ 2021ರ ಡಿ. 31ರಂದು ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿದ್ದು, ಇವರಿಗೆ ಸಮರ್ಪಕವಾಗಿ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಮುಖ್ಯಾಧಿಕಾರಿಗೆ ದಂಡ ವಿಧಿಸಲಾಗಿದೆ.

ನಾಗನಹಳ್ಳಿಯಲ್ಲಿ ರಾಷ್ಟ್ರೀಯ ಪೋಷಣ್ ಮಾಸಾಚರಣೆ

ಮೈಸೂರು, ಸೆ.30(ಎಸ್‌ಬಿಡಿ)– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮೈಸೂರು ತಾಲೂಕಿನ ನಾಗನಹಳ್ಳಿ ಗ್ರಾಮದಲ್ಲಿ ಶನಿವಾರ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಲೆಮನ್ ಸ್ಪೂನ್, ಓಟದ ಸ್ಪರ್ಧೆ ಆಯೋಜಿಸಲಾಗಿತ್ತು. ಆರೋಗ್ಯವಂತ ಶಿಶು ಪ್ರದರ್ಶನ, ಮಕ್ಕಳಿಗೆ ಕೃಷ್ಣ–ರಾಧಾ ಫ್ಯಾನ್ಸಿ ಡ್ರೆಸ್ ಸ್ಪರ್ಧೆ, ಆರೋಗ್ಯ ತಪಾಸಣೆ, ಗರ್ಭಿಣಿಯರಿಗೆ ಸೀಮಂತ ಇನ್ನಿತರ ಕಾರ್ಯಕ್ರಮಗಳನ್ನೂ ನಡೆಸಲಾಯಿತು.




ಇದೇ ಸಂದರ್ಭದಲ್ಲಿ ಪೌಷ್ಟಿಕ ಆಹಾರದ ಮಹತ್ವ, ಗರ್ಭಿಣಿಯರಿಗೆ ಅಗತ್ಯ ಆರೈಕೆ, ಸ್ವಚ್ಛತೆಯ ಅನಿವಾರ್ಯತೆ ಬಗ್ಗೆ ಅರಿವು ಮೂಡಿಸಲಾಯಿತು. ಎತ್ತಿನ ಗಾಡಿ ಮೆರವಣಿಗೆ ಮೂಲಕ ಪೋಷಣ್ ಮಾಸಾಚರಣೆ ಬಗ್ಗೆ ಗ್ರಾಮದಲ್ಲಿ ಜಾಗೃತಿ ಮೂಡಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ಭಾಸ್ಕರ್, ಶಂಕರ್, ನಾಗರತ್ನ, ಜಿಪಂ ಮಾಜಿ ಸದಸ್ಯ ದಿನೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಸಿಡಿಪಿಓ ತಿಬ್ಬಯ್ಯ, ಎಸಿಡಿಪಿಓಗಳಾದ ಕೆ.ಎಸ್.ರಾಘವೇಂದ್ರ, ಕೆ.ಬಿ.ರಾಘವೇಂದ್ರ, ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ, ವೈದ್ಯಾಧಿಕಾರಿ ಡಾ. ಧರ್ಮೇಶ್, ಡಿಹೆಚ್‌ಇಓ ಮುನೀಂದ್ರಮ್ಮ, ಪಿಡಿಓ ಭವ್ಯ, ಪೋಷಣ್ ಅಭಿಯಾನದ ತಾಲೂಕು ಸಂಯೋಜಕಿ ಶಶಿಕಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಿರಿಯ ಮೇಲ್ವಿಚಾರಕಿಯರಾದ ಪಾರ್ವತಿ ನಾಯಕ, ಶ್ವೇತಾ, ಮೇಲ್ವಿಚಾರಕಿಯರಾದ ಜಯಮ್ಮ(ಹಂಚ್ಯಾ ವೃತ್ತ), ಶಾಂತ, ಸರೋಜಮ್ಮ ಸುಮಿತ್ರ ಪಾಟೀಲ್, ನಯನ, ನಾಗರತ್ನ, ಗಿರಿಜಾ, ದಿಲ್‌ಶಾದ್, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಸ್ತ್ರೀಶಕ್ತಿ ಸ್ವಸಹಾಯ ಸಂಘದ ಪ್ರತಿನಿಧಿಗಳು, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಯಶಸ್ವಿ ವ್ಯಕ್ತಿ ಇತರರ ಬದುಕಿಸುವ ಮನಸ್ಥಿತಿ ಹೊಂದಿರಬೇಕು

ಮೈಸೂರಿನ ಹೆಸರಾಂತ ಉದ್ಯಮಿ ಶ್ರೀಹರಿ ದ್ವಾರಕಾನಾಥ್ ಅಭಿಮತ

ಮೈಸೂರು, ಸೆ. 30– ಮನುಷ್ಯ ಸ್ವಾರ್ಥಪರ ಆಲೋಚನೆಯಿಂದ ಹೊರಬಂದು ತಾನು ಬದುಕುವ ಜೊತೆಗೆ ಇತರರನ್ನು ಬದುಕಿಸುವ ಮನಸ್ಥಿತಿಯನ್ನು ಬೆಳೆಸಿಕೊಂಡರೆ ಮಾತ್ರ ಜೀವ ಜಗತ್ತು ಈ ವಸುಂಧರೆಯ ಮೇಲೆ ಉಳಿಯಲು ಸಾಧ್ಯವಾಗುತ್ತದೆ, ಇಲ್ಲದಿದ್ದಲ್ಲಿ ಭಯಾನಕವಾದ ಜೀವಸಂಕಷ್ಟಗಳನ್ನು ಮುಂದಿನ ಪೀಳಿಗೆ ಎದುರಿಸಬೇಕಾಗುತ್ತದೆಂದು ಮೈಸೂರಿನ ಉದ್ಯಮಿ ಶ್ರೀಹರಿ ದ್ವಾರಕಾನಾಥ್ ಅಭಿಪ್ರಾಯಪಟ್ಟರು.



ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಶೈಕ್ಷಣಿಕ ಸಾಲಿನ ಸಹಪಠ್ಯ ಚಟುವಟಿಕೆಗಳ ಉದ್ಘಾಟನೆಯನ್ನು ಜ್ಯೋತಿಬೆಳಗಿಸುವುದರ ಮುಖೇನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪ್ರತಿ ಯಶಸ್ವಿ ವ್ಯಕ್ತಿಯು ತಾನು ಸಾಧಿಸಿದ ಯಶಸ್ಸನ್ನು ಇತರರಿಗೂ ಕಲಿಸುವ ಉದ್ದೇಶದಿಂದ ಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. ಬದುಕುವ ಛಲವಿದ್ದರೆ ಯಾರಾದರೂ ಏನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ವಿಕಲಚೇತನ ಪರ್ವತಾರೋಹಿ ಕು.ಅರುಣಿಮಾ ಸಿನ್ಹ ಅವರ ಜೀವನ ಸಾಧನೆಯನ್ನು ಉದಾಹರಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಬದುಕುವ ಕಲೆಯನ್ನು ತಿಳಿಸಿದರು.

ನಾವೊಬ್ಬರು ಗಳಿಸಿದರೆ ಸಾಲದು, ಸಾವಿರಾರು ಜನರಿಗೆ ಉದ್ಯೋಗ ಕೊಡುವ ಅಸಾಧಾರಣ ಮನಸ್ಥಿತಿಯುಳ್ಳವರಾಗಬೇಕಾಗಿದೆ. ಈ ಸಂಬಂಧ ಶಿಸ್ತುಬದ್ಧ ಜೀವನ ಅವಶ್ಯಕ ಎಂದರು. ಮೈಸೂರು ಜಿಲ್ಲೆಯಲ್ಲಿ ಪ್ರತಿವರ್ಷ 30 ಸಾವಿರ ವಿದ್ಯಾರ್ಥಿಗಳು ಉತ್ತೀರ್ಣರಾದರೂ ಕೇವಲ 3000 ಜನರಿಗೆ ಮಾತ್ರ ಉದ್ಯೋಗ ಸಿಗುತ್ತದೆ. ಇನ್ನುಳಿದ ಅಧಿಕ ಮಂದಿ ನಿರುದ್ಯೋಗಿಗಳಾಗಿಯೇ ಉಳಿದುಬಿಡುತ್ತಾರೆ. ಸಹಪಠ್ಯ ಚಟುವಟಿಕೆಗಳ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯು ಭವಿಷ್ಯದ ನಾಯಕನಾಗಬೇಕು. ವಿಭಿನ್ನ ದೃಷ್ಟಿಕೋನವುಳ್ಳ ಯೋಜಕರು ತುಂಬಾ ಕಡಿಮೆ, ತಾವು ಏನಾಗಬೇಕೆಂಬ ಗುರಿಯಿರುವ ನಿಶ್ಚಯಿಗಳಾಗಬೇಕು. ಮನೆ ಮನೆ ನರ್ಸರಿಯ ಮೂಲಕ ಹಸಿರೀಕರಣಕ್ಕೆ ಒತ್ತು ನೀಡುವುದು ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಶುದ್ಧವಾಗಿಟ್ಟುಕೊಳ್ಳುವುದರ ಮೂಲಕ ನೈಸರ್ಗಿಕ ಪ್ರೀತಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡುತ್ತಾ, ವಿದ್ಯಾರ್ಥಿಗಳು ಪದವಿ ಹಂತದಲ್ಲಿಯೇ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ನಾಯಕರಾಗಿ ಹೊರಹೊಮ್ಮಬಹುದು ಎಂದರು. ಪ್ರೊ. ಜೆ.ಮಂಜು ಪ್ರಾರ್ಥಿಸಿ, ಪ್ರಾಚಾರ್ಯ ಡಾ॥ಎಸ್.ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರೆ, ಸಂಸ್ಥೆಯ ಗೌರವ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಗೌರವ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾಲೇಜಿನ 2022–23ನೇ ಶೈಕ್ಷಣಿಕ ಸಾಲಿನ ಕಾಲೇಜಿನ ವಾರ್ಷಿಕ ಸಂಚಿಕೆ "ಸೌಗಂಧಿಕ–22" ಬಿಡುಗಡೆಗೊಳಿಸಿದರು. ಅಧ್ಯಾಪಕರು, ಅಧ್ಯಾಪಕೇತರರು, ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದ ಕಾರ್ಯಕ್ರಮವನ್ನು ಪ್ರೊ.ವಿದ್ಯಾ ನಿರೂಪಿಸಿ, ಪ್ರೊ.ಪಲ್ಲವಿ.ಡಿ ವಂದಿಸಿದರು.

ಮೈಸೂರು ಮಿತ್ರ ಭಾನುವಾರ 1 ಅಕ್ಟೋಬರ್ 2023

ಖಾಸಗಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಒತ್ತು ನೀಡಿ

ಕೊಡಗು ಜಿಲ್ಲಾ ಅನುದಾನ ರಹಿತ ಶಾಲೆಗಳ ಒಕ್ಕೂಟದ ಸಮಾವೇಶದಲ್ಲಿ ಪ್ರತಾಪ್‌ಸಿಂಹ ಆಗ್ರಹ



ಖಾಸಗಿ ಶಾಲೆಗಳ ವಿವಿಧ ಬೇಡಿಕೆಗಳು:

- ಶಾಲಾ ಮಾನ್ಯತಾ ನವೀಕರಣ ಅವಧಿ ಹೆಚ್ಚಿಸಬೇಕು.
- ಪ್ರತಿ ತರಗತಿಯಲ್ಲೂ ಇಂತಿಷ್ಟು ವಿದ್ಯಾರ್ಥಿಗಳು ಇರಬೇಕು ಎಂಬ ನಿರ್ಬಂಧ ಸಡಿಲಗೊಳಿಸಬೇಕು.
- ಅಗ್ನಿಸುರಕ್ಷತೆ ಪ್ರಮಾಣ ಪತ್ರ ಪಡೆಯಲು ಹೆಚ್ಚಿನ ಶುಲ್ಕದ ಬದಲಿಗೆ ಕಡಿಮೆ ಶುಲ್ಕ ನಿಗದಿಪಡಿಸಬೇಕು.
- ಖಾಸಗಿ ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿಗಳನ್ನು ಸರ್ಕಾರದ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಪರಿಗಣನೆ ತೆಗೆದುಕೊಳ್ಳಬೇಕು.
- ಖಾಸಗಿ ಶಾಲೆಗಳಿಗೂ ಸರ್ಕಾರ ಆರ್ಥಿಕ ನೆರವು ನೀಡಬೇಕು.
- ಆರ್.ಟಿ.ಇ.ಶುಲ್ಕ ಮರುಪಾವತಿ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಬೇಕು.
- ಸರ್ಕಾರ ನೀಡುವ ಪುರಸ್ಕಾರ ಮತ್ತು ಪ್ರಶಸ್ತಿಗಳಿಗೆ ಖಾಸಗಿ ಶಾಲಾ ಶಿಕ್ಷಕರಿಗೂ ನೀಡಬೇಕು.
- ಶಿಕ್ಷಕರ ಕಲ್ಯಾಣ ನಿಧಿಗೆ ಹಣ ಪಾವತಿಸಿದ ಶಿಕರಿಗೆ ಇದರ ಪ್ರಯೋಜನ ಪಡೆಯಲು ಅರ್ಹಗೊಳಿಸಬೇಕು.

ಕುಶಾಲನಗರ, ಸೆ.30– ದೇಶದ ಅಭಿವೃದ್ಧಿಯಲ್ಲಿ ಖಾಸಗಿ ಶಾಲೆಗಳ ಕೊಡುಗೆ ಕೂಡ ಅಪಾರವಾಗಿದ್ದು, ಸರ್ಕಾರ ಖಾಸಗಿ ಶಾಲೆಗಳ ಬೆಳವಣಿಗೆಗೆ ಒತ್ತು ನೀಡಬೇಕು ಎಂದು ಸಂಸದ ಪ್ರತಾಪ್ ಸಿಂಹ ಒತ್ತಾಯಿಸಿದರು.

ಕೊಡಗು ಜಿಲ್ಲಾ ಅನುದಾನ ರಹಿತ ಶಾಲೆಗಳ ಒಕ್ಕೂಟದ ವತಿಯಿಂದ ಶನಿವಾರ ಇಲ್ಲಿನ ರೈತ ಭವನದಲ್ಲಿ ಏರ್ಪಡಿಸಿದ್ದ ಅನುದಾನ ರಹಿತ ಶಾಲೆಗಳ ಒಕ್ಕೂಟದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ಅವರ ಭವಿಷ್ಯ ರೂಪಿಸುವುದರ ಜೊತೆಗೆ ಉತ್ತಮ ಪ್ರಜೆಯಾಗಿ ರೂಪಿಸುವ ಶಿಕ್ಷಕರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ, ಆರ್‌ಟಿಇ ಕಾಯ್ದೆ ಅಡಿ ಖಾಸಗಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಶುಲ್ಕವನ್ನು ಸರ್ಕಾರ ಭರಿಸಬೇಕು ಎಂದರು.

ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ತು ಸದಸ್ಯ ಎಸ್.ಎಲ್. ಬೋಜೇಗೌಡ ಮಾತನಾಡಿ, ಆರೋಗ್ಯ ಸಂಜೀವಿನಿ ಸೌಲಭ್ಯವನ್ನು ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಶಿಕ್ಷಕರಿಗೂ ವಿಸ್ತರಣೆ ಮಾಡಬೇಕು ಎಂದು ಒತ್ತಾಯಿಸಿದರು. ವಿಧಾನಪರಿಷತ್ತು ಸದಸ್ಯ ಎಂ.ಪಿ. ಸುಜಾಕುಶಾಲಪ್ಪ ಮಾತನಾಡಿ, ಖಾಸಗಿ ಶಾಲೆಗಳು ಉನ್ನತ ಶಿಕ್ಷಣ ನೀಡುತ್ತಿವೆ. ಶಿಕ್ಷಣದ ಜೊತೆಗೆ ಕ್ರೀಡೆ ಚಟುವಟಿಕೆ ಒತ್ತು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ರೂಪಿಸುತ್ತಿವೆ ಎಂದರು.

ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಖಾಸಗಿ ಶಾಲೆಗಳಲ್ಲಿ ಶಿಸ್ತು, ಸಂಯಮ ಹಾಗೂ ಸಮಯಪ್ರಜ್ಞೆ ಹಾಗೂ ಶಿಕ್ಷಣ ಗುಣಮಟ್ಟ ಉತ್ತಮವಾಗಿದೆ.ಸರ್ಕಾರಿ ಶಾಲೆಗಳಲ್ಲೂ ಇದನ್ನು ಪಾಲಿಸಬೇಕು. ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಶಾಲೆಗಳು ಜೊತೆಯಲ್ಲಿ ಹೋಗಬೇಕು ಎಂದರು. ಜನಪ್ರತಿನಿಧಿಗಳು ಶಾಲಾ ಕಟ್ಟಡಗಳಿಗೆ ಹೆಚ್ಚಿನ ಅನುದಾನ ನೀಡಬೇಕು ಎಂದರು.

ಕೊಡ್ಲಿಪೇಟೆ ಕಲ್ಲುಮಠದ ಮಹಾಂತ ಸ್ವಾಮೀಜಿ ಹಾಗೂ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕೊಡಗು ಜಿಲ್ಲಾ ಅನುದಾನ ರಹಿತ ಶಾಲೆಗಳ ಒಕ್ಕೂಟದ ಅಧ್ಯಕ್ಷ ಕೊಲ್ಲೀರ ಜರು ಗಣಪತಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಒಕ್ಕೂಟದ ಉಪಾಧ್ಯಕ್ಷ ಎಂ.ವಿ.ದಾಮೋದರ್, ಪ್ರಧಾನ ಕಾರ್ಯದರ್ಶಿ ಕೊಟ್ರಂಗಡ ತಿಮ್ಮಯ್ಯ, ಕಾನೂನು ಸಲಹೆಗಾರ ಎಂ.ಎಸ್. ಪೂವಯ್ಯ ಇದ್ದರು. ಇದೇ ಸಂದರ್ಭ ಒಕ್ಕೂಟದ ವತಿಯಿಂದ ಶಾಸಕರಾದ ಡಾ.ಮಂತರ್ ಗೌಡ,ಸುಜಾ ಕುಶಾಲಪ್ಪ ಬೋಜೇಗೌಡ ಹಾಗೂ ನಿವೃತ್ತ ಪ್ರಾಂಶುಪಾಲ ಸಿ.ಜಿ. ಕುಶಾಲಪ್ಪ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕೊಡವರ ಬೇಡಿಕೆ ಈಡೇರಿಸಲು ಹಮ್ಮಿಕೊಂಡಿದ್ದ

ಸಿಎನ್‌ಸಿ ಎರಡನೇ ಹಂತದ ಪಾದಯಾತ್ರೆ ಮುಕ್ತಾಯ



ಮಡಿಕೇರಿ, ಸೆ.30– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ 9 ಪ್ರಮುಖ ಬೇಡಿಕೆಗಳ ಕುರಿತು ಕೊಡವ ಜನಜಾಗೃತಿ ಮೂಡಿಸುತ್ತಾ ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸುತ್ತಿರುವ 5 ಹಂತಗಳ ಪಾದಯಾತ್ರೆಯಲ್ಲಿ 2ನೇ ಹಂತದ ಪಾದಯಾತ್ರೆ ವಿರಾಜಪೇಟೆ ತಾಲೂಕಿನ 'ಚೆಂಬೆಬೆಳಿಯೂರಿನ' ಎಡೆನಾಲ್‌ನಾಡ್ ಮಂದ್‌ನಲ್ಲಿ ಮುಕ್ತಾಯಗೊಂಡಿತು. ಮೂರನೇ ಹಂತದ ಪಾದಯಾತ್ರೆ ಅ.7ರಂದು ಬೆಳಗ್ಗೆ 10 ಗಂಟೆಗೆ ಕಂಗಳತ್ತನಾಡ್ (ಗೋಣಿಕೊಪ್ಪ–ಮಾಯಮುಡಿ)ನಿಂದ ಆರಂಭಗೊಳ್ಳಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

'ಚೆಂಬೆಬೆಳಿಯೂರಿನ' ಎಡೆನಾಲ್ ನಾಡ್‌ಮಂದ್‌ನಲ್ಲಿ ಕೊಡವ ಜಾಗೃತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸಿಎನ್‌ಸಿ ಸಂಘಟನೆ ಅತ್ಯಂತ ತಾಳ್ಮೆಯಿಂದ ಸುದೀರ್ಘ ಹೋರಾಟ ನಡೆಸುವ ಮೂಲಕ ಕೊಡವರಿಗೆ ಸಾಂವಿಧಾನಿಕವಾಗಿ ದೊರಕಬೇಕಾದ ಹಕ್ಕುಗಳ ಪರ ಪ್ರತಿಪಾದಿಸುತ್ತಾ ಬಂದಿದೆ ಎಂದರು.

ಅ.7ರಿಂದ 3ನೇ ಹಂತದ ಪಾದಯಾತ್ರೆ ಆರಂಭ

ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗ ಕೊಡವರಿಗೆ ನ್ಯಾಯಯುತವಾಗಿ ಸಾಂವಿಧಾನಿಕ ಭದ್ರತೆ ಸಿಗುವ ಅಗತ್ಯವಿದೆ. ನಮ್ಮನ್ನು ಆಳುತ್ತಿರುವವರು ಈ ಸಣ್ಣ ಜನಾಂಗಕ್ಕೆ ರಕ್ಷಣೆ ನೀಡದಿದ್ದಲ್ಲಿ ಒಂದು ವಿಶಿಷ್ಟ ಸಂತತಿಯೇ ಅಳಿದು ಹೋಗುವ ಆತಂಕವಿದೆ. ಸಿಎನ್‌ಸಿ ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು ನ್ಯಾಯಸಮ್ಮತವಾಗಿದೆ. ಬೇರೆಯವರ ಹಕ್ಕುಗಳನ್ನು ಕಸಿಯುವ ಪ್ರಯತ್ನವನ್ನು ನಾವು ಮಾಡುತ್ತಿಲ್ಲ, ನಮ್ಮ ಹಕ್ಕಿಗಾಗಿ ನಿರಂತರ ಹೋರಾಟ ನಡೆಸುತ್ತಿದ್ದೇವೆ. ಇದರ ಭಾಗವಾಗಿ ಐದು ಹಂತಗಳಲ್ಲಿ ಜಿಲ್ಲೆಯಾದ್ಯಂತ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಈ ಪಾದಯಾತ್ರೆ ಹೆಚ್ಚು ಪರಿಣಾಮ ಬೀರಿದ್ದು, ಎರಡು ಹಂತಗಳನ್ನು ಈಗಾಗಲೇ ಮುಗಿಸಿದ್ದೇವೆ. ಇನ್ನು ಉಳಿದಿರುವ ಮೂರು ಹಂತಗಳಲ್ಲಿ ಎಲ್ಲರನ್ನೂ ಭೇಟಿಯಾಗಿ ಕೊಡವ ಲ್ಯಾಂಡ್ ಪರ ಹಕ್ಕೊತ್ತಾಯವನ್ನು ಮಂಡಿಸಲಾಗುವುದು ಎಂದು ನಾಚಪ್ಪ ಹೇಳಿದರು.

ಕೋಲುವಂಡ ಪ್ರತಿಮಾ ಹರೀಶ್, ಪೋರುಕೊಂಡ ಪ್ರಕೃತಿ ಗಣಪತಿ, ಮಂಡೇಪಂಡ ಪ್ರಮೀಳ ಗಣಪತಿ, ನಡೆಪಂಡ ಶಾಂತಿ ಬೋಪಯ್ಯ, ಚೇಂದಂಡ ಲಿಲ್ಲಿ ಪೂವಯ್ಯ, ಎನ್.ಎಂ.ಲೀಲಾವತಿ, ಮಂಡೇಪಂಡ ಸುಮಿತ್ರ ಪಾರ್ವತಿ, ಕೋಳೇರ ಟೀನ ರನ್ನು, ಚೇಂದಂಡ ಸಬಿತಾ ಕಾರ್ಯಪ್ಪ ಕುಂದೀರ ಕಮಲ ಮತ್ತಿತರರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಕೊಡವ ಲ್ಯಾಂಡ್ ಪರ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ಬಿಡುಗಡೆಗೆ ಮನವಿ

ವಿರಾಜಪೇಟೆ, ಸೆ.30– ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಕೂಡಲೇ ಶೈಕ್ಷಣಿಕ ಸಹಾಯಧನ ಬಿಡುಗಡೆಗೊಳಿಸುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕ ಸಂಘಟನೆಯಿಂದ ವಿರಾಜಪೇಟೆ ಕಾರ್ಮಿಕ ನಿರೀಕ್ಷಕರ ಕಚೇರಿಯ ಸಹಾಯಕ ಅಧಿಕಾರಿ ಬಿ.ಆರ್.ಕಾವ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಕಟ್ಟಡ ಕಾರ್ಮಿಕ ಸಂಘಟನೆಯ ಸಿಐಟಿಯು ಜಿಲ್ಲಾ ಅಧ್ಯಕ್ಷ ಎ.ಸಿ.ಸಾಬು ಮಾತನಾಡಿ, 2022–23ನೇ ಸಾಲಿನ ಶೈಕ್ಷಣಿಕ ಸಹಾಯಧನವನ್ನು ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಪ್ರತಿವರ್ಷ ನೀಡಲಾಗುತ್ತಿತ್ತು. ಆದರೆ ಈ ವರ್ಷ ಇದುವರೆಗೂ ಸಹಾಯಧನ ಬಿಡುಗಡೆ ಮಾಡಿಲ್ಲ. ಕಳೆದ 2021–22ನೇ ಸಾಲಿನಲ್ಲಿ ಹಿಂದಿನ ಬಿಜೆಪಿ ಸರಕಾರವಿದ್ದ ಸಂದರ್ಭದಲ್ಲಿ ಸುಮಾರು 1.5 ಲಕ್ಷ ಫಲಾನುಭವಿಗಳು ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಅದರ ಹಣ ಇನ್ನೂ ಬಿಡುಗಡೆಗೊಂಡಿಲ್ಲ ಎಂದರು.



ಈ ವರ್ಷ ಶಾಲೆಗಳು ಪ್ರಾರಂಭವಾಗಿ ತಿಂಗಳುಗಳೇ ಕಳೆದರೂ ಇದುವರೆಗೂ ಸಹಾಯಧನಕ್ಕಾಗಿ ಅರ್ಜಿಯನ್ನೇ ಕರೆದಿಲ್ಲ ಎಂದು ತಿಳಿಸಿದ ಎ.ಸಿ.ಸಾಬು, ಬಡ ಕುಟುಂಬದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನದ ಅವಶ್ಯಕತೆಯಿದ್ದು, ಸರಕಾರ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಸಹಾಯಧನವನ್ನು ನೀಡುವಂತೆ ಕಟ್ಟಡ ಕಾರ್ಮಿಕರು ರಾಜ್ಯಾದ್ಯಂತ ಎಲ್ಲಾ ಕಾರ್ಮಿಕ ನಿರೀಕ್ಷಕರ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ. ಆದ್ದರಿಂದ ನಾವು ವಿರಾಜಪೇಟೆಯ ಕಾರ್ಮಿಕ ಅಧಿಕಾರಿಗೆ ಮನವಿ ಸಲ್ಲಿಸಿ ಕಟ್ಟಡ ಕಾರ್ಮಿಕರಿಗೆ ಸಹಾಯಧನ ಕೊಡಿಸಿಕೊಡುವಂತೆ ಆಗ್ರಹಿಸಿದ್ದೇವೆ ಎಂದರು. ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಸಮಿತಿಯ ಕಾಶಿಂ, ವಿರಾಜಪೇಟೆ ನಗರ ಅಧ್ಯಕ್ಷ ಕೆ.ಕೆ.ಹರಿದಾಸ್, ಸದಸ್ಯರಾದ ಕುಂಜಾ, ನಾಗರಾಜು, ಗಣೇಶ್, ಡಿ.ಎಂ.ವಿಕ್ರಂ ಮತ್ತಿತರರು ಹಾಜರಿದ್ದರು.

ಕೊಡವರ ಕೋವಿ ಹಕ್ಕಿನ ಮೇಲೆ ಮಿತಿ ಹಾಕುವಾಗ ಸಂಸದ ಪ್ರತಾಪ್‌ಸಿಂಹ ಎಲ್ಲಿದ್ದರು?

ಕಾಂಗ್ರೆಸ್ ವಕ್ತಾರ ಸಂಕೇತ್ ಪೂವಯ್ಯ ಪ್ರಶ್ನೆ

ಮಡಿಕೇರಿ, ಸೆ.30– ಕೊಡಗಿನ ಕೊಡವರಿಗೆ ಈ ಹಿಂದಿನಿಂದಲೂ ಲಭ್ಯವಿದ್ದ 'ಕೋವಿ ಹಕ್ಕಿನ ವಿನಾಯಿತಿ'ಗೆ 2019ರ ಅಕ್ಟೋಬರ್ 29ರಂದು ಕೇಂದ್ರದ ಗೃಹ ಸಚಿವಾಲಯ ಷರತ್ತುಗಳನ್ನು ವಿಧಿಸುವಾಗ ಕೊಡಗು–ಮೈಸೂರು ಸಂಸದ ಪ್ರತಾಪ ಸಿಂಹ ಎಲ್ಲಿದ್ದರೆಂದು ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನ ಕೊಡವರಿಗೆ ಬ್ರಿಟಿಷರ ಅವಧಿಯಲ್ಲೇ ಲಭ್ಯವಿದ್ದ ಕೋವಿ ವಿನಾಯ್ತಿ ಹಕ್ಕನ್ನು ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಲ್ಲೂ 1965 ರಂದು ಸ್ಥಿರೀಕರಿಸಿ ಮುಂದುವರೆಸಲಾಗಿದೆ. ಈ ಹಕ್ಕಿನ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ವ್ಯಕ್ತಿಯೊಬ್ಬರು ಪ್ರಶ್ನಿಸಿದ ಹಿನ್ನೆಲೆಯಲ್ಲಿ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಸ್ಪಷ್ಟನೆ ನೀಡಲು ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರದ ಗೃಹ ಸಚಿವಾಲಯ ಕೊಡಗಿನಲ್ಲಿ ಕೋವಿ ವಿನಾಯಿತಿ ವಿಶೇಷ ಹಕ್ಕನ್ನು ಮುಂದುವರಿಸುವ ಹಂತದಲ್ಲಿ, ಈ ಹಕ್ಕನ್ನು 10 ವರ್ಷಗಳಿಗೆ ಮಿತಿ ಹಾಕಿ 2029ರ ಅಕ್ಟೋಬರ್ 29ರವರೆಗೆ ಮುಂದುವರಿಸಿದೆ. ಈ ಹಂತದಲ್ಲಿ ಕೊಡಗಿನ ಜನರು ಮತ್ತು ಕೋವಿ ನಡುವಿನ ಸಾಂಸ್ಕೃತಿಕ ಸಂಬಂಧ, ಮಹತ್ವಗಳನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕಿದ್ದ ಪ್ರತಾಪ ಸಿಂಹ ಅವರು ಆ ಸಂದರ್ಭ ಏನು ಮಾಡುತ್ತಿದ್ದರೆಂದು ಪ್ರಶ್ನಿಸಿದ್ದಾರೆ.



ಬಹಿರಂಗ ಚರ್ಚೆಗೆ ಬರಲಿ: ಕೊಡಗು–ಮೈಸೂರು ಕ್ಷೇತ್ರವನ್ನು 2 ಬಾರಿ ಪ್ರತಿನಿಧಿಸಿರುವ ಪ್ರತಾಪ ಸಿಂಹ ಅವರು ತಮ್ಮ ಅವಧಿಯಲ್ಲಿ, ಕೊಡಗಿನ ಮೂಲಭೂತ ವಿಷಯಗಳ ಬಗ್ಗೆ ಕಾಳಜಿ ತೋರದ ಅತ್ಯಂತ ನಿಷ್ಕ್ರಿಯ ಸಂಸದರಾಗಿದ್ದು, ಇದನ್ನು ಮುಚ್ಚಿಕೊಳ್ಳುವ ಸಲುವಾಗಿ ಇದೀಗ ಸುಳ್ಳು ಹೇಳಿಕೆಗಳನ್ನು ನೀಡುತ್ತಾ ಬರುತ್ತಿದ್ದಾರೆ. ಇದನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಅವರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅಗತ್ಯ ದಾಖಲೆಗಳೊಂದಿಗೆ ಬಹಿರಂಗ ಚರ್ಚೆಗೆ ಬರುವಂತೆ ಸಂಕೇತ್ ಪೂವಯ್ಯ ಆಹ್ವಾನ ನೀಡಿದರು.

ಕಸ್ತೂರಿ ರಂಗನ್ ವರದಿಯಿಂದ ಕೊಡಗಿಗೆ ಯಾವುದೇ ತೊಂದರೆಯಾಗದಂತೆ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊರುತ್ತೇನೆ, ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಈ ಹಿಂದೆ ಹೇಳಿಕೊಂಡಿದ್ದ ಸಂಸದ ಪ್ರತಾಪ ಸಿಂಹ, ಈಗ ಏನು ಮಾಡಿದ್ದಾರೆ. ಸಂಕಷ್ಟದಲ್ಲಿರುವ ಕಾಫಿ ಬೆಳೆಗಾರರ ಸಾಲ ಮನ್ನಾ ಮಾಡುವುದಾಗಿ ಹೇಳಿಕೊಂಡಿದ್ದ ಸಂಸದರಿಗೆ ಅದನ್ನು ಮಾಡಲು ಸಾಧ್ಯವಾಗಿದೆಯೇ? ಕೋವಿ ಹಕ್ಕು, ಕಾಫಿ ಬೆಳೆಗಾರರ ಸಂಕಷ್ಟಗಳು ಸೇರಿದಂತೆ ಕೊಡಗಿನ ಮೂಲಭೂತ ಸಮಸ್ಯೆಗಳ ಬಗ್ಗೆ ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇರುವ ಹಂತದಲ್ಲೂ ಏನನ್ನೂ ಮಾಡಲು ಸಾಧ್ಯವಾಗಿಲ್ಲ. ಇದೀಗ ತಮ್ಮ ಲೋಪ ಮುಚ್ಚಿಕೊಳ್ಳಲು, ಶಾಸಕ ಪೊನ್ನಣ್ಣ ಅವರ ಪಾರದರ್ಶಕ, ಪ್ರಾಮಾಣಿಕ ಆಡಳಿತ ವೈಖರಿ ಸಹಿಸದೆ ಅವರ ವಿರುದ್ಧ ಆರೋಪ ಮಾಡಲಾಗುತ್ತಿದೆ ಎಂದು ದೂರಿದರು.

ನಿಗಮಕ್ಕೆ ಬಿಡಿಗಾಸು ಬಂದಿಲ್ಲ: ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಅವರು, ಕೋಟಿಗಟ್ಟಲೆ ಅನುದಾನವನ್ನು ವಿವಿಧ ನಿಗಮಕ್ಕೆ ನೀಡಿದ್ದೇವೆಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಕೊಡವ ಅಭಿವೃದ್ಧಿ ನಿಗಮಕ್ಕೂ ಈ ಅನುದಾನಗಳಿಗೂ ಯಾವುದೇ ಸಂಬಂಧವಿಲ್ಲ. ನಿಗಮಕ್ಕೆ ಬಿಡಿಗಾಸು ಬಂದಿಲ್ಲವೆಂದು ಸಂಕೇತ್ ಪೂವಯ್ಯ ಸ್ಪಷ್ಟಪಡಿಸಿದರು.

ಕಾವೇರಿಯ ಬಗ್ಗೆ ನಿಮ್ಮ ನಿಲುವೇನು: ಪ್ರಸ್ತುತ ಉದ್ಭವಿಸಿರುವ ಕಾವೇರಿ ನೀರಿನ ಸಮಸ್ಯೆಯ ಬಗ್ಗೆ ಕೊಡಗು–ಮೈಸೂರು ಸಂಸದರು ಸೇರಿದಂತೆ ರಾಜ್ಯದ 25 ಸಂಸದರ ನಿಲುವೇನು ಎಂದು ಸಂಕೇತ್ ಪೂವಯ್ಯ ಇದೇ ವೇಳೆ ಪ್ರಶ್ನಿಸಿದರು. ನದಿ ನೀರಿನ ಹಂಚಿಕೆಯಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ಕಾಪಾಡುವ ವೈಜ್ಞಾನಿಕ ಚಿಂತನೆಗಳು ತಮ್ಮ ಬಳಿ ಏನಿದೆಯೆಂದು ಪ್ರಶ್ನಿಸಿದರು.

ಕೊಡಗು ಬಿಜೆಪಿ ಮುಕ್ತ: ಕಳೆದ ಚುನಾವಣೆಯಲ್ಲಿ ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಮೂಲಕ ಕೊಡಗು ಬಿಜೆಪಿ ಮುಕ್ತವಾಗಿದೆ. ಬಿಜೆಪಿ ಆಡಳಿತದಲ್ಲಿನ ವೈಫಲ್ಯಗಳ ಬಗ್ಗೆ ಪ್ರಜ್ಞಾವಂತ ಜನತೆ ಅರಿತಿದ್ದು, ಮುಂದಿನ ಸಂಸತ್ ಚುನಾವಣೆ ಮತ್ತು ಸ್ಥಳೀಯ ಚುನಾವಣೆಗಳಲ್ಲೂ ಇದೇ ತೀರ್ಪನ್ನು ಜನತೆ ನೀಡುವ ವಿಶ್ವಾಸವಿದೆಯೆಂದು ಸಂಕೇತ್ ಪೂವಯ್ಯ ನುಡಿದರು.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ

ಜೆಡಿಎಸ್, ಕನ್ನಡಪರ ಸಂಘಟನೆಗಳ ಪ್ರತಿಭಟನೆ

ತಮಿಳುನಾಡು ಬಸ್ ತಡೆಯಲು, ಟೈರ್‌ಗೆ ಬೆಂಕಿ ಹಚ್ಚಲು ಯತ್ನ: ಹೋರಾಟಗಾರರ ಬಂಧನ, ಬಿಡುಗಡೆ



ಚಾಮರಾಜನಗರ, ಸೆ.30– ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಜೆಡಿಎಸ್, ಕನ್ನಡಪರ ಸಂಘಟನೆಗಳ ಮುಖಂಡರು ತಮಿಳುನಾಡು ಗಡಿ ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಮುಖಂಡ ಆಲೂರುಮಲ್ಲು ನೇತೃತ್ವದಲ್ಲಿ ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಸ್ತೆಯಲ್ಲೇ ಕುಳಿತು ಕೆಲಕಾಲ ರಸ್ತೆ ತಡೆ ನಡೆಸಿ, ತಮಿಳುನಾಡು, ಕೇಂದ್ರ ಸರ್ಕಾರ, ಕರ್ನಾಟಕ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ತಮಿಳುನಾಡು ಬಸ್, ಟೈರ್‌ಗೆ ಬೆಂಕಿ ಹಚ್ಚಲು ಮುಂದಾದ ಜೆಡಿಎಸ್ ಮುಖಂಡರಾದ ಆಲೂರುಮಲ್ಲು, ಜಿ.ಎಂ.ಶಂಕರ್, ಹೊಂಗನೂರು ರಾಜು, ಬಸವನಪುರ ಮಂಜು, ಕನ್ನಡಪರ ಸಂಘಟನೆಗಳ ಮುಖಂಡರಾದ ಕರ್ನಾಟಕ ರಕ್ಷಣಾ ಪಡೆ ಜಿಲ್ಲಾಧ್ಯಕ್ಷ ಆರ್. ನಾರಾಯಣ್, ಜನಸೇನಾ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎನ್. ಹರೀಶ್ ಕುಮಾರ್, ಕದಂಬ ಅಂಬರೀಶ್, ಹೊನ್ನಹಳ್ಳಿ ಬಸವಣ್ಣ, ಸುರೇಶ್, ಬಾಬು ಅವರನ್ನು ಪೊಲೀಸರು ಬಂಧಿಸಿ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಗೆ ಕರೆದೊಯ್ದು ಬಿಡುಗಡೆ ಮಾಡಿದರು.

ಜೆಡಿಎಸ್ ಮುಖಂಡ ಅಲೂರು ಮಲ್ಲು ಮಾತನಾಡಿ, ರಾಜ್ಯದಲ್ಲಿ ಮಳೆ ಅಭಾವದಿಂದ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರಿನ ಮಟ್ಟ ಕ್ಷೀಣಿಸಿದ್ದು, ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲೂ ತಮಿಳುನಾಡು ಸರ್ಕಾರ 3ನೇ ಬೆಳೆಗೆ ಕಾವೇರಿ ನೀರು ಕೇಳುವುದು ಸರಿಯಲ್ಲ ಎಂದು ದೂರಿದರು.

ಕರ್ನಾಟಕ ಸರ್ಕಾರ ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ತಮಿಳುನಾಡಿಗೆ ನೀರು ಬಿಟ್ಟಿರುವುದು ಖಂಡನೀಯ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾವೇರಿ ಕೊಳ್ಳದ ಜಲಾಶಯಗಳಲ್ಲಿರುವ ನೀರಿನ ವಸ್ತುಸ್ಥಿತಿಯನ್ನು ಸುಪ್ರೀಂಕೋರ್ಟ್‌ಗೆ ತಿಳಿಸಿಕೊಡುವಲ್ಲಿ ವಿಫಲರಾಗಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಮುಂಬರುವ ಲೋಕಸಭಾ ಚುನಾವಣೆ ದೃಷ್ಟಿಯಿಂದ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟು ರಾಜ್ಯದ ಜನತೆಗೆ ಅನ್ಯಾಯ ಮಾಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ ರಾಜ್ಯ ಸರ್ಕಾರಕ್ಕೆ ಜನತೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಕಪ್ಪುಬಾವುಟ ಪ್ರದರ್ಶನ: ಕರ್ನಾಟಕ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನಗರಕ್ಕೆ ಬಂದಾಗ ಕಪ್ಪುಬಾವುಟ ಪ್ರದರ್ಶನ ಮಾಡಲಾಗುವುದು. ಕಾವೇರಿ ಕೊಳ್ಳದ ಜಲಾಶಯಗಳಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಸಿದರು.

ತೆಂಗಿನಕಾಯಿ ಚಿಪ್ಪು ಹಿಡಿದು ಪ್ರತಿಭಟನೆ



ಚಾಮರಾಜನಗರ, ಸೆ.30– ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಕನ್ನಡಪರ ಸಂಘಟನೆಗಳು ನಗರದಲ್ಲಿ ತೆಂಗಿನಕಾಯಿ ಚಿಪ್ಪು ಹಿಡಿದು ವಿನೂತನವಾಗಿ ಪ್ರತಿಭಟನೆ ನಡೆಸಿದವು.


ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ತೆಂಗಿನಕಾಯಿ ಚಿಪ್ಪು ಹಿಡಿದು ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಮಳೆ ನಡುವೆ ಕೆಲಕಾಲ ರಸ್ತೆ ತಡೆ ನಡೆಸಿ, ಕೇಂದ್ರ, ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ತೆಂಗಿನಕಾಯಿ ಚಿಪ್ಪು ನೀಡಿದೆ ಎಂದರು. ಮುಖಂಡ ಶಾ.ಮುರಳಿ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿರುವುದು ಅತ್ಯಂತ ಖಂಡನೀಯ. ಕರ್ನಾಟಕ ಜನತೆ ಹಿತದೃಷ್ಟಿಯಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ತಮಿಳು ಸಂಘದ ಕಾರ್ಯದರ್ಶಿ ಜಗದೀಶ, ಮುಖಂಡ ವೆಂಕಟಚಲಂ, ರವಿಚಂದ್ರ ಪ್ರಸಾದ್, ರಾಜು, ಗೋವಿಂದರಾಜು, ಗು.ಪುರುಷೋತ್ತಮ್, ಆಟೋ ಮಹದೇವಸ್ವಾಮಿ, ಚಾ.ಹ.ರಾಮು, ಲಿಂಗರಾಜು ಇತರರಿದ್ದರು.

ದೇವಸ್ಥಾನ ಹುಂಡಿ ಕಳವಿಗೆ ವಿಫಲ ಯತ್ನ

ಚಾಮರಾಜನಗರ, ಸೆ.30– ದುಷ್ಕರ್ಮಿಗಳು ದೇವಾಲಯದ ಹುಂಡಿ ಕಳವು ಮಾಡಲು ಯತ್ನಿಸಿರುವ ಘಟನೆ ತಾಲೂಕಿನ ಹೆಗ್ಗೋಠಾರ ಗ್ರಾಮದ ಸಿದ್ದರಾಮೇಶ್ವರ ದೇವಾಲಯದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ದುಷ್ಕರ್ಮಿಗಳು ಶುಕ್ರವಾರ ರಾತ್ರಿ ದೇವಾಲಯದ ಬಾಗಿಲು ಮುರಿಯಲು ಮುಂದಾದ ವೇಳೆ ಸೈರನ್ ಕೂಗಿದೆ. ಇದರಿಂದ ಹೆದರಿದ ಕಳ್ಳರು ದೇವಸ್ಥಾನದಿಂದ ಓಡಿ ಹೋಗಿದ್ದಾರೆ ಎನ್ನಲಾಗಿದೆ.

ಹುಂಡಿ ದೋಚಲು ಆಗಮಿಸಿದ್ದ ಇಬ್ಬರು ದುಷ್ಕರ್ಮಿಗಳ ಚಲನವಲನ ದೇವಸ್ಥಾನದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಕಬ್ಬಿಣದ ರಾಡಿನಿಂದ ದೇವಾಲಯದ 2 ಬಾಗಿಲು ಮುರಿದು ಮೂರನೇ ಬಾಗಿಲಿನ ಬೀಗ ಮುರಿಯಲು ಮುಂದಾದಾಗ ಸೈರನ್ ಕೂಗಿದೆ. ಇದರಿಂದ ಬೆದರಿದ ಖದೀಮರು ಸ್ಥಳದಿಂದ ಓಡಿ ಹೋಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರದ ಪೊಲೀಸರು ಭೇಟಿ ನೀಡಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.



ಶಾರ್ಟ್ ಸರ್ಕ್ಯೂಟ್: ಟೈಲರ್ ಅಂಗಡಿ ಭಸ್ಮ

ಸ್ಥಳಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಭೇಟಿ, ಪರಿಶೀಲನೆ

ಚಾಮರಾಜನಗರ, ಸೆ.30– ಶಾರ್ಟ್ ಸರ್ಕ್ಯೂಟ್ ಉಂಟಾದ ಪರಿಣಾಮ ಟೈಲರ್ ಅಂಗಡಿ ಭಸ್ಮಗೊಂಡಿರುವ ಘಟನೆ ನಗರದ ದೇವಾಂಗ 3ನೇ ಬೀದಿಯಲ್ಲಿ ನಡೆದಿದೆ.




ರಮೇಶ್ ಅವರಿಗೆ ಸೇರಿದ ಅಂಗಡಿ ಭಸ್ಮವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿ ಪರಿಶೀಲಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಪರಿಶೀಲಿಸಿ ವೈಯಕ್ತಿಕ ಪರಿಹಾರ ನೀಡಿದರು. ಈ ವೇಳೆ ಮಾತನಾಡಿದ ಅಂಗಡಿ ಮಾಲೀಕ ರಮೇಶ್, ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಟೈಲರಿಂಗ್ ಮೆಷಿನ್, ಹೊಸ ಬಟ್ಟೆಗಳು, ಪೀಠೋಪಕರಣಗಳು ಸೇರಿದಂತೆ ಅಂದಾಜು 1.50 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಶಾಸಕರಿಗೆ ತಿಳಿಸಿದರು. ಈ ವೇಳೆ ಮುಖಂಡ ಮಹೇಶ್ ಸೇರಿದಂತೆ ಸ್ಥಳೀಯರಿದ್ದರು.

ಬಿಳಿಗಿರಿರಂಗನಬೆಟ್ಟ ಹುಂಡಿಯಲ್ಲಿ 32.02 ಲಕ್ಷ ಸಂಗ್ರಹ

ಯಳಂದೂರು, ಸೆ.30– ತಾಲೂಕಿನ ಪ್ರಸಿದ್ಧ ಪ್ರವಾಸಿತಾಣ ಬಿಳಿಗಿರಿರಂಗನಬೆಟ್ಟದ ಶ್ರೀಬಿಳಿಗಿರಿರಂಗನಾಥಸ್ವಾಮಿ ದೇಗುಲದ ಹುಂಡಿಯಲ್ಲಿ 32.02 ಲಕ್ಷ ರೂ. ಸಂಗ್ರಹವಾಗಿದೆ.

ಶುಕ್ರವಾರ ದೇಗುಲದ ಆವರಣದಲ್ಲಿ ನಡೆದ ಹುಂಡಿ ಎಣಿಕೆಯಲ್ಲಿ 30.5 ಲಕ್ಷ ರೂ. ನೋಟುಗಳು ಹಾಗೂ 1.52 ಲಕ್ಷ ರೂ. ನಾಣ್ಯಗಳು ಸೇರಿದಂತೆ 32.02 ಲಕ್ಷ ರೂ. ಸಂಗ್ರಹವಾಗಿದ್ದು, 40 ಅಮೆರಿಕನ್ ಡಾಲರ್ ಸಹ ದೊರೆತಿದೆ. ಎಣಿಕೆ ಕಾರ್ಯದಲ್ಲಿ ದೇಗುಲದ ಕಾರ್ಯ ನಿರ್ವಾಹಕ ಅಧಿಕಾರಿ ಮೋಹನ್ ಕುಮಾರ್ ನೇತೃತ್ವದಲ್ಲಿ ನೌಕರ ವರ್ಗ, ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕಿನ ಸಿಬ್ಬಂದಿ ಹಾಜರಿದ್ದರು.






ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಸೆ.30– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅ.3ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಚಾಮರಾಜನಗರಕ್ಕೆ ಆಗಮಿಸಿ ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಆಯೋಜಿಸಿರುವ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 108ನೇ ಜಯಂತಿಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳ ಸಂಸ್ಥೆಯಿಂದ ಎಲ್ಲಾ ವರ್ಗದವರಿಗೂ ನೆರವು: ಗಣೇಶ್‌ಪ್ರಸಾದ್

ಗುಂಡ್ಲುಪೇಟೆ, ಸೆ.30– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಬಡವರು, ರೈತರು ಸೇರಿದಂತೆ ಎಲ್ಲಾ ವರ್ಗದ ಜನರಿಗೂ ನೆರವು ದೊರೆಯುತ್ತಿದೆ ಎಂದು ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ತಿಳಿಸಿದರು.



ತಾಲೂಕಿನ ತೆರಕಣಾಂಬಿಯ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಚೇರಿ ವತಿಯಿಂದ ತೆರಕಣಾಂಬಿಯ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಆಯೋಜಿಸಿದ್ದ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬಡವರು, ರೈತರು, ನೊಂದವರು ಸೇರಿದಂತೆ ಎಲ್ಲರಿಗೂ ನೆರವು ಸಿಗುತ್ತಿದ್ದು, ಕ್ಷೇತ್ರದ ಜನತೆಗೆ ಸರ್ಕಾರದಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯ ಕಲ್ಪಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಮೈಸೂರು ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತ್ತಾಯ ಮಾತನಾಡಿ, ಯೋಜನೆಯ ಅನುದಾನಿತ ಕಾರ್ಯಕ್ರಮಗಳಾದ ಕೆರೆ ಅಭಿವೃದ್ಧಿ, ದೇವಾಲಯ ಜೀರ್ಣೋದ್ಧಾರ, ಜನಮಂಗಲ, ಮಾಸಾಶನ, ವಾತ್ಸಲ್ಯ ಮನೆ ರಚನೆ, ಧಾರ್ಮಿಕ ಭಾವನೆಗಳ ಬಗ್ಗೆ ಸಭಿಕರಿಗೆ ಸಮಗ್ರವಾಗಿ ಮಾಹಿತಿ ನೀಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಚಂದ್ರು. ಎನ್.ಲಕ್ಕೂರು ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನಮ್ಮ ದೇಶ ಹೆಚ್ಚು ಹಳ್ಳಿಗಳಿಂದ ಕೂಡಿದ್ದು, ಗ್ರಾಮಗಳು ಸರ್ವತೋಮುಖ ಅಭಿವೃದ್ಧಿ ಹೊಂದಿದರೇ ಮಾತ್ರ ದೇಶ ಅಭಿವೃದ್ಧಿ ಹೊಂದುತ್ತದೆ ಎಂದಿದ್ದರು. ಅವರ ಪರಿಕಲ್ಪನೆಯಂತೆ ಡಾ.ವೀರೇಂದ್ರ ಹೆಗ್ಗಡೆಯವರು ಹತ್ತು ಹಲವು ಯೋಜನೆಗಳನ್ನು ರೂಪಿಸುವ ಮೂಲಕ ರಾಜ್ಯದ ಕಟ್ಟ ಕಡೆಯ ನಾಗರಿಕನಿಗೂ ಸೌಲಭ್ಯಗಳನ್ನು ತಲುಪಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಮೂಡುಗೂರಿನ ಶ್ರೀಉದ್ಧಾನೇಶ್ವರ ವಿರಕ್ತ ಮಠದ ಶ್ರೀಇಮ್ಮಡಿ ಉದ್ಧಾನಸ್ವಾಮಿಗಳು ವಹಿಸಿ ಮಾತನಾಡಿ, ಬಸವಾದಿ ಶರಣರು 12ನೇ ಶತಮಾನದಲ್ಲಿ ಸಕಲ ಜೀವಾತ್ಮರಿಗೆ ಒಳಿತನ್ನು ಬಯಸುವ ಮೂಲಕ ಲಿಂಗಾಯತ ಧರ್ಮವನ್ನು ಇಡೀ ಜಗತ್ತಿಗೆ ಸಾರಿದರು. ಡಾ.ವೀರೇಂದ್ರ ಹೆಗ್ಗಡೆಯವರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಖಾಂತರ ಸರ್ವರ ಅಭ್ಯುದಯಕ್ಕೆ ಮುನ್ನುಡಿ ಬರೆದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕಿ ಲತಾ ಬಂಗೇರ, ಮುಖಂಡ ದಿನೇಶ್ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಬಸವರಾಜಪ್ಪ, ವರಮಹಾಲಕ್ಷ್ಮಿ ಪೂಜಾ ಸಮಿತಿ ಅಧ್ಯಕ್ಷ ಬಸವರಾಜು, ಎಪಿಎಂಸಿ ಸದಸ್ಯ ಪಿ.ಮಹದೇವಪ್ಪ, ಮೇಲ್ವಿಚಾರಕ ಶ್ರೇಣಿಯ ಸಿಬ್ಬಂದಿ, ಸೇವಾ ಪ್ರತಿನಿಧಿಗಳು, ಸ್ವಸಹಾಯ ಸಂಘ ಹಾಗೂ ಪ್ರಗತಿ ಬಂಧು ಸಂಘದ ಸದಸ್ಯರು ಉಪಸ್ಥಿತರಿದ್ದರು.

ಎರಡು ವರ್ಷಗಳಿಂದ ಸಾಹಿತಿಗಳಿಗೆ ಜೀವ ಬೆದರಿಕೆ ಪತ್ರ; ಹಿಂದೂ ಸಂಘಟನೆ ಕಾರ್ಯಕರ್ತನ ಬಂಧನ



ದಾವಣಗೆರೆ, ಸೆ.30– ಸಾಹಿತಿಗಳಿಗೆ ಅನಾಮಧೇಯ ಪತ್ರದ ಮೂಲಕ ಜೀವ ಬೆದರಿಕೆ ಪತ್ರ ಕಳುಹಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ದಾವಣಗೆರೆಯ ಮೂಲದ ವ್ಯಕ್ತಿಯೊಬ್ಬ ನನ್ನು ಬಂಧಿಸಿದ್ದಾರೆ.

ಪತ್ರ ಬರೆಯುತ್ತಿದ್ದ ಹಿಂದೂ ಸಂಘಟನೆ ಕಾರ್ಯಕರ್ತ ಶಿವಾಜಿ ರಾವ್ ಜಾಧವ್ ಬಂಧಿತ ಆರೋಪಿ ಎಂದು ತಿಳಿದು ಬಂದಿದೆ. ಸುಮಾರು ಎರಡು ವರ್ಷಗಳಿಂದ ಕೊಲೆ ಬೆದರಿಕೆ ಪತ್ರ ಬರೆಯುತ್ತಿದ್ದ ಹಿನ್ನೆಲೆಯಲ್ಲಿ ತನಿಖೆ ನಡೆಸಿದ ಸಿಸಿಬಿ ಎಸಿಪಿ ನವೀನ್ ಕುಲಕರ್ಣಿ ಮತ್ತು ತಂಡ ದಾವಣಗೆರೆಯಲ್ಲಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ದಾವಣಗೆರೆ ಸೇರಿದಂತೆ ಕೆಲವೆಡೆ ಕಾರ್ಯಾಚರಣೆ ನಡೆಸಿದ ಸಿಸಿಬಿ, ಪತ್ರ ಬರೆದಿರುವ ಶಂಕೆಯ ಮೇರೆಗೆ 8 ಮಂದಿಯನ್ನು ವಶಕ್ಕೆ ಪಡೆದಿತ್ತು. ಈ ಪೈಕಿ ಶಿವಾಜಿ ರಾವ್ ಜಾಧವ್ ಮೇಲೆ ಸಿಸಿಬಿಗೆ ಪ್ರಬಲ ಗುಮಾನಿ ವ್ಯಕ್ತವಾಗಿತ್ತು. 41 ವರ್ಷ ವಯಸ್ಸಿನ ಆತ (ಆರೋಪಿ) ಎಂಟನೇ ತರಗತಿ ಪಾಸ್ ಆಗಿದ್ದು, ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನಿಂದ ಹೆಚ್ಚಿನ ಮಾಹಿತಿ ಪಡೆಯಲು ಸಿಸಿಬಿ 10 ದಿನಗಳ ಪೊಲೀಸ್ ಕಸ್ಟಡಿ ಪಡೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಸಿಸಿಬಿಯ ಮಾಹಿತಿಯ ಪ್ರಕಾರ, ರಾಜ್ಯದ 15 ಕ್ಕೂ ಹೆಚ್ಚು ಸಾಹಿತಿಗಳು ಮತ್ತು ಬುದ್ಧಿ ಜೀವಿಗಳು ಕರ್ನಾಟಕ ಗೃಹ ಸಚಿವ ಜಿ ಪರಮೇಶ್ವರ ಅವರನ್ನು ಭೇಟಿ ಮಾಡಿ, ಕಳೆದ ಒಂದು ವರ್ಷದಿಂದ ತಮಗೆ ಬೆದರಿಕೆ ಪತ್ರಗಳು ಬರುತ್ತಿವೆ ಎಂದು ತಿಳಿಸಿದ್ದರು.

ಸಾಹಿತಿಗಳಾದ ಕುಂ.ವೀರಭದ್ರಪ್ಪ, ಬಂಜಗೆರೆ ಜಯಪ್ರಕಾಶ್, ಬಿ.ಎಲ್.ವೇಣು, ಬಿ.ಟಿ.ಲಲಿತಾ ನಾಯಕ್, ವಸುಂಧರ ಭೂಪತಿ ಸೇರಿದಂತೆ ಕೆಲವು ಸ್ವಾಮೀಜಿಗಳಿಗೆ ಅನಾಮಧೇಯ ಹೆಸರಿನಲ್ಲಿ ಜೀವ ಬೆದರಿಕೆ ಪತ್ರಗಳು ಬಂದಿದ್ದವು. ಈ ಪತ್ರಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರವು, ಇದರ ಹಿಂದಿರುವವರನ್ನು ಪತ್ತೆ ಹಚ್ಚಲು ಸಿಸಿಬಿಗೆ ತನಿಖೆಗೆ ವಹಿಸಿತ್ತು. ಪತ್ರಗಳು ನಿರಂತರವಾಗಿ ಬರುತ್ತಿದ್ದ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಏಳು ಕಡೆಗಳಲ್ಲಿ ಎಫ್‌ಐಆರ್ ದಾಖಲಾಗಿತ್ತು. ನಿಮ್ಮನ್ನು ಯಾಕೆ ಕೊಲೆ ಮಾಡಬಾರದು? ನಿಮ್ಮನ್ನು ಯಾಕೆ ಗುಂಡಿಟ್ಟು ಕೊಲ್ಲಬಾರದು? ನೀವು ನಿಮ್ಮ ಕೊನೆ ದಿನಗಳನ್ನು ಎಣಿಸುತ್ತಿದ್ದೀರಿ ಎಂದು ಶಿವಾಜಿ ರಾವ್ ಪತ್ರ ಬರೆಯುತ್ತಿದ್ದ. ಪ್ರತಿ ಬೆದರಿಕೆ ಪತ್ರದಲ್ಲೂ ಒಂದೇ ರೀತಿಯ ಕೈ ಬರಹ ಇತ್ತು. ದಾವಣಗೆರೆಯಿಂದಲೇ ಈ ಪತ್ರಗಳು ಪೋಸ್ಟ್ ಆಗುತ್ತಿದ್ದವು. ಎರಡು ವರ್ಷಗಳಿಂದ ಬರುತ್ತಿದ್ದ ಅನಾಮಧೇಯ ಬೆದರಿಕೆ ಪತ್ರದ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿ ರಾಜ್ಯಾದ್ಯಂತ ಏಳು ಎಫ್‌ಐಆರ್ ದಾಖಲಾಗಿತ್ತು. ನಂತರ ಪ್ರಕರಣವನ್ನು ರಾಜ್ಯ ಸರ್ಕಾರ ಸಿಸಿಬಿಗೆ ವರ್ಗಾಯಿಸಿತ್ತು.

ಒಂದೇ ಒಂದು ಕೈಬರಹದಿಂದ ಕೊಲೆ ಬೆದರಿಕೆ ಬಂದಿದೆ ಎನ್ನುವುದು ವಿಧಿ ವಿಜ್ಞಾನ ಪ್ರಯೋಗಾಲಯದ (FSL) ಪರೀಕ್ಷೆಯಿಂದ ದೃಢಪಟ್ಟಿತ್ತು.

ದುಷ್ಟ ಶಕ್ತಿಗಳೆಡೆಗೆ ನಮ್ಮದು 'ಜೀರೊ ಟಾಲರೆನ್ಸ್'



ಬೆಂಗಳೂರು, ಸೆ.30– ಸಮಾಜ ಮುಖಿ ಧ್ವನಿಯನ್ನು ಅಡಗಿಸಲು ಯತ್ನಿಸುವ ದುಷ್ಟ ಶಕ್ತಿಗಳೆಡೆಗೆ ನಮ್ಮದು 'ಜೀರೊ ಟಾಲರೆನ್ಸ್' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಎರಡು ವರ್ಷಗಳಿಂದ ಸಾಹಿತಿಗಳಿಗೆ ಅನಾಮಧೇಯ ಪತ್ರದ ಮೂಲಕ ಜೀವ ಬೆದರಿಕೆ ಪತ್ರ ಕಳುಹಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ದಾವಣಗೆರೆಯ ಮೂಲದ ವ್ಯಕ್ತಿಯೊಬ್ಬನನ್ನು ಬಂಧಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಈ ರೀತಿ ಹೇಳಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಮುಖ್ಯಮಂತ್ರಿ, ನಾಡಿನ ಪ್ರತಿ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ. ಆರೋಪಿಯ ಜೊತೆ ಯಾವುದೇ ಸಂಘಟನೆ ಅಥವಾ ವ್ಯಕ್ತಿಗಳು ಶಾಮೀಲಾಗಿದ್ದರೂ ಅವರನ್ನು ಪತ್ತೆಹಚ್ಚಿ ಕಾನೂನಿನ ಕೈಗಳಿಗೆ ಒಪ್ಪಿಸುವ ಮೂಲಕ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ದರ ಶೇ.30ರಿಂದ 50ರಷ್ಟು ಹೆಚ್ಚಳ

ರಾತ್ರಿ 8 ಗಂಟೆವರೆಗೆ ಕಾರ್ಯನಿರ್ವಹಿಸುವಂತೆ ಆದೇಶ ನೀಡಿತ್ತು. ಈ ಅವಕಾಶವನ್ನು ಬಳಸಿಕೊಂಡ ಆಸ್ತಿ ಮಾರುವವರು ಹಾಗೂ ಕೊಳ್ಳುವವರು, ಹಳೇ ಮಾರ್ಗಸೂಚಿ ದರದ ರೀತ್ಯಾ ಆಸ್ತಿಗಳ ನೋಂದಣಿಗೆ ಮುಗಿ ಬಿದ್ದಿದ್ದರಿಂದ ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ನೂಕು–ನುಗ್ಗಲು ಕಂಡುಬಂದಿತು. ಮೈಸೂರು ಜಿಲ್ಲೆಯಲ್ಲಿ ಸೆಪ್ಟೆಂಬರ್ 22ರಿಂದ 30ರವರೆಗೆ ಒಟ್ಟು 6,10,54,991 ರೂ. ಸ್ಟ್ಯಾಂಪ್ ಡ್ಯೂಟಿ ಶುಲ್ಕ ಸಂಗ್ರಹವಾಗಿದೆ.

ಮೈಸೂರು ನಗರದ ಪೂರ್ವ (ಡಾ. ರಾಜ್‌ಕುಮಾರ್ ರಸ್ತೆ), ಪಶ್ಚಿಮ (ವಿಜಯನಗರ ವಾಟರ್ ಟ್ಯಾಂಕ್), ಉತ್ತರ (ಮಿನಿ ವಿಧಾನಸೌಧ, ನಜರ್‌ಬಾದ್), ದಕ್ಷಿಣ (ರಾಮಕೃಷ್ಣನಗರ) ಹಾಗೂ ಮುಡಾ ಕಚೇರಿಯಲ್ಲಿರುವ ಉಪ ನೋಂದಣಾಧಿಕಾರಿ ಕಚೇರಿಗಳಲ್ಲದೆ, ಗ್ರಾಮಾಂತರ ಪ್ರದೇಶದ ತಿ.ನರಸೀಪುರ, ಬನ್ನೂರು, ನಂಜನಗೂಡು, ಕೆ.ಆರ್.ನಗರ, ಮಿರ್ಲೆ, ಪಿರಿಯಾಪಟ್ಟಣ, ಬೆಟ್ಟದಪುರ, ಹುಣಸೂರು ಹಾಗೂ ಹೆಚ್.ಡಿ. ಕೋಟೆ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ 'ಕರ್ನಾಟಕ ಬಂದ್' ವೇಳೆಯೂ ಆಸ್ತಿಗಳ ನೋಂದಣಿ ಪ್ರಕ್ರಿಯೆ ನಡೆದವು. ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತಾಳ್ಮೆಯಿಂದ ನಿರ್ವಹಿಸಿ ಅಧಿಕ ಆದಾಯ ಸಂಗ್ರಹಿಸಿದ್ದಾರೆ. ಅದಕ್ಕೆ ಬಳಸುವ ಕಾವೇರಿ–2 ಸಾಫ್ಟ್‌ವೇರ್ ಮೂಲಕ ಆನ್‌ಲೈನ್‌ನಲ್ಲಿ ದಾಖಲಾತಿ ಅಪ್‌ಲೋಡ್ ಮಾಡಿ, ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿಗಳ ನೋಂದಣಿ ಪ್ರಕ್ರಿಯೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗಿದೆ.

ಸೆಪ್ಟೆಂಬರ್ 23ರಿಂದ 29ರವರೆಗೆ ಬನ್ನೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 103, ಬೆಟ್ಟದಪುರದಲ್ಲಿ 114, ಹೆಚ್.ಡಿ.ಕೋಟೆಯಲ್ಲಿ 196, ಹುಣಸೂರಲ್ಲಿ 296, ಕೆ.ಆರ್.ನಗರದಲ್ಲಿ 144, ಮಿರ್ಲೆಯಲ್ಲಿ 129, ಮುಡಾದಲ್ಲಿ 98, ಮೈಸೂರಿನ ಪೂರ್ವದಲ್ಲಿ 521, ಉತ್ತರದಲ್ಲಿ 414, ದಕ್ಷಿಣದಲ್ಲಿ 361, ಪಶ್ಚಿಮದಲ್ಲಿ 714, ನಂಜನಗೂಡಲ್ಲಿ 308, ಪಿರಿಯಾಪಟ್ಟಣದಲ್ಲಿ 138, ತಿ.ನರಸೀಪುರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 141 ಆಸ್ತಿಗಳು ನೋಂದಣಿಯಾಗಿವೆ. ನಾಳೆ (ಅ. 1)ಯಿಂದ ಆಸ್ತಿ ಮಾರ್ಗಸೂಚಿ ದರ ಏರಿಕೆಯಾಗುವುದರಿಂದ ಇಂದು ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ 14 ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿಗಳ ದಾಖಲಾತಿ ನೋಂದಣಿಗೆ ನೂಕು–ನುಗ್ಗಲು ಉಂಟಾಗಿತ್ತು.

ಸರಗೂರು ಬಳಿ ಮೂವರು ಜಲಸಮಾಧಿ

ಚಂಗೋಡನಹಳ್ಳಿಯ ನಿವಾಸಿಗಳಾಗಿದ್ದು, ಬೆಂಗಳೂರಿನಲ್ಲಿ ವಾಸವಾಗಿದ್ದರು ಎನ್ನಲಾಗಿದೆ. ಕೂಡಲೇ ಸರಗೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ನುರಿತ ಈಜುಗಾರರ ಸಹಾಯದಿಂದ ನಾಲೆಯಿಂದ ಇಬ್ಬರ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಮತ್ತೊಂದು ಇನ್ನೂ ಸಿಕ್ಕಿಲ್ಲ. ಸರಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರು ಪರಿಶೀಲನಾ ಅರ್ಜಿ ಸಲ್ಲಿಕೆ

ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಸರ್ವೋಚ್ಚ ನ್ಯಾಯಾ ಲಯದ ನಿವೃತ್ತ ನ್ಯಾಯಾಧೀಶರು, ಅಡ್ವೋಕೇಟ್ ಜನರಲ್ ಅವರೊಂದಿಗೆ ಸಭೆ ನಡೆಸಿ ಸಲಹೆಗಳನ್ನು ಪಡೆಯಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಲಿಂಗಾಯತರಿಗೆ ಅನ್ಯಾಯವಾಗಿಲ್ಲ: ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಗೌರವ ಸಿಗುತ್ತಿಲ್ಲ ಎಂಬ ದೂರಿನ ಬಗ್ಗೆ ಉತ್ತರಿಸುತ್ತಾ, ಲಿಂಗಾಯತ ಸಮುದಾಯಕ್ಕೆ ಸೇರಿದ ಏಳು ಸಚಿವರು ಸಂಪುಟದಲ್ಲಿದ್ದು, ಈ ಸಮುದಾಯಕ್ಕೆ ಸೇರಿದ ಅಧಿಕಾರಿಗಳಿಗೆ ಅನ್ಯಾಯವಾಗಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಜಾತಿ–ಧರ್ಮದವರಿಗೂ ಅನ್ಯಾಯವಾಗುವುದಿಲ್ಲ ಎಂದು ತಿಳಿಸಿದರು.

ಸರ್ಕಾರಿ ವಾಹನಗಳು ಗುಜರಿಗೆ

17 ಲಕ್ಷ ಮಧ್ಯಮ ಮತ್ತು ಭಾರೀ ವಾಣಿಜ್ಯ ವಾಹನಗಳಿವೆ. ಈ ಪ್ರಮಾಣದ ವಾಹನಗಳೆಲ್ಲಾ ಇನ್ನು ಬಳಕೆಯಲ್ಲಿವೆ. ಇಷ್ಟು ಪ್ರಮಾಣದ ವಾಹನಗಳಿಂದ ಹೊರಸೂಸುವ ಹೊಗೆಯಿಂದ ಭಾರೀ ಪ್ರಮಾಣದಲ್ಲಿ ಪರಿಸರ ಮಾಲಿನ್ಯವಾಗುತ್ತದೆ. ಈ ಕಾರಣದಿಂದಲೇ ಕೇಂದ್ರ ಸರ್ಕಾರ ಸ್ಕ್ರಾಪಿಂಗ್ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದೆ.

ಪರಿಸರ ಸ್ನೇಹಿ, ಸುರಕ್ಷಿತ ಮತ್ತು ತಾಂತ್ರಿಕವಾಗಿ ಮಿತ ಇಂಧನ ನಿರ್ವಹಣೆಯ ವಾಹನಗಳ ಬಳಕೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಈ ಸ್ಕ್ರಾಪಿಂಗ್ ನೀತಿ ಜಾರಿಗೊಳಿಸಿದೆ. ಕೇಂದ್ರ ಸರ್ಕಾರ ಜಾರಿಗೊಳಿಸಲುದ್ದೇಶಿಸಿರುವ ಸ್ಕ್ರಾಪಿಂಗ್ ನೀತಿಯನ್ನು ರಾಜ್ಯ ಸರ್ಕಾರ ಕೂಡ ಚಾಚೂ ತಪ್ಪದೆ ಅನುಸರಿಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ವಾಹನಗಳನ್ನು ಸ್ಕ್ರಾಪ್ ಮಾಡಲು ಬೆಂಗಳೂರಿನ ದೇವನಹಳ್ಳಿಯ ವಿಜಯಪುರ ಬಳಿ ಸ್ಕ್ರಾಪಿಂಗ್ ಯಾರ್ಡ್ ಸ್ಥಾಪಿಸುತ್ತಿದೆ. ಇದರ ನಿರ್ವಹಣೆ ಹೊಣೆಯನ್ನು ಖಾಸಗಿ ಕಂಪನಿಗೆ ಒಪ್ಪಿಸಲು ಅನುಮೋದನೆ ನೀಡಿದೆ.

ಸದ್ಯಕ್ಕೆ ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕಲಾಗುತ್ತಿದೆ. ನಂತರದ ದಿನಗಳಲ್ಲಿ ಖಾಸಗಿ ವಾಹನಗಳನ್ನು ಸ್ಕ್ರಾಪಿಂಗ್ ಮಾಡಲು ಸರ್ಕಾರ ಉದ್ದೇಶಿಸಿದೆ. ಖಾಸಗಿ ವಾಹಗಳನ್ನು ಸ್ಕ್ರಾಪಿಂಗ್ ಮಾಡಿದರೆ, ಹೊಸ ವಾಹನಗಳ ಮಾರಾಟವೂ ಹೆಚ್ಚಾಗುತ್ತದೆ. ಇದರಿಂದ ದೇಶದ ಆಟೋಮೊಬೈಲ್ ಕ್ಷೇತ್ರ ಬೆಳವಣಿಗೆ ಹೊಂದುತ್ತದೆ. ಇದನ್ನು ಮನಗಂಡು ಬಹು ರಾಷ್ಟ್ರೀಯ ಕಂಪನಿಗಳು ಹೊಸ ವಾಹನಗಳ ಖರೀದಿಗೆ ಕೊಡುಗೆ ನೀಡುವ ಯೋಜನೆಯಿಂದ ಭಾರತದಲ್ಲಿ ಹೆಚ್ಚಿನ ಬಂಡವಾಳ ಹೂಡುತ್ತವೆ. ಇದರಿಂದ ಸಹಜವಾಗಿ ಉದ್ಯೋಗಾವಕಾಶ ದೊರೆಯುವುದಲ್ಲದೆ, ದೇಶದ ಆರ್ಥಿಕತೆ ಮತ್ತಷ್ಟು ಸುಧಾರಿಸುತ್ತದೆ ಎಂಬುದು ಕೇಂದ್ರ ಸರ್ಕಾರದ ಲೆಕ್ಕಾಚಾರ.

ದಸರಾ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ: ನೂರಾರು ಕ್ರೀಡಾಪಟುಗಳು ಭಾಗಿ

ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮ





ಮೈಸೂರು, ಸೆ.30(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಪ್ರತಿವರ್ಷ ನಡೆಯಲಿರುವ ಕ್ರೀಡಾ ಕೂಟದ ಚಟುವಟಿಕೆಗಳು ಆರಂಭವಾಗಿದ್ದು, ಶನಿವಾರ ಆರಂಭವಾದ ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಿಂದ ನೂರಾರು ಕ್ರೀಡಾಪಟುಗಳು ಪಾಲ್ಗೊಂಡು ಕ್ರೀಡಾಸ್ಫೂರ್ತಿಯಿಂದ ಹಲವು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ.

ಜಿಲ್ಲಾಡಳಿತ, ಜಿ.ಪಂ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಅವರು, ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪ್ರತಿವರ್ಷವೂ ಕ್ರೀಡಾಕೂಟ ಆಯೋಜಿಸಲಾಗುತ್ತಿದ್ದು, ಕರ್ನಾಟಕದ ವಿವಿಧ ಜಿಲ್ಲೆಗಳು ಮಾತ್ರವಲ್ಲದೆ, ವಿವಿಧ ರಾಜ್ಯಗಳ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಈ ಸಾಲಿನ ದಸರಾ ಕ್ರೀಡಾಕೂಟಕ್ಕೆ ವಿವಿಧ ಹಂತಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಇದೀಗ ಜಿಲ್ಲಾಮಟ್ಟದ ಕ್ರೀಡಾಕೂಟ ಆರಂಭವಾಗಿದೆ. ವಿವಿಧ ತಾಲೂಕುಗಳನ್ನು ಪ್ರತಿನಿಧಿಸುತ್ತಿರುವ ಕ್ರೀಡಾಪಟುಗಳು ಸಾಧನೆ ಮಾಡುವತ್ತ ಗಮನ ಹರಿಸಬೇಕು. ಅಲ್ಲದೆ, ಕ್ರೀಡಾಮನೋಭಾವದಿಂದ ಪಾಲ್ಗೊಳ್ಳಬೇಕು. ಕ್ರೀಡೆಯಲ್ಲಿ ಪಾಲ್ಗೊಂಡ ಎಲ್ಲರೂ ಜಯಗಳಿಸಲು ಸಾಧ್ಯವಿಲ್ಲ. ಹಾಗಾಗಿ ಸೋತವರು ದೃತಿಗೆಡದೆ, ಕ್ರೀಡಾಸ್ಫೂರ್ತಿ ಪ್ರದರ್ಶಿಸಬೇಕು ಎಂದರು.

> ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿರುವವರು ರಾಜ್ಯ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಆಯ್ಕೆಯಾಗಲು ಉತ್ತಮ ಪ್ರದರ್ಶನ ನೀಡಬೇಕು. ಮುಂದಿನ ದಿನಗಳಲ್ಲಿ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿ ಮೈಸೂರು ಜಿಲ್ಲೆಗೆ ಕೀರ್ತಿ ತರಬೇಕು.
> -ಶಾಸಕ ತನ್ವೀರ್ ಸೇಠ್

ವಿಧಾನ ಪರಿಷತ್ ಸದಸ್ಯ ಸಿ.ಎನ್ ಮಂಜೇಗೌಡ ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಭಾಗವಹಿಸಿದರೂ ನಿಮ್ಮ ಸ್ವಂತಿಕೆ ಪ್ರದರ್ಶಿಸಬೇಕು. ನಿಮ್ಮಲ್ಲಿರುವ ಕೌಶಲ್ಯವನ್ನು ಹೊರ ಜಗತ್ತಿಗೆ ತೋರಿಸಲು ಪಣ ತೊಡಬೇಕು. ಕ್ರೀಡಾಪಟುಗಳೇ ದೇಶದ ಕೀರ್ತಿ ಪತಾಕೆ ಹಾರಿಸುವವರಾಗಿದ್ದಾರೆ. ನಿಮ್ಮ ಉಜ್ವಲ ಭವಿಷ್ಯಕ್ಕಾಗಿ ಕ್ರೀಡೆಗಳಲ್ಲಿ ಪಾಲ್ಗೊಂಡು ದೇಶಕ್ಕೆ ಕ್ರೀಡಾಪಟುಗಳಾಗಬೇಕು. ಒಬ್ಬ ಒಳ್ಳೆ ಕ್ರೀಡಾಪಟುವಾದರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಗುರುತಿಸಿಕೊಳ್ಳುವ ಅವಕಾಶ ಇದೆ. ಪ್ರತಿಯೊಬ್ಬರೂ ಕೂಡ ಕ್ರೀಡೆಗಳಲ್ಲಿ ಪಾಲ್ಗೊಂಡು ಉತ್ತಮ ಜೀವನ ನಡೆಸಿ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ ರಾಜೇಂದ್ರ ಮಾತನಾಡಿ, ಪ್ರತಿಯೊಬ್ಬ ಕ್ರೀಡಾಪಟುಗಳು ಉತ್ತಮ ಸಾಧನೆಯನ್ನು ಮಾಡಬೇಕು. ಉತ್ತಮ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ನಿಮ್ಮ ಪ್ರತಿಭೆಗೆ ತಕ್ಕ ಪ್ರತಿಫಲವನ್ನು ಪಡೆಯಬೇಕು ಎಂದು ಶುಭ ಕೋರಿದರು. ಇದೇ ವೇಳೆ ವಿವಿಧ ತಾಲೂಕು ಪ್ರತಿನಿಧಿಸುವ ಕ್ರೀಡಾಪಟುಗಳು ಮಳೆಯಲ್ಲೂ ಅತಿಥಿಗಳಿಗೆ ಧ್ವಜವಂದನೆ ಸಲ್ಲಿಸಿದರು. ಬಳಿಕ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ವಿವಿಧೆಡೆ ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದ ಚಟುವಟಿಕೆ ನಡೆದವು. ಇಂದು ನಡೆದ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್ ವಿಭಾಗದಲ್ಲಿ ಓಟ, ರಿಲೆ, ಎತ್ತರ ಜಿಗಿತ, ಉದ್ದ ಜಿಗಿತ, ಗುಂಡು ಎಸೆತ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಕ್ರೀಡಾಪಟುಗಳು ಪಾಲ್ಗೊಂಡು ಗಮನ ಸೆಳೆದರು. ಅಲ್ಲದೆ, ಖೋಖೋ, ವಾಲಿಬಾಲ್ ಸೇರಿದಂತೆ ಇನ್ನಿತರ ಗುಂಪು ಕ್ರೀಡೆಯೂ ಜರುಗಿದವು.

ಲಾಭ ನಿರೀಕ್ಷಿಸದೆ ಅಫ್ಘಾನಿಸ್ತಾನದಲ್ಲಿ ಪಾರ್ಲಿಮೆಂಟ್ ನಿರ್ಮಿಸಿದ್ದೇನೆ

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅನುಭವ ಹಂಚಿಕೊಂಡ ಆಂಧ್ರಪ್ರದೇಶದ ಗುತ್ತಿಗೆದಾರ ಸೀನಯ್ಯ



ಮೈಸೂರು, ಸೆ.30(ಬಿಎಲ್‌ಯು)– ನಾವು ಮಾಡುವ ಕೆಲಸ ನೆನಪಿನಲ್ಲಿ ಉಳಿಯುವಂತಾಗಲಿ ಎಂಬ ದೃಷ್ಟಿಯಿಂದ ಲಾಭ ನಿರೀಕ್ಷಿಸದೆ ಅಫ್ಘಾನಿಸ್ತಾನದಲ್ಲಿ ಪಾರ್ಲಿಮೆಂಟ್ ಹಾಗೂ ಭಾರತದ ರಾಯಭಾರ ಕಚೇರಿ ನಿರ್ಮಾಣ ಮಾಡಿದೆ ಎಂದು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮಾಜಿ ಅಧ್ಯಕ್ಷರೂ ಆದ ಭಾರತದ ಹೆಸರಾಂತ ಗುತ್ತಿಗೆದಾರ ಬಿ.ಸೀನಯ್ಯ ತಿಳಿಸಿದರು.

ಮೈಸೂರಿನ ವಿಶ್ವೇಶ್ವರಯ್ಯನಗರದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ಬಿಲ್ಡ್ ಟೆಕ್ 23ರ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಅಫ್ಘಾನಿಸ್ತಾನದಲ್ಲಿ ಪಾರ್ಲಿಮೆಂಟ್ ಹಾಗೂ ಭಾರತದ ರಾಯಭಾರ ಕಚೇರಿ ನಿರ್ಮಾಣ ಮಾಡಿದ ಅನುಭವವನ್ನು ಈ ವೇಳೆ ವಿವರಿಸಿದರು.

ಮೂಲತಃ ಆಂಧ್ರಪ್ರದೇಶದವನಾದ ನಾನು ಕೃಷಿಕ ಕುಟುಂಬದಿಂದ ಬಂದವನು. ನಮ್ಮ ಸಹೋದರರು ವೈದ್ಯ ಹಾಗೂ ಇನ್ನಿತರ ವೃತ್ತಿ ಆಯ್ಕೆ ಮಾಡಿಕೊಂಡರೆ ನಾನು ಗುತ್ತಿಗೆದಾರ ವೃತ್ತಿ ಆಯ್ಕೆ ಮಾಡಿಕೊಂಡೆ ಎಂದು ಸೀನಯ್ಯ ತಿಳಿಸಿದರು.

1974ರಲ್ಲಿ ಸಣ್ಣ ಪ್ರಮಾಣದ ಕಾಮಗಾರಿ ಮೂಲಕ ಗುತ್ತಿಗೆ ವೃತ್ತಿ ಆರಂಭಿಸಿದೆ. ತರುವಾಯ ಹಂತ ಹಂತವಾಗಿ ಕೋಟ್ಯಾಂತರ ರೂಪಾಯಿ ಮೌಲ್ಯದ ರಸ್ತೆ ನಿರ್ಮಾಣ ಕಾಮಗಾರಿ ಮಾಡಿದೆ. ಅಫ್ಘಾನಿಸ್ತಾನದಲ್ಲಿ ಕಾಬೂಲ್‌ನಿಂದ ಕಂದಹಾರ್ ತನಕ ರಸ್ತೆ ನಿರ್ಮಿಸಿದೆ ಎಂದು ಸೀನಯ್ಯ ಹೇಳಿದರು.

ಅಫ್ಘಾನಿಸ್ತಾನದ ಪಾರ್ಲಿಮೆಂಟ್ ಹಾಗೂ ಭಾರತದ ರಾಯಭಾರ ಕಚೇರಿ ನಿರ್ಮಾಣ ಮಾಡುವ ಕೆಲಸ ನನಗೆ ದೊರೆಯಿತು. ನಿರ್ಮಾಣಕ್ಕೆ ಬೇಕಾದ ಪರಿಕರಗಳನ್ನು ಭಾರತದಿಂದ ಏರ್ ಲಿಫ್ಟ್ ಮಾಡಿಕೊಂಡು ಅಲ್ಲಿ ಕಾಮಗಾರಿ ಆರಂಭಿಸಿದೆ ಹಲವು ಸವಾಲುಗಳನ್ನು ಎದುರಿಸಿ ಅಫ್ಘಾನಿಸ್ತಾನದಲ್ಲಿ ಪಾರ್ಲಿಮೆಂಟ್ ಹಾಗೂ ಭಾರತದ ರಾಯಭಾರ ಕಚೇರಿ ನಿರ್ಮಾಣ ಮಾಡಿದೆ ಎಂದು ಹೇಳಿದರು.

ನಾವು ಮಾಡುವ ಕೆಲಸ ನೆನಪಿನಲ್ಲಿ ಉಳಿಯಲಿ ಎಂಬ ದೃಷ್ಟಿಯಿಂದ ಲಾಭ ನಿರೀಕ್ಷೆ ಮಾಡದೆ ಅಫ್ಘಾನಿಸ್ತಾನದಲ್ಲಿ ಪಾರ್ಲಿಮೆಂಟ್ ಹಾಗೂ ಭಾರತದ ರಾಯಭಾರ ಕಚೇರಿ ನಿರ್ಮಾಣ ಮಾಡಿದೆ ಎಂದು ಸೀನಯ್ಯ ವಿವರಿಸಿದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ನಾಗರಾಜ್ ವಿ.ಭೈರಿ, ಕಾರ್ಯದರ್ಶಿ ಕೆ.ಎಸ್. ಬಾಲಾಜಿ, ಬಿಲ್ಡ್ ಟೆಕ್ 23ರ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಹೆಚ್.ಎಸ್.ದೀಪಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

14 ನಿಮಿಷಗಳಲ್ಲಿ 'ವಂದೇ ಭಾರತ್' ಸ್ವಚ್ಛತೆ ಪವಾಡ

ಮೈಸೂರು, ಸೆ.30(ಬಿಎಲ್‌ಯು)– ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ನಾಳೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಕೇವಲ 14 ನಿಮಿಷದಲ್ಲಿ ಸ್ವಚ್ಛಗೊಳಿಸುವ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಳೆ ಮಧ್ಯಾಹ್ನ 12 ಗಂಟೆಗೆ ಚಾಲನೆಗೊಳ್ಳುವ ಈ ಯೋಜನೆಯನ್ನು 14 ನಿಮಿಷಗಳ ಪವಾಡ ಎಂಬ ಶೀರ್ಷಿಕೆಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

ಭಾರತೀಯ ರೈಲ್ವೆಯ ದಕ್ಷತೆ, ಶುಚಿತ್ವದ ಸಾಕ್ಷಿಯಾಗಿ ಕೆಲವೇ ನಿಮಿಷದಲ್ಲಿ ಇಡೀ ವಂದೇ ಭಾರತ್ ರೈಲನ್ನು ಸಮಗ್ರವಾಗಿ ಸ್ವಚ್ಛಗೊಳಿಸಲಾಗುತ್ತಿದೆ. ಹಲವು ರೀತಿಯ ಉಪಕರಣ ಹಾಗೂ ಸಲಕರಣೆಗಳನ್ನು ಬಳಸಿಕೊಂಡು ಸಿಬ್ಬಂದಿ ಶುಚಿಗೊಳಿಸಲಿದ್ದಾರೆ.

ಪರೀಕ್ಷೆಗೆಂದು ನೀಡಿದ ಚಿನ್ನದೊಂದಿಗೆ ಯುವಕ ನಾಪತ್ತೆ

ಮೈಸೂರು, ಸೆ.30–ಮೈಸೂರಿನ ಗೋಲ್ಡ್ ಕಂಪನಿ ಚಿನ್ನದ ಅಸಲಿಯತ್ತನ್ನು ಪರೀಕ್ಷಿಸಲು ನೀಡಿದ 1281.530 ಗ್ರಾಂ ಚಿನ್ನದ ಗಟ್ಟಿಯೊಂದಿಗೆ ಯುವಕ ಪರಾರಿಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಗಾಯಿತ್ರಿಪುರಂ ನಿವಾಸಿ ನವೀನ್(29) ಆರೋಪಕ್ಕೆಗುರಿಯಾದವನಾಗಿದ್ದು, ಎಸ್‌ಡಿಜೆ ಗೋಲ್ಡ್ ಕಂಪನಿ ಮಾಲೀಕ ಸೌಂದರ ರಾಜ್ (40) ಚಿನ್ನ ಕಳೆದುಕೊಂಡವರು.

ವಿವರ: ಎಸ್‌ಡಿಜೆ ಗೋಲ್ಡ್ ಕಂಪನಿ ಮಾಲೀಕರು ತಮಗೆ ಗ್ರಾಹಕರು ಮಾರಾಟ ಮಾಡಿದ ಚಿನ್ನವನ್ನು ಪರೀಕ್ಷಿಸಲು ನೌಕರರನ್ನು ನೇಮಕ ಮಾಡಿಕೊಂಡಿದ್ದು, ಇವರು ಸೆ.24ರಂದು ಮಧ್ಯಾಹ್ನ 981.530 ಗ್ರಾಂ ಚಿನ್ನದ ಗಟ್ಟಿಯನ್ನು ಪರೀಕ್ಷಿಸಲು ಹಾಗೂ 300 ಗ್ರಾಂ ಚಿನ್ನದ ಗಟ್ಟಿಯನ್ನು ಚಿನ್ನಾಭರಣ ಮಾಡಿಸಿಕೊಳ್ಳಲು ಆರೋಪಿ ನವೀನ್‌ಗೆ ತಮ್ಮ ಕಂಪನಿ ನೌಕರರಾದ ನಿಖಿಲ್ ಮತ್ತು ಕೃತಿಕ್ ಮೂಲಕ ಕಳುಹಿಸಿದ್ದಾರೆ.

ಈ ನೌಕರರಿಂದ ಚಿನ್ನ ಪಡೆದ ನವೀನ್, ನಂತರ ಸ್ವಿಚ್ ಆಫ್ ಮಾಡಿಕೊಂಡು ಚಿನ್ನದೊಂದಿಗೆ ಪರಾರಿಯಾಗಿದ್ದಾನೆ ಎಂದು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಏಷ್ಯನ್ ಗೇಮ್ 2023: ಭಾರತಕ್ಕೆ ಡಬಲ್ ಧಮಾಕ; 10,000 ಮೀಟರ್ ಓಟದಲ್ಲಿ ಬೆಳ್ಳಿ, ಕಂಚು

ಹ್ಯಾಂಗ್‌ಝೌ, ಸೆ.30– ಭಾರತದ ಅಥ್ಲೀಟ್‌ಗಳಾದ ಕಾರ್ತಿಕ್ ಕುಮಾರ್ ಮತ್ತು ಗುಲ್ವೀರ್ ಸಿಂಗ್ ಏಷ್ಯನ್ ಗೇಮ್ಸ್‌ನಲ್ಲಿ ಭಾರತಕ್ಕೆ ಪದಕಗಳನ್ನು ಗೆದ್ದಿದ್ದಾರೆ. ಶನಿವಾರ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಗೇಮ್ಸ್‌ನ ಪುರುಷರ 10000 ಮೀಟರ್ಸ್ ಓಟದಲ್ಲಿ ಓಟಗಾರರಾದ ಕಾರ್ತಿಕ್ ಕುಮಾರ್ ಮತ್ತು ಗುಲ್ವೀರ್ ಸಿಂಗ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದರು.

ಕಾರ್ತಿಕ್ 28:15.38 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆದ್ದರೆ, ಗುಲ್ವೀರ್ 28:17.21 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಪಡೆದರು. ಇಬ್ಬರೂ ಭಾರತೀಯರು ಅಂತಿಮ 100 ಮೀಟರ್‌ನಲ್ಲಿ ಪದಕಕ್ಕಾಗಿ ಪೈಪೋಟಿಯಲ್ಲಿದ್ದಾಗ ಆಟಗಾರರು ಪರಸ್ಪರ ಡಿಕ್ಕಿ ಹೊಡೆದು ಬಿದ್ದರು. ಬಹ್ರೇನ್‌ನ ಬಿರ್ಹಾನು ಯಮತಾವ್ ಬಲೆವ್ 28:13.62 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದರು.

ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಭಾರತೀಯ ಕ್ರೀಡಾಪಟುಗಳನ್ನು ಅಭಿನಂದಿಸಿದ್ದಾರೆ. ಕ್ರೀಡಾಪಟುಗಳನ್ನು ಶ್ಲಾಘಿಸಿ ಟ್ವೀಟ್ ಮಾಡಿದ್ದಾರೆ.

ಭಾರತದ ಪದಕ ಬೇಟೆ: ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾರತ ಇಲ್ಲಿಯವರೆಗೂ 10 ಚಿನ್ನ, 14 ಬೆಳ್ಳಿ ಮತ್ತು 14 ಕಂಚಿನ ಪದಕದೊಂದಿಗೆ ಒಟ್ಟಾರೆ 38 ಪದಕಗಳನ್ನು ಗೆದ್ದಿದೆ.

ಕಾಶ್ಮೀರದ ಕುಪ್ವಾರದಲ್ಲಿ ಗಡಿ ನುಸುಳುವಿಕೆ ಯತ್ನ ವಿಫಲಗೊಳಿಸಿದ ಸೇನೆ; ಇಬ್ಬರು ಉಗ್ರರ ಹತ್ಯೆ

ಶ್ರೀನಗರ, ಸೆ.30– ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ ಶನಿವಾರ ಭದ್ರತಾ ಪಡೆಗಳು ಇಬ್ಬರು ಉಗ್ರರನ್ನು ಹೊಡೆದುರುಳಿಸುವ ಮೂಲಕ ಒಳನುಸುಳುವಿಕೆ ಯತ್ನವನ್ನು ವಿಫಲಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಕಾಶ್ಮೀರ ಜಿಲ್ಲೆಯ ಮಚಿಲ್ ಸೆಕ್ಟರ್‌ನ ಕುಮ್ಕಾಡಿ ಪ್ರದೇಶದಲ್ಲಿ ಉಗ್ರರ ಒಳನುಸುಳುವಿಕೆ ಯತ್ನವನ್ನು ವಿಫಲಗೊಳಿಸಲಾಗಿದೆ ಕುಪ್ವಾರ ಪೊಲೀಸರು ನೀಡಿದ ಗುಪ್ತಚರ ಮಾಹಿತಿಯ ಆಧಾರದ ಮೇಲೆ, ಮಚಲ್ ಸೆಕ್ಟರ್‌ನ ಕುಮ್ಕಾಡಿ ಪ್ರದೇಶದಲ್ಲಿ ಸೇನೆ ಮತ್ತು ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇದುವರೆಗೆ ಒಳನುಸುಳುತ್ತಿದ್ದ ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ ಎಂದು ಕುಪ್ವಾರ ಪೊಲೀಸರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಎರಡು ಎಕೆ ರೈಫಲ್‌ಗಳು, ನಾಲ್ಕು ಎಕೆ ಮ್ಯಾಗಜೀನ್‌ಗಳು, ಒಂದು ಪಾಕಿಸ್ತಾನಿ ಪಿಸ್ತೂಲ್, ಒಂದು ಪೌಚ್ ಮತ್ತು 2,100 ರೂಪಾಯಿ ಪಾಕಿಸ್ತಾನದ ಕರೆನ್ಸಿಯನ್ನು ಎನ್‌ಕೌಂಟರ್ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

2000 ರೂ. ನೋಟುಗಳ ವಿನಿಮಯ ಅವಧಿ ಅ.7ರವರೆಗೆ ವಿಸ್ತರಿಸಿದ ಆರ್‌ಬಿಐ

ನವದೆಹಲಿ, ಸೆ.30– ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) 2000 ರೂಪಾಯಿ ಮುಖಬೆಲೆಯ ನೋಟುಗಳ ವಿನಿಮಯ ಅವಧಿಯನ್ನು ಒಂದು ವಾರಗಳ ಕಾಲ ವಿಸ್ತರಿಸಿದೆ.

2000 ರೂಪಾಯಿ ನೋಟುಗಳ ಬದಲಾವಣೆಗೆ ಇಂದು ಕೊನೆಯ ದಿನವಾಗಿತ್ತು. 2000 ರೂ. ನೋಟುಗಳನ್ನು ಹಿಂಪಡೆಯುವ ಪ್ರಕ್ರಿಯೆಗೆ ನಿರ್ದಿಷ್ಟಪಡಿಸಿದ ಅವಧಿಯು ಅಂತ್ಯಗೊಂಡಿರುವುದರಿಂದ ಮತ್ತು ಪರಿಶೀಲನೆಯ ಆಧಾರದ ಮೇಲೆ, 2,000 ರೂಪಾಯಿಗಳ ಬ್ಯಾಂಕ್ ನೋಟುಗಳ ಠೇವಣಿ/ವಿನಿಮಯಕ್ಕಾಗಿ ನೀಡಿದ್ದ ಗಡುವನ್ನು ಅಕ್ಟೋಬರ್ 07, 2023ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಮೇ 19ರಿಂದ ಸಾರ್ವಜನಿಕರು 3.42 ಲಕ್ಷ ಕೋಟಿ ರೂ. 2,000 ನೋಟುಗಳನ್ನು ಹಿಂದಿರುಗಿಸಿದ್ದಾರೆ ಎಂದು ಆರ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಈ ನೋಟುಗಳನ್ನು ಸೆಪ್ಟೆಂಬರ್ 29ರವರೆಗೆ ಬ್ಯಾಂಕ್ ಶಾಖೆಗಳಲ್ಲಿ ಠೇವಣಿ ಮಾಡಲಾಗಿದೆ ಅಥವಾ ವಿನಿಮಯ ಮಾಡಿಕೊಳ್ಳಲಾಗಿದೆ ಮತ್ತು ಈ ವರ್ಷದ ಮೇ 19ರವರೆಗೆ ಚಲಾವಣೆಯಲ್ಲಿರುವ ಬಾಕಿ ಉಳಿದಿರುವ ಕರೆನ್ಸಿಯು ಶೇ.96ರಷ್ಟು ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಹೇಳಿದೆ.

2,000 ರೂ. ನೋಟುಗಳು ಅಕ್ಟೋಬರ್ 7ರ ನಂತರವೂ ಕಾನೂನುಬದ್ಧವಾಗಿ ಮುಂದುವರಿಯುತ್ತವೆ. ಆದರೆ ಆರ್‌ಬಿಐ ಕಚೇರಿಗಳಲ್ಲಿ ಮಾತ್ರ ಅದನ್ನು ವಿನಿಮಯ ಮಾಡಿಕೊಳ್ಳಬಹುದು ಎಂದು ಕೇಂದ್ರ ಬ್ಯಾಂಕ್ ತಿಳಿಸಿದೆ.

ಅಕ್ಟೋಬರ್‌ನಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತಾಪಮಾನ

ನವದೆಹಲಿ, ಸೆ.30– ದೇಶದ ಬಹುತೇಕ ಭಾಗಗಳಲ್ಲಿ ಅಕ್ಟೋಬರ್‌ನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನ ಮತ್ತು ಸಾಮಾನ್ಯಕ್ಕಿಂತ ಹೆಚ್ಚು ಕನಿಷ್ಠ ತಾಪಮಾನ ದಾಖಲಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ(IMD) ಶನಿವಾರ ತಿಳಿಸಿದೆ. ತಮಿಳುನಾಡು, ಕರಾವಳಿ ಆಂಧ್ರಪ್ರದೇಶ, ರಾಯಲಸೀಮಾ, ಕೇರಳ ಮತ್ತು ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಮಳೆ ತರುವ ಈಶಾನ್ಯ ಮಾನ್ಸೂನ್ ಸಾಮಾನ್ಯವಾಗಿರುತ್ತದೆ ಎಂದು ಐಎಂಡಿ ಹೇಳಿದೆ.

ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕದ ಸಂಸದರು ಪ್ರತಿಭಟನೆ ಮಾಡಬೇಕು

ಯುವ ಬ್ರಿಗೇಡ್ ಮುಖ್ಯಸ್ಥ ಚಕ್ರವರ್ತಿ ಸೂಲಿಬೆಲೆ ಆಗ್ರಹ



ನಂಜನಗೂಡು, ಸೆ.30(ಬಿಎಲ್‌ಯು)– ಇಂಡಿಯಾ ಮೈತ್ರಿಕೂಟ ಗಟ್ಟಿ ಮಾಡಿಕೊಳ್ಳಲು ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕರ್ನಾಟಕದ ಎಲ್ಲಾ ಸಂಸದರು ಪ್ರತಿಭಟನೆ ಮಾಡಬೇಕು ಎಂದು ಯುವ ಬ್ರಿಗೇಡ್ ಮುಖ್ಯಸ್ಥ ಚಕ್ರವರ್ತಿ ಸೂಲಿಬೆಲೆ ಆಗ್ರಹಿಸಿದ್ದಾರೆ.

ಮೈಸೂರಿನ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಯಾರನ್ನು ಕೇಳಿ ತಮಿಳುನಾಡಿಗೆ ನೀರು ಬಿಟ್ಟಿದ್ದೀರಾ ಎಂದು ರಾಜ್ಯದ ಸಂಸದರು, ರಾಜ್ಯ ಸರ್ಕಾರವನ್ನು ಪ್ರಶ್ನೆ ಮಾಡಬೇಕು. ಈ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಸಂಸದರೆಲ್ಲರೂ ಪ್ರತಿಭಟನೆಗೆ ನಿಂತುಕೊಳ್ಳಬೇಕು. ಆಗಲಾದರೂ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬಹುದು ಎಂದು ಹೇಳಿದರು.

ತಮಿಳುನಾಡು ಕೇಳುವ ಮೊದಲೇ ಸಿದ್ದರಾಮಯ್ಯ ರಾತ್ರೋ ರಾತ್ರಿ ಕಾವೇರಿ ನೀರು ಹರಿಸಿದ್ದಾರೆ. ಇದು ಬಹಳ ಕೆಟ್ಟ ಸಂಗತಿ ಎಂದು ಚಕ್ರವರ್ತಿ ಸೂಲಿಬೆಲೆ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಇಂಡಿಯಾ ಮೈತ್ರಿಕೂಟವನ್ನು ಗಟ್ಟಿಗೊಳಿಸಿಕೊಳ್ಳಲು ಕನ್ನಡಿಗರ ಹೊಟ್ಟೆ ಮೇಲೆ ಹೊಡೆದು ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿದ್ದಾರೆ. ಇಂಡಿಯಾ ಮೈತ್ರಿಕೂಟಕ್ಕೆ ಸ್ಟಾಲಿನ್ ಬೇಕು ಎನ್ನುವ ಕಾರಣಕ್ಕೆ ರಾಹುಲ್ ಗಾಂಧಿ ಸೂಚನೆ ಮೇರೆಗೆ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟು ಕನ್ನಡಿಗರಿಗೆ ದ್ರೋಹ ಬಗೆದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ತಮಿಳುನಾಡಿಗೆ ನೀರು ಬಿಡಲಿಲ್ಲ ಅಂದರೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶ ಮಾಡಬಹುದಿತ್ತು. ಆದರೆ ಇವರು ನೀರು ಬಿಡುತ್ತಿರುವ ಕಾರಣ ಪ್ರಧಾನಮಂತ್ರಿ ಮಧ್ಯ ಪ್ರವೇಶ ಮಾಡುವ ಪ್ರಮೇಯವೇ ಇಲ್ಲ ಎಂದು ಚಕ್ರವರ್ತಿ ಸೂಲಿಬೆಲೆ ಸ್ಪಷ್ಟಪಡಿಸಿದರು.

ಇವರಿಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ. ಹಾಗೊಂದು ವೇಳೆ ಮಾತಿಗೆ ಬದ್ಧವಾಗಿದ್ದರೆ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳುತ್ತಿದ್ದರು. ಚುನಾವಣೆಗೆ ಮುನ್ನ ಮೇಕೆದಾಟು ಯೋಜನೆ ಬಗ್ಗೆ ಮಾತನಾಡುತ್ತಿದ್ದ ಕಾಂಗ್ರೆಸಿಗರು ಈಗ ಚಕಾರ ಎತ್ತುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗೆ ಹಣ ಕೊಟ್ಟ ಕಾರಣ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಹಣದ ಕೊರತೆ ಉಂಟಾಗಿದೆ ಈ ಮೂಲಕ ಕರ್ನಾಟಕ ರಾಜ್ಯ ಯಾವುದೇ ಅಭಿವೃದ್ಧಿ ಕಾಣದೆ ಸೊರಗಿದೆ. ಈಗ ಮಳೆ ಬಾರದೆ ಬರಗಾಲವಿದೆ ನಿಜ. ಆದರೆ ಸರ್ಕಾರದ ಆರ್ಥಿಕ ಅವ್ಯವಸ್ಥೆಯಿಂದ ಮಳೆ ಬಂದರೂ ಬರಗಾಲದ ಪರಿಸ್ಥಿತಿ ಎದುರಾಗುತ್ತದೆ. ಇವರ ಸರ್ಕಾರದ ಐದು ವರ್ಷದ ಅವಧಿಯಲ್ಲಿ ಭಿಕ್ಷೆ ಬೇಡುವ ಪರಿಸ್ಥಿತಿಗೆ ತಂದಿಡಲಿದ್ದಾರೆ ಎಂದು ಚಕ್ರವರ್ತಿ ಸೂಲಿಬೆಲೆ ಕಿಡಿಕಾರಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 1-10-2023

ಬಾಪೂ ಚಿಂತನ ಅಮರ



ಅಕ್ಟೋಬರ್ 2, ಗಾಂಧಿ ಜಯಂತಿ. ತನ್ನಿಮಿತ್ತ ಈ ವಿಶೇಷ ಲೇಖನ

ಸುಮ ಚಂದ್ರಶೇಖರ್
ಮೊ.9880060354

ವ್ಯಕ್ತಿತ್ವದ ಅಳತೆಯಲ್ಲಿ ಗಾಂಧಿ ಎಂದರೆ ಮೇರುಪರ್ವತ. ಅವರ ಪ್ರತಿಯೊಂದು ಹೆಜ್ಜೆಯಲ್ಲಿಯೂ ಆದರ್ಶದ ದಿಟ್ಟ ನಡೆ, ಸತ್ಯವೇ ದೇವರೆನ್ನುವ ಸ್ಪಷ್ಟ ನುಡಿ. ಸರಳವಾದ ಬದುಕಿಗೆ ಅವರಿಗೆ ಅವರೇ ಸಾಟಿ. ಕೇವಲ ಭಾರತ ಮಾತ್ರ ಗಾಂಧೀಜಿಯ ನಡೆನುಡಿಯಿಂದ ಪ್ರಭಾವಿತವಾಗಲಿಲ್ಲ. ಸಮಗ್ರ ವಿಶ್ವಕ್ಕೆ ಅವರು ಅಂದಿಗೂ ಇಂದಿಗೂ ಹಾಕಿಕೊಟ್ಟ ಉತ್ಕರ್ಷದ ಮಾದರಿಯನ್ನು ಕೊಂಡಾಡುತ್ತಿರುವ ಅಭಿಮಾನಿಗಳು ಸಹಸ್ರ ಸಹಸ್ರ.

ವಿಶ್ವದ ಸಾವಿರ ಸಾವಿರ ಜನ ಗಾಂಧೀಜಿಯವರಿಂದ ಪ್ರಭಾವಿತರಾಗಿ ಜಗತ್ತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಲು ಪ್ರೇರೇಪಣೆ ಹೊಂದಿದರು. ಅದರಲ್ಲೂ ಹತ್ತು ಮಂದಿ ವಿಶ್ವ ಪ್ರಸಿದ್ಧರು ತಮ್ಮ ಮಹತ್ತ್ವದ ಸಾಧನೆಗೆ ಬೆಳಕು ಮೂಡಿಸಿದವರು ಗಾಂಧಿ ಎಂದು ಒಪ್ಪಿಕೊಂಡರು. ವಿನ್‌ಸ್ಟನ್ ಚರ್ಚಿಲ್, ಅಲ್ಬರ್ಟ್ ಐನ್‌ಸ್ಟೈನ್ ಹೀಗೆ ಅವರನ್ನು ಅತ್ಯಂತ ಗೌರವದಿಂದ ನೋಡಿಕೊಂಡವರು ಅನೇಕರು. ಸಮಾನತೆ ಮತ್ತು ಉತ್ತಮ ಜೀವನ ಪರಿಸ್ಥಿತಿಯ ಬದುಕಿಗೆ ಗಾಂಧೀಜಿ ತೋರಿದ ಮಾರ್ಗಗಳು ವಿಶ್ವದ ಅರ್ಥಶಾಸ್ತ್ರಜ್ಞರನ್ನು ಅಚ್ಚರಿಗೊಳಿಸಿದೆ. ಕೆಟ್ಟ ಆರ್ಥಿಕ ಸ್ಥಿತಿಯ ಪರಿಹಾರಕ್ಕೆ ಸೈನ್ಯ ರಹಿತವಾದ ದೇಶ ಸೃಷ್ಟಿಯೊಂದೇ ಮಾರ್ಗ. ಎಲ್ಲ ದೇಶಗಳಲ್ಲಿ ನೆರೆರಾಷ್ಟ್ರದ ದಾಳಿಯ ಭಯದಿಂದ ಅಪಾರ ಸೇನೆಯನ್ನು ಸಾಕಲಾಗುತ್ತಿದೆ. ಇವರಿಗಾಗಿ, ಮದ್ದುಗುಂಡುಗಳಿಗಾಗಿ ಮೀಸಲಿಡುವ ಆಯವ್ಯಯದ ಪಾಲು ಅಭಿವೃದ್ಧಿಗೆ ಬಳಕೆಯಾದರೆ ಬಹು ಸುಂದರವಾದ ಶ್ರೀಮಂತ ದೇಶವನ್ನು ಕಟ್ಟಬಹುದು ಎನ್ನುವ ಅವರ ಮಾತುಗಳನ್ನು ಅಮೆರಿಕವೂ ಸೇರಿದಂತೆ ಹಲವು ದೇಶಗಳ ಹಣಕಾಸು ತಜ್ಞರು ಉಲ್ಲೇಖಿಸಿದ್ದಾರೆ.

ಅಹಿಂಸಾತ್ಮಕ ಚಳವಳಿಯ ಮೂಲಕ ಗಾಂಧೀಜಿ ಬೀರಿದ ಪ್ರಭಾವದ ಪರಿಣಾಮ ಹಲವು ಮಂದಿ ನಾಯಕರನ್ನು ಸೃಷ್ಟಿಸಿತು. ಟಿಬೆಟಿನ ದಲೈಲಾಮಾ, ಪೋಲೆಂಡಿನ ಸೀಜರ್ ಚವೆಜ್, ಬರ್ಮಾದ ಆಂಗ್ ಸ್ಯಾನ್ ಸೂಕಿ, ದಕ್ಷಿಣ ಆಫ್ರಿಕದ ಡೆಸ್ಮಂಡ್ ಟುಟು ಇವರೆಲ್ಲರೂ ಅಹಿಂಸಾ ತತ್ತ್ವದ ಮಾರ್ಗದಲ್ಲಿ ನಡೆದು ಯಶಸ್ಸು ಕಂಡರು. ವಿಶ್ವದ ಹಲವು ರಾಷ್ಟ್ರಗಳು ಮೂರನೆಯ ಮಹಾಯುದ್ಧದಿಂದ ದೂರವುಳಿದಿದ್ದರೆ ಅದಕ್ಕೆ ಕಾರಣ ಗಾಂಧೀಜಿಯ ಸಂದೇಶಗಳ ಅಂತಃಸತ್ತ್ವವೆಂದೇ ಪರಿಗಣಿಸಲಾಗಿದೆ. ದಲೈಲಾಮಾ ತನ್ನನ್ನು ಗಾಂಧಿ ಅನುಯಾಯಿ ಎಂದು ಹೇಳಿಕೊಂಡಿದ್ದಾರೆ. ಮಾನವ ಸ್ವಭಾವದ ಆಳವಾದ ತಿಳುವಳಿಕೆಯಿರುವ ಮಹಾನ್ ವ್ಯಕ್ತಿ ಅವರೆಂದು ಕೊಂಡಾಡಿದ್ದಾರೆ.

ಭಾರತದ ವೈಸರಾಯ್ ಆಗಿದ್ದ ಲಾರ್ಡ್ ಚೆಲ್ಮ್ಸ್‌ಫೋರ್ಡ್ ಮೊದಲ ವಿಶ್ವ ಸಮರದ ಕಾಲದಲ್ಲಿ ಗಾಂಧೀಜಿಯವರೊಂದಿಗೆ ತಮ್ಮ ಸೇನೆಯನ್ನು ಸೇರಿಕೊಳ್ಳಲು ಆಮಂತ್ರಿಸಿದಾಗ ಗಾಂಧೀಜಿ, 'ಒಳ್ಳೆಯದು, ಆದರೆ ನಾನು ಒಬ್ಬ ವ್ಯಕ್ತಿಯನ್ನು, ವೈರಿಯನ್ನು , ಸ್ನೇಹಿತನನ್ನು ಕೊಲ್ಲುವುದಿಲ್ಲ. ಈ ಮಾತಿಗೆ ಒಪ್ಪುವುದಾದರೆ ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ' ಎಂದರಂತೆ. ಶಸ್ತ್ರರಹಿತವಾದ ಸಾಮಾಜಿಕ ಕ್ರಾಂತಿಯ ಕನಸು ಕಂಡಿದ್ದ ಅವರು ರಾಷ್ಟ್ರಗಳು ತಾವು ಗಳಿಸಿದುದಕ್ಕಿಂತ ಹೆಚ್ಚು ಖರ್ಚು ಮಾಡಬಾರದು, ಜನರು ಅಗತ್ಯಕ್ಕಿಂತ ಹೆಚ್ಚು ಬಳಸಬಾರದು' ಎಂಬ ಮಾತನ್ನು ಹೇಳಿದರು. ಯುರೋಪಿನ ಆದಾಯ ಹದಗೆಟ್ಟಾಗ ಈ ಮಾತನ್ನು ಗಮನಿಸಿದ ಅರ್ಥಶಾಸ್ತ್ರಜ್ಞರು ಆದಾಯ ಮತ್ತು ಆಸ್ತಿಗಳ ವಿಂಗಡನೆ ಮಾಡಿ ಬಡವರು ಹಾಗೂ ಸಿರಿವಂತರ ನಡುವಣ ಅಸಮಾನತೆಯನ್ನು ಪರಿಹರಿಸುವ ಮೂಲಕ ಈ ಬಿಕ್ಕಟ್ಟಿನ ಪರಿಹಾರ ಪಡೆದಿರುವುದನ್ನು ಪ್ರಾಂಜಲವಾಗಿ ಒಪ್ಪಿಕೊಂಡರು.

ದಕ್ಷಿಣ ಆಫ್ರಿಕದಲ್ಲಿ ಕರಾಳವಾಗಿದ್ದ ವರ್ಣಭೇದ ನೀತಿಯ ಕಾರಣದಿಂದಲೇ ಗಾಂಧೀಜಿ ಭಾರತದ ಸ್ವಾತಂತ್ರ್ಯ ಚಳವಳಿಗೆ ತನ್ನದೇ ಹಾದಿಯನ್ನು ರೂಪಿಸಿದರು. ಆದರೆ ಅಲ್ಲಿದ್ದ ಈ ಅಸಮಾನತೆಯ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ಸುದೀರ್ಘ ಕಾಲ ನಡೆಸಿದ ನೆಲ್ಸನ್ ಮಂಡೇಲಾ ಅವರಿಗೆ ಶಕ್ತಿ ತುಂಬಿದ್ದು ಗಾಂಧೀಜಿಯ ಹೋರಾಟದ ಸಾಮರ್ಥ್ಯ. ವರ್ಣಭೇದ ನೀತಿಯಷ್ಟೇ ಅಂತ್ಯಗೊಂಡಿದಲ್ಲ. ಅಲ್ಲಿ ಬ್ರಿಟಿಷ್ ಅಧಿಪತ್ಯವೂ ಇದರಿಂದ ಕೊನೆಗೊಂಡಿತು. ದಕ್ಷಿಣ ಆಫ್ರಿಕಾದ ರೂಪಾಂತರದಲ್ಲಿ ಗಾಂಧೀಜಿಯವರ ಆಲೋಚನೆಗಳು ಪ್ರಮುಖ ಪಾತ್ರ ವಹಿಸಿವೆ. ಅವರು ನನ್ನ ಶ್ರೇಷ್ಠ ಶಿಕ್ಷಕನೂ ಹೌದು. ನನ್ನ ಗೆಲುವಿಗೆ ಅವರ ಪಾಠ ನೆರವಾಯಿತು ಎಂದು ಮಂಡೇಲಾ ಒಪ್ಪಿಕೊಂಡಿದ್ದರು.

ಮಾರ್ಟಿನ್ ಲೂಥರ್ ಕಿಂಗ್ ಅಮೆರಿಕದ ನಾಗರಿಕ ಹಕ್ಕುಗಳ ನಾಯಕನಾಗಿದ್ದವರು. ಗಾಂಧಿ ನೀತಿಯನ್ನು ಅಳವಡಿಸಿಕೊಂಡು ಇನ್ನೊಬ್ಬ ಗಾಂಧಿಯೆಂದೇ ಖ್ಯಾತರಾದವರು. ಅಮೆರಿಕದಲ್ಲಿ ಅವರು ನಡೆಸಿದ ನಾಗರಿಕ ಹಕ್ಕುಗಳ ಹೋರಾಟಕ್ಕೆ ಲಕ್ಷಾಂತರ ಮಂದಿ ಆಫ್ರಿಕನ್ನರಿಗೆ ಗಾಂಧಿ ತೋರಿದ ಅಹಿಂಸಾ ಮಾರ್ಗವೇ ಶಕ್ತಿ ತುಂಬಿತು. ಕರಿಯರ ಜನಸಂಖ್ಯೆ ಗಮನಾರ್ಹವಾಗಿದ್ದರೂ ಅವರಿಗೆ ಅಮೆರಿಕದಲ್ಲಿ ಪೌರ ಹಕ್ಕುಗಳು ದೊರಕಿರಲಿಲ್ಲ. ಅಹಿಂಸಾತ್ಮಕ ಚಳವಳಿಯ ಪರಿಣಾಮವಾಗಿ ನೀಗ್ರೋಗಳಿಗೂ ಮತದಾನದ ಹಕ್ಕು, ಸಮಾನ ವಿದ್ಯಾಭ್ಯಾಸದ ಅವಕಾಶ ದೊರಕಲು ಸ್ಫೂರ್ತಿಯಾದುದು ಗಾಂಧಿ ಎಂಬ ಮಹಾತ್ಮ ಹಚ್ಚಿಟ್ಟ ಚಳವಳಿಯ ದಾರಿದೀಪ. ಸ್ವಯಂ ಗೌರವ ಮತ್ತು ಮಾನವ ಘನತೆಯ ಬೆಳವಣಿಗೆಗೆ ಕಾರಣವಾಗುವ ಅಹಿಂಸೆ ಮತ್ತು ಪ್ರೇಮಗಳು ಧೈರ್ಯವನ್ನು ಉಂಟುಮಾಡುತ್ತವೆ. ವಿಶ್ವದ ಪರಾಡಳಿತದ ಬೇರನ್ನು ಅಲುಗಾಡಿಸಿ ಇಡೀ ಜಗತ್ತನ್ನು ಆಳುವ ಶಕ್ತಿ ಇರುವುದು ಗಾಂಧಿಗೆ ಮಾತ್ರ ಎಂದು ಲೂಥರ್ ಕಿಂಗ್ ಹೇಳಿದ್ದಾರೆ.

ಗಾಂಧೀಜಿ ಇಂಗ್ಲೆಂಡಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿಗೆ ಹೋಗುವಾಗಲೂ ಅರ್ಧ ಪಂಚೆ, ಬರಿಮೈಯ ವೇಷದಲ್ಲೇ ಹೋಗಿದ್ದರು. ನನ್ನ ದೇಶದ ಕೋಟಿ ಕೋಟಿ ಜನರಿಗೆ ಮೈತುಂಬ ತೊಡಲು ಬಟ್ಟೆಗಳಿಲ್ಲದಿರುವಾಗ ನನಗೂ ಅದು ಬೇಡ ಎಂಬುದು ಅವರ ನಿರ್ಧಾರವಾಗಿತ್ತು ಇಂಗ್ಲೆಂಡಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಗಾಂಧೀಜಿಯನ್ನು ಅರೆಬೆತ್ತಲೆ ಫಕೀರ ಎಂಬ ಅವಹೇಳನೆಯ ಮಾತುಗಳಾಡಿದರು. ಆದರೆ ಮುಂದೆ ಅವರೇ ಗಾಂಧೀಜಿಯವರ ತತ್ತ್ವಾದರ್ಶಗಳಿಂದ ಪ್ರೇರಿತರಾದರು. ಸ್ವಯಂ ವಿನಾಶದಿಂದ ಪ್ರಪಂಚದ ಭವಿಷ್ಯವನ್ನು ನಾವು ಹೇಗೆ ಕಾಪಾಡಬಹುದೆಂಬುದನ್ನು ಗಾಂಧಿ ಚಿಂತನೆಗಳು ನಮಗೆ ಹೇಳುತ್ತವೆ. ಅವರು ಆಧ್ಯಾತ್ಮಿಕವಾಗಿ, ರಾಜಕೀಯವಾಗಿ ಸಾರ್ವಕಾಲಿಕ ಶ್ರೇಷ್ಠರ ಸಾಲಿಗೆ ಸೇರಿದ್ದಾರೆ ಎಂದು ಚರ್ಚಿಲ್ ಲಿಖಿತವಾಗಿ ಒಪ್ಪಿಕೊಂಡರು.


ಸಿಂಹಳ, ಸುಡಾನ್, ಲಿಬಿಯಾ, ಗ್ಯಾಂಬಿಯಾ, ವೆಸ್ಟ್ ಇಂಡೀಸ್ ಹೀಗೆ ಹಲವು ರಾಷ್ಟ್ರಗಳು ಪರಕೀಯರ ಆಡಳಿತದಿಂದ ಮುಕ್ತವಾಗಲು ಕಾರಣವಾದದ್ದು ಕೂಡ ಗಾಂಧೀಜಿಯವರ ಅಹಿಂಸಾತ್ಮಕ ಚಳವಳಿಯ ಮಾರ್ಗ ಎಂಬುದು ಇತಿಹಾಸವೇ ಒಪ್ಪಿಕೊಂಡ ಸತ್ಯ. ಹಿಂಸೆಯಿಲ್ಲದ ಬದುಕಿನ ಗುರಿಯನ್ನು ಇಡೀ ವಿಶ್ವಕ್ಕೆ ತೋರಿಸಿಕೊಟ್ಟ ಅವರು ಆ ದೇಶಗಳಲ್ಲಿ ಆರಾಧ್ಯ ಮೂರ್ತಿಯೆನಿಸಿಕೊಂಡಿದ್ದಾರೆ

ಹಣಕಾಸಿನ ತೊಂದರೆ, ಜನಸಂಖ್ಯೆ ಹೆಚ್ಚಳದ ಸಮಸ್ಯೆ, ನಾಯಕತ್ವದ ಬಿಕ್ಕಟ್ಟು, ಮಹಿಳಾ ಸ್ವಾತಂತ್ರ್ಯ, ಯುವ ಜನರ ಜೀವನಮಾರ್ಗ ಇದೆಲ್ಲದಕ್ಕೂ ಗಾಂಧೀಜಿ ಸೂಚಿಸಿದ ಪರಿಹಾರ ಮಾರ್ಗಗಳನ್ನು ವಿಶ್ವ ಬುದ್ಧಿಜೀವಿಗಳ ವರ್ಗವು ಮಾನ್ಯ ಮಾಡಿದೆ ರಾಬರ್ಟ್, ಫ್ರೀಡ್ಮನ್, ಆ್ಯಂಡ್ರೋ ಸಾಚ್ಸ್‌ರಂತಹ ಅರ್ಥಶಾಸ್ತ್ರಜ್ಞರು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಹಾರಕ್ಕೆ ಗಾಂಧೀಜಿ ಸೂಚಿಸಿದ ಮಾರ್ಗದ ಹೊರತು ಬೇರೆ ಪರಿಹಾರೋಪಾಯಗಳೇ ಇಲ್ಲ ಎಂದಿದ್ದಾರೆ. ಶಿಕ್ಷಣ ಸಬಲೀಕರಣ, ಸಂಪತ್ತಿನ ಸಮಾನ ಹಂಚಿಕೆಯೊಂದೇ ಬಡತನ ತೊಲಗಲು ನಮ್ಮ ಮುಂದಿರುವ ಮಾರ್ಗವೆಂಬುದು ಅವರ ಪ್ರತಿಪಾದನೆಯಾಗಿತ್ತು. ವಿಶ್ವದ ಅರ್ಧಕ್ಕಿಂತ ಹೆಚ್ಚು ಸಂಪತ್ತು ಕೆಲವೇ ಜನರ ಕೈಯಲ್ಲಿರುವುದೇ ಸಮಸ್ಯೆಗಳ ಸೃಷ್ಟಿಗೆ ಮೂಲವೆಂಬ ಗಾಂಧೀಜಿಯ ಮಾತನ್ನು ಆರ್ಥಿಕ ಪ್ರಪಂಚದ ಅನುಭವಿಗಳು ಸಮರ್ಥಿಸಿದ್ದಾರೆ.



> ಗಾಂಧೀಜಿ ಇಂಗ್ಲೆಂಡಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿಗೆ ಹೋಗುವಾಗಲೂ ಅರ್ಧ ಪಂಚೆ, ಬರಿಮೈಯ ವೇಷದಲ್ಲೇ ಹೋಗಿದ್ದರು. ನನ್ನ ದೇಶದ ಕೋಟಿ ಕೋಟಿ ಜನರಿಗೆ ಮೈತುಂಬ ತೊಡಲು ಬಟ್ಟೆಗಳಿಲ್ಲದಿರುವಾಗ ನನಗೂ ಅದು ಬೇಡ ಎಂಬುದು ಅವರ ನಿರ್ಧಾರವಾಗಿತ್ತು. ಇಂಗ್ಲೆಂಡಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಗಾಂಧೀಜಿಯನ್ನು ಅರೆಬೆತ್ತಲೆ ಫಕೀರ ಎಂಬ ಅವಹೇಳನೆಯ ಮಾತುಗಳಾಡಿದರು. ಆದರೆ ಮುಂದೆ ಅವರೇ ಗಾಂಧೀಜಿಯವರ ತತ್ತ್ವಾದರ್ಶಗಳಿಂದ ಪ್ರೇರಿತರಾದರು.

ವಾರಭವಿಷ್ಯ



1.10.2023 ರಿಂದ 7.10.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :- ರವಿ-ಕನ್ಯಾ, ಚಂದ್ರ-ಮೇಷ, ವೃಷಭ, ಮಿಥುನ, ಕುಜ-ಕನ್ಯಾ, ಬುಧ-ಸಿಂಹ, ಗುರು-ಮೇಷ, ಶುಕ್ರ-ಸಿಂಹ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಯಾವುದೂ ನೀವಂದುಕೊಂಡಂತೆ ಸಾಗದೆ ಜಿಗುಪ್ಸೆ ಕಾಡುವುದು. ಕಾಲ-ಕರ್ಮ-ಕಾರಣಗಳು ಕೂಡಿ ಬರುವವರೆಗೆ ಕಾಯಲೇಬೇಕು. ರಾಹು-ಕೇತುಗಳು ಅಶುಭ ಗೋಚರದಲ್ಲಿ ಇರುವ ಕಾರಣ ಕೌಟುಂಬಿಕ ತ್ರಾಸಗಳು ಕಾಡುತ್ತವೆ. ವಾರಮಧ್ಯಾನಂತರ ಉಚ್ಚ ಚಂದ್ರ ಮುಖದಲ್ಲಿ ಮಂದಹಾಸ ಮೂಡಿಸುವನು. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು.

ಶ್ರೀ ನೃಸಿಂಹ ಆರಾಧನೆ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿಮ್ಮ ರಾಶಿಯಲ್ಲಿ ಸಂಚರಿಸುವ ಉಚ್ಚ ಚಂದ್ರನಿಂದ ವಾರದ ಆರಂಭದಲ್ಲಿ ಆದಾಯ ಚೆನ್ನಾಗಿದೆ. ಹತ್ತಿ ವಸ್ತ್ರ ರೆಡಿಮೇಡ್ ಗಾರ್ಮೆಂಟ್ಸ್, ರೇಷ್ಮೆ, ಕ್ಷೀರಜನಿತ ವ್ಯಾಪಾರಗಳು ಭರಾಟೆಯಿಂದ ಸಾಗುವುದು. ಪ್ರೀತಿ-ಪ್ರೇಮ ವಿಷಯಗಳು ಶುಭಾಂತ್ಯವಾಗುವ ಸಾಧ್ಯತೆ ಇದೆ. ಸದ್ಯಕ್ಕೆ ಆಸ್ತಿ ಮಾರುವ ವಿಚಾರವನ್ನು ಸ್ವಲ್ಪ ಸಮಯ ಮುಂದೂಡಿ. ಆರೋಗ್ಯ ಕೆಡಬಹುದು. ವೈದ್ಯರ ಭೇಟಿ ಅನಿವಾರ್ಯವಾದೀತು.

ಶ್ರೀದೇವೀ ಸ್ತುತಿ. ಶುಭ ಸಂಖ್ಯೆ-3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಚಂದ್ರಗ್ರಹದ ಶುಭ ಸಂಚಾರದಿಂದ ಜನಸೇವಾ ಕೆಲಸಗಳಿಂದ ಗೌರವಾರ್ಜನೆ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರ ದೊರಕುವುದು. ಸಮಯೋಚಿತ ಮಾತಿನಿಂದ ಕಾರ್ಯ ಸಾಧನೆ. ಸ್ಥಿರತೆ ಇಲ್ಲದ ನಿರ್ಧಾರಗಳಿಂದ ಮಹತ್ವದ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಹಲವರಿಗೆ ವಿದೇಶ ಪ್ರಯಾಣದ ಯೋಗವಿದೆ. ಷೇರು ವ್ಯವಹಾರಗಳಲ್ಲಿ ಲಾಭವನ್ನು ನಿರೀಕ್ಷಿಸಬಹುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-5.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿ ಚಂದ್ರನ ಕೃಪೆಯಿಂದ ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಉನ್ನತ ವ್ಯಕ್ತಿಗಳ ಒಡನಾಟ ಉಂಟಾಗುವುದು. ಸರ್ಕಾರಿ ನೌಕರರಿಗೆ ವರ್ಗಾವಣೆಯ ಜೊತೆಗೆ ಉನ್ನತ ಪದವಿ ಹೊಂದುವ ಸಂಭವವಿದೆ. ಅಷ್ಟಮ ಶನಿಯಿಂದ ಪರಸ್ಥಳದಲ್ಲಿ ಪರದಾಟಗಳು ಉಂಟಾಗುವುದು. ಅಕಾಲ ಭೋಜನದಿಂದ ಗ್ಯಾಸ್ ಟ್ರಬಲ್ ಕಾಡುವುದು.

ಶ್ರೀ ಸಪ್ತಮಾತೃಕಾದೇವಿ ಸೇವೆ. ಶುಭ ಸಂಖ್ಯೆ-6.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)

ವಿವಿಧ ಮೂಲಗಳಿಂದ ಹಣ ದೊರೆತು ಪೂರ್ವ ನಿರ್ಧಾರಿತ ಯೋಜನೆಗಳಿಗೆ ಅನುಕೂಲವಾಗಲಿದೆ. ಸಜ್ಜನರ ಸಂಗ ಹೆಜ್ಜೇನು ಸವಿದಂತೆ ಎಂಬ ಗಾದೆಯಂತೆ ಹಿರಿಯರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಗುರು ಕೃಪೆಯಿಂದ ಹಳೆಯ ಸಾಲಗಳಿಂದ ಮುಕ್ತಿ ಹೊಂದುವಿರಿ. ಆರೋಗ್ಯದಲ್ಲಿಯೂ ಸುಧಾರಣೆಯನ್ನು ಕಾಣುವಿರಿ. ಅನಾಥರ ಸೇವೆಯಿಂದ ಧನ್ಯತಾಭಾವ.

ಶ್ರೀ ಸೂರ್ಯಸ್ತುತಿ. ಶುಭ ಸಂಖ್ಯೆ-1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಪ್ರಮುಖ ವ್ಯವಹಾರಗಳು ನಿಮ್ಮ ಯೋಜನೆಯಂತೆ ಸಾಗದೆ ಮನಸ್ಸಿಗೆ ಬೇಸರ. ಕೆಲವು ವಿಷಯಗಳಲ್ಲಿ ಸಂಬಂಧಿಕರೊಂದಿಗೆ ಜಟಾಪಟಿಗಳು ನಡೆಯಲು ಅಷ್ಟಮ ರಾಹು ಕಾರಣ. ಆರೋಗ್ಯದ ಕಡೆ ಸ್ವಲ್ಪ ಜಾಗೃತೆ ವಹಿಸಬೇಕು. ವಾರ ಮಧ್ಯೆ ಹಳೆಯ ಸ್ನೇಹಿತರ ಭೇಟಿಯಿಂದ ಪುಳಕಿತರಾಗುತ್ತೀರಾ. ಉದ್ಯೋಗಿಗಳಿಗೆ ಸ್ಥಾನ ಚಲನೆಯಾಗುವ ಸೂಚನೆಗಳಿವೆ. ಆಧ್ಯಾತ್ಮಿಕ ವಿಷಯಗಳತ್ತ ಮನಸ್ಸಾಗುವುದು.

ಶ್ರೀಮನ್ನಾರಾಯಣ ಪಾದಸೇವನ. ಶುಭ ಸಂಖ್ಯೆ-9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸಪ್ತಾಹದ ಹಾದಿಗೆ ಸಂದರ್ಭೋಚಿತವಾದ ಮಾತಿನಿಂದ ಕಾರ್ಯ ಸಾಧನೆ. ಬೃಹಸ್ಪತಿಯ ಕೃಪೆಯಿಂದ ಧನ-ಧಾನ್ಯ ಸಂಗ್ರಹ. ಸಾರ್ವಜನಿಕ ಕ್ಷೇತ್ರದಲ್ಲಿ ಗೌರವ ಪ್ರಾಪ್ತಿ. ಹಲವರಿಗೆ ಪುತ್ರ ಸಂತಾನದ ಸಂತಸ. ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ. ಧಾರ್ಮಿಕ ಉತ್ತರಾದಿಗಳಲ್ಲಿ ಭಾಗಿ. ದಾನ, ಧರ್ಮದಿಂದ ಮನಸ್ಸಿಗೆ ಶಾಂತಿ. ಕೆಲವರಿಗೆ ಸಾಗರೋಲ್ಲಂಘನ ಯೋಗ.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಮನೆಗೆ ದೂರದ ಬಂಧುಗಳ ಆಗಮನ ಸಂತಸ ತರುತ್ತದೆ. ಚಂದ್ರಗ್ರಹ ಹಾಗೂ ನಿಮ್ಮ ರಾಶ್ಯಾಧಿಪತಿ ಕುಜನ ಸಂಚಾರ ಶುಭವಿರುವುದರಿಂದ ಸಹೋದರ ಸಂಬಂಧಿಗಳಲ್ಲಿ ಉಂಟಾಗಿದ್ದ ಸಮಸ್ಯೆಗಳು ಬಗೆಹರಿಯುತ್ತವೆ. ಹೊಸ ವ್ಯಾಪಾರ, ವ್ಯವಹಾರಗಳಿಗೆ ಬಂಡವಾಳ ದೊರೆಯುತ್ತದೆ. ಪ್ರಮುಖ ಕೆಲಸಗಳನ್ನು ವಿಳಂಬವಾಗಿ ಎನಿಸಿದರೂ ಪೂರ್ಣಗೊಳಿಸುವಿರಿ. ವಾರಾಂತ್ಯಕ್ಕೆ ಮನೋರಂಜನಾ ಖರ್ಚುಗಳು.

ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮಕ್ಕಳು ಶೈಕ್ಷಣಿಕ ವಿಷಯಗಳತ್ತ ಗಮನ ಹರಿಸುತ್ತಾರೆ. ವೃತ್ತಿಪರ ವ್ಯಾಪಾರದಲ್ಲಿ ನಷ್ಟಗಳನ್ನು ನಿವಾರಿಸಿಕೊಂಡು, ಲಾಭವನ್ನು ಪಡೆಯುತ್ತೀರಿ. ಹಳೆಯ ಸಾಲ-ಸೋಲಗಳು ನಿವಾರಣೆ ಆಗಲಿದೆ. ಗುರುಬಲದ ಪ್ರಭಾವದಿಂದ ಕೆಲವೊಂದು ಕೆಲಸಗಳು ಅಪ್ರಯತ್ನವಾಗಿ ಕಾರ್ಯಸಿದ್ಧಿಯನ್ನು ಹೊಂದುತ್ತದೆ. ಸಣ್ಣಪುಟ್ಟ ವಿವಾದಗಳನ್ನು ಬೆಳೆಸಿಕೊಂಡು ಹೋಗಬೇಡಿ.

ಶ್ರೀ ದುರ್ಗಾ ಕವಚ ಪಾರಾಯಣ. ಶುಭ ಸಂಖ್ಯೆ-4.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಕೆಲವು ವಿಚಾರಗಳಲ್ಲಿ ಆತ್ಮೀಯರ ಸಲಹೆ ಪಡೆದು ಮುನ್ನಡೆಯುವುದು ಉತ್ತಮ. ಸಹೋದರರಿಂದ ಸ್ಥಿರಾಸ್ತಿ ಲಾಭ ಹೊಂದುವ ಸಾಧ್ಯತೆ ಇದೆ. ಕೈಕೊಂಡ ಕಾರ್ಯಗಳು ಕುಂಟುತ್ತಾ ಸಾಗಿದರು ಯಶಸ್ವಿಯಾಗಿ ಪೂರ್ಣಗೊಳಿಸುತ್ತೀರಿ. ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ದೊರಕುವುದು. ವಾರದ ಕಡೆಗೆ ಅನವಶ್ಯಕ ಖರ್ಚುಗಳು ಹೆಚ್ಚಾಗುವುದು. ಸಣ್ಣಪುಟ್ಟ ಅನಾರೋಗ್ಯ ಕಾಣಿಸುತ್ತದೆ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರದಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿ ಕಳಪೆಯಾಗಿದ್ದರೂ ಅಗತ್ಯಗಳನ್ನು ಪೂರೈಸಿಕೊಳ್ಳಲು ತೊಂದರೆ ಆಗದು. ಗೃಹ ನಿರ್ಮಾಣ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಸಂಬಂಧಿಕರೊಂದಿಗೆ ಮಾತಿನ ಚಕಮಕಿಯಿಂದ ಮನಸ್ಸಿಗೆ ಅಸಮಾಧಾನ. ಮಕ್ಕಳ ಶಿಕ್ಷಣ ಮತ್ತು ಉದ್ಯೋಗದ ಪ್ರಯತ್ನಗಳು ನಿಧಾನವಾಗಿ ಸಾಗುತ್ತವೆ. ವಾರಾಂತ್ಯಕ್ಕೆ ಹಠಾತ್ ಧನಲಾಭವಾಗಲಿದೆ.

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


'ಶಕ್ತಿಗಿಂತ ಯುಕ್ತಿ ಮೇಲು' ಗುರುಕೃಪೆ ಇದೆ. ಯಾರ ಮೇಲೆ ಯಾವ ತಂತ್ರ ಪ್ರಯೋಗಿಸಬಹುದು ಎಂದು ತಿಳಿದು ವ್ಯವಹರಿಸಿ. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳವಾಗುವುದು. ವಿದ್ಯಾರ್ಥಿಗಳು ಓದಿನಲ್ಲಿ ಚುರುಕುತನ ತೋರುವರು. ವೃತ್ತಿಪರ ಉದ್ಯೋಗಗಳಲ್ಲಿ ಸರ್ಕಾರಿ ಅಧಿಕಾರಿಗಳಿಂದ ಅಡಚಣೆ ಉಂಟಾಗುವುದು. ಗುರು ಹಿರಿಯರ ಭೇಟಿ ಲಾಭದಾಯಕವಾಗುವುದು.

ಶ್ರೀ ಅರಳೀವೃಕ್ಷ ಪೂಜೆ. ಶುಭ ಸಂಖ್ಯೆ-8.


ಮಕ್ಕಳ ಚಿತ್ರಕಥೆ

'ಶಾಸ್ತ್ರಿಯವರು ಮಗನಿಗೆ ನೀಡಿದ ಆದೇಶ ಹೀಗಿತ್ತು...!'

-ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಪ್ರಾಮಾಣಿಕ ರಾಜಕಾರಣಿ ಎಂದರೆ "ಲಾಲ್ ಬಹಾದ್ದೂರ್ ಶಾಸ್ತ್ರಿ" ಎಂದು ಇಡೀ ರಾಷ್ಟ್ರವೇ ಇಂದಿಗೂ ಅವರನ್ನು ಗೌರವ, ಅಭಿಮಾನದಿಂದ ಸ್ಮರಿಸುತ್ತದೆ.




ಶಾಸ್ತ್ರಿಯವರು ಪ್ರಧಾನಿಯಾಗುವ ಮೊದಲು ಅವರ ಮಗ ಒಂದು ಕಂಪನಿಯಲ್ಲಿ ತಿಂಗಳಿಗೆ "ಮುನ್ನೂರು ರೂಪಾಯಿ" ಸಂಬಳ ಪಡೆಯುತ್ತಿದ್ದರು.




ಸ್ವಲ್ಪ ಕಾಲದ ನಂತರ ಶಾಸ್ತ್ರಿಯವರು ಪ್ರಧಾನ ಮಂತ್ರಿಗಳಾಗಿ ಆಯ್ಕೆಯಾದರು.



ಶಾಸ್ತ್ರಿಯವರು ಪ್ರಧಾನಿಯಾದ ನಂತರ ಒಬ್ಬ ಉದ್ಯಮಿ, ಶಾಸ್ತ್ರಿಯವರ ಮಗನಿಗೆ ತಿಂಗಳಿಗೆ "ಮೂರು ಸಾವಿರ ರೂಪಾಯಿ" ಕೊಡುವುದಾಗಿ ಹೇಳಿ, ತಮ್ಮ ಕಂಪನಿಗೆ ಆಹ್ವಾನಿಸಿದರು.



ಮಗನು, ತಂದೆ ಶಾಸ್ತ್ರಿಯವರಿಗೆ ಈ ವಿಷಯ ತಿಳಿಸಿದರು.



ಶಾಸ್ತ್ರೀಜಿಯವರು ಹೇಳಿದರು, "ಈವರೆಗೆ ಆ ಉದ್ಯಮಿಗೆ ನಿನಗೆ ತಿಂಗಳಿಗೆ ಮೂರು ಸಾವಿರ ರೂಪಾಯಿ ಪಡೆಯುವ ಯೋಗ್ಯತೆ ಇದೆಯೆಂದು ತಿಳಿದಿರಲಿಲ್ಲವೇ...? ಅಂದಿನಿಂದ ಇಲ್ಲದ್ದು ಈಗೇಕೆ ಈ ಆಹ್ವಾನ...? ನೀನು ಇರುವ ಕಡೆಯೇ ಇರು...!!!" ಎಂದುಬಿಟ್ಟರು.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ರಸ್ತೆ ದಾಟುತ್ತಿದ್ದ ವ್ಯಕ್ತಿ ಸಾವು



ನಂಜನಗೂಡು, ಸೆ.30– ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ನಗರದ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮುಂಭಾಗ ನಡೆದಿದೆ.

ನಗರದ ತ್ಯಾಗರಾಜ ಕಾಲೋನಿ ನಿವಾಸಿ ಮುಬಾರಕ್(28) ಮೃತ ದುರ್ದೈವಿ. ಮೃತನಿಗೆ ಪತ್ನಿ ಇದ್ದಾರೆ. ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದ ಮುಬಾರಕ್ ಶನಿವಾರ ಸಂಜೆ ಮೈಸೂರು–ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ನಗರದ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮುಂಭಾಗದಲ್ಲಿ ನಡೆದುಕೊಂಡು ರಸ್ತೆ ದಾಟುತ್ತಿದ್ದ ವೇಳೆ ಕೆಎಸ್‌ಆರ್‌ಟಿಸಿ ಬಸ್ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮವಾಗಿ ಮುಬಾರಕ್‌ಗೆ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಜಯಪ್ರಕಾಶ್ ಭೇಟಿ ನೀಡಿ ಪರಿಶೀಲನೆ ನಡೆಸಿ ಬಸ್‌ನ್ನು ವಶಕ್ಕೆ ಪಡೆದುಕೊಂಡು, ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ದರ್ಶನ್ ಧ್ರುವನಾರಾಯಣ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರು

ಮೈಸೂರು, ಸೆ.30– ಜಿಲ್ಲಾಡಳಿತ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಮೈಸೂರು ವತಿಯಿಂದ ಗಾಂಧಿ ಜಯಂತಿ ಪ್ರಯುಕ್ತ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದ್ದು, ಪ್ರೌಢಶಾಲಾ ವಿಭಾಗದಲ್ಲಿ ಮೋನಿಷಾ ಎಸ್ ವಿ ಪ್ರಥಮ, ನಿಸರ್ಗ ಎಂ ದ್ವಿತೀಯ, ಹಾಗೂ ಕಾವ್ಯ ತೃತೀಯ ಸ್ಥಾನ ಪಡೆದುಕೊಂಡಿರುತ್ತಾರೆ.

ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ನಿತ್ಯಶ್ರೀ ಪ್ರಥಮ, ಮನೋಜ್ ಬಿ.ಟಿ ದ್ವಿತೀಯ ಹಾಗೂ ವರ್ಷಿಣಿ ಡಿಎಸ್ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಕುಸುಮ ಬಾಯಿ ಆರ್ ಪ್ರಥಮ ಸ್ಥಾನ, ಯಶವಂತ್ ಕೆ ಎಸ್ ದ್ವಿತೀಯ ಸ್ಥಾನ, ಹಾಗೂ ಕೃಪಾ.ಡಿ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ ಎಂದು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕಿ ಓಡಿಸುತ್ತಿದ್ದ ಕಾರು ಕಂಬಕ್ಕೆ ಡಿಕ್ಕಿ: ಕಂಬ ಬಿದ್ದು ರೈತ ಸಾವು



ಸರಗೂರು, ಸೆ.30– ಕಾರೊಂದು ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕಂಬ ಮುರಿದು ರೈತನ ಮೇಲೆ ಬಿದ್ದು ಸಾವನ್ನಪ್ಪಿರುವ ಘಟನೆ ಬಾಡಗ ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ತಾಲೂಕಿನ ಬಾಡಗ ಗ್ರಾಮದ ಗುರುಸಿದ್ದಪ್ಪ ಅವರ ಪುತ್ರ ಸಿದ್ದಪ್ಪ(46) ಮೃತರು. ಸಿದ್ದಪ್ಪ ಅವರು ಗ್ರಾಮದ ಮುಖ್ಯ ರಸ್ತೆಯಲ್ಲಿ ಮನೆ ಕಡೆಗೆ ಬರುತ್ತಿದ್ದಾಗ ಎಂ.ಸಿ.ತಳಲು ಸರಕಾರಿ ಪ್ರೌಢಶಾಲೆ ಗಣಿತ ಶಿಕ್ಷಕಿ ಶಾರದ ಶಾಲೆ ಮುಗಿಸಿ ತಮ್ಮ ಮಾರುತಿ ಆಲ್ಟೋ–800 ಕಾರಿನಲ್ಲಿ ಬರುತ್ತಿದ್ದಾಗ ಕಾರು ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದಲ್ಲೇ ಇದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಕಂಬ ಮುರಿದು ಮನೆಗೆ ಹೋಗುತ್ತಿದ್ದ ರೈತ ಸಿದ್ದಪ್ಪ ಅವರ ಮೇಲೆ ಬಿದ್ದಿದೆ. ಕಂಬ ಬಿದ್ದ ಪರಿಣಾಮ ಸಿದ್ದಪ್ಪನವರ ತಲೆ, ಕೈ ಕಾಲು, ಬೆನ್ನಿನ ಮೂಳೆ ಮುರಿದಿವೆ. ಕೂಡಲೇ ಅವರನ್ನು ವಿವೇಕಾನಂದ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವನ್ನಪ್ಪಿದ್ದಾರೆ.

ಮೃತರು ತಾಯಿ, ಪತ್ನಿ, ಪುತ್ರಿ ಅಗಲಿದ್ದಾರೆ. ಸ್ಥಳಕ್ಕೆ ಸರಗೂರು ಠಾಣೆ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು, ಮೃತ ದೇಹವನ್ನು ಸರಗೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಒಪ್ಪಿಸಲಾಯಿತು. ಈ ಕುರಿತು ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫರ್ಕಿ 3 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಟೋಬಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ದಿಗ್ವಿಜಯ (ಕ):** ಬೆ.10.40ಕ್ಕೆ, **ಸಪ್ತಸಾಗರದಾಚೆ ಎಲ್ಲೋ (ಕ):** ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಜವಾನ್ (ಹಿಂ):** ಸಂ.4ಕ್ಕೆ
ಸ್ಕ್ರೀನ್ 2	**ತತ್ಸಮ ತದ್ಭವ (ಕ):** ಬೆ.11.30ಕ್ಕೆ, **ಒಲವೇ ಮಂದಾರ 2 (ಕ):** ಮ.2ಕ್ಕೆ, **ಡೆಮಾನ್ (ತ):** ಸಂ.4.30ಕ್ಕೆ, **ಸುಖೀ (ಹಿಂ):** ರಾ.7ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 3	**ಎಕ್ಸ್‌ಪೆಂಡಬಲ್ಸ್ (ಇಂ):** ಬೆ.11.30ಕ್ಕೆ, ರಾ.9.40ಕ್ಕೆ, **ದಿ ನನ್ 2 (ಇಂ):** ಮ.1.45ಕ್ಕೆ, **ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ):** ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಜವಾನ್ (ಹಿಂ):** ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, **ದಿ ಎಕ್ಸ್‌ಪೆಂಡಬಲ್ಸ್ (ಇಂ):** ಮ.2.10ಕ್ಕೆ, ರಾ.8.05ಕ್ಕೆ
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ (ಕ):** ಬೆ.10.50ಕ್ಕೆ, **ಜವಾನ್ (ಹಿಂ):** ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	**ಜವಾನ್ (ಹಿಂ):** ಬೆ.9.10ಕ್ಕೆ, ಮ.12.45ಕ್ಕೆ, **ದಿ ಎಕ್ಸ್‌ಪೆಂಡಬಲ್ಸ್ (ಇಂ):** ಸಂ.4.20ಕ್ಕೆ, ರಾ.9.50ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಸಂ.6.50ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10ಕ್ಕೆ, **ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ):** ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, **ಮಾರ್ಕ್ ಆಂಟೋನಿ (ತ):** ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧ್ವಂಧ್ವ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನರಸೀಪುರದಲ್ಲಿ ಸುಸಜ್ಜಿತ ಕನಕ ಸಮುದಾಯ ಭವನ ನಿರ್ಮಾಣ

ಸ್ಥಳ ಪರಿಶೀಲನೆ ನಂತರ ಶೀಘ್ರದಲ್ಲೇ ಕಾಮಗಾರಿ ಆರಂಭ



ತಿ.ನರಸೀಪುರ, ಸೆ.30– ಪಟ್ಟಣದಲ್ಲಿ ಸುಸಜ್ಜಿತವಾದ ಕನಕ ಸಮುದಾಯ ಭವನ ನಿರ್ಮಾಣ ಮಾಡಲು ಸ್ಥಳ ಪರಿಶೀಲನೆ ನಡೆಯುತ್ತಿದೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಎಸ್.ಮಹಾದೇವಸ್ವಾಮಿ (ಮನ್ನೆಹುಂಡಿ ಮಹೇಶ್) ತಿಳಿಸಿದ್ದಾರೆ.

ಪಟ್ಟಣದ ಕಾಲೇಜು ವೃತ್ತದಲ್ಲಿರುವ ಮರಿಗೌಡ ಸ್ಮಾರಕ ಭವನದಲ್ಲಿ ನಡೆದ 2022–23ನೇ ಸಾಲಿನ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವರುಣ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕ್ಷೇತ್ರದಲ್ಲಿ ಕನಕ ಭವನ ನಿರ್ಮಾಣ ಮಾಡಲು ಸಾರ್ವಜನಿಕರಿಗೆ ಹಾಗೂ ನಮ್ಮ ಸಮಾಜಕ್ಕೆ ಉಪಯೋಗವಾಗುವಂತಹ ಜಮೀನನ್ನ ನೋಡುತ್ತಿದ್ದು, ಮೈಸೂರು ಮುಖ್ಯ ರಸ್ತೆಯ ಗರ್ಗೇಶ್ವರಿ, ತಲಕಾಡು ಮುಖ್ಯರಸ್ತೆಯ ಚೌಹಳ್ಳಿ ಹಾಗೂ ನಂಜನಗೂಡು ಮುಖ್ಯರಸ್ತೆಯ ಹೆಳವಹುಂಡಿ ಸಮೀಪ ಜಮೀನು ಗುರುತಿಸಲಾಗಿದೆ ಎಂದರು. ಸದ್ಯದಲ್ಲೇ ಮೂರು ಸ್ಥಳಗಳನ್ನು ಪರಿಶೀಲಿಸಿ ಒಂದನ್ನು ಅಂತಿಮಗೊಳಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ತಿಳಿಸಿ ನಂತರ ಜಮೀನು ಖರೀದಿಸಲು ವ್ಯವಸ್ಥೆ ಕಲ್ಪಿಸಿ ಹಾಗೂ ಭವನವನ್ನು ನಿರ್ಮಾಣ ಮಾಡಿಕೊಡುವ ಭರವಸೆ ನೀಡಿದ್ದಾರೆ ಎಂದು ಸಭೆಯಲ್ಲಿ ತಿಳಿಸಿದರು,

ವಿದ್ಯಾರ್ಥಿನಿಲಯ ಸ್ಥಾಪನೆ ಮಾಡಿದರೆ ವಿದ್ಯಾರ್ಥಿಗಳು ಬರುವುದಿಲ್ಲ, ಆದ್ದರಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯ ನಂತರ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಎಲ್ಲಾ ರೀತಿಯ ತರಬೇತಿ ಕೇಂದ್ರಗಳನ್ನು ತೆರೆದು ತರಬೇತಿಗಳನ್ನು ನೀಡಲಾಗುವುದು. ಸಂಘದಲ್ಲಿ ನೂತನ ಸೇರ್ಪಡೆಯಾಗುವ ಷೇರುದಾರರಿಗೆ 500 ನಿಗದಿ ಮಾಡಿದ್ದು ಅದಕ್ಕೆ ಸಹಕರಿಸಿ ಎಂದರು.

ಕುರುಬರ ಸಂಘದ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ತಾಲೂಕಿನಲ್ಲಿ 40,000 ಕುರುಬ ಸಮಾಜದ ಬಂಧುಗಳು ಇದ್ದಾರೆ, ಪಟ್ಟಣದಲ್ಲಿ ಸರ್ಕಾರದ ವತಿಯಿಂದ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ಸ್ಥಾಪಿಸಲು ಸಂಘ ತಾಲೂಕು ಆಡಳಿತದವರ ಗಮನಕ್ಕೆ ತಂದು ಸ್ಥಾಪಿಸಲು ಮುಂದಾಗಬೇಕೆಂದು ಮನವಿ ಮಾಡಿದರು, ಸಂಘದ ಸದಸ್ಯರು ಮರಣ ಹೊಂದಿದರೆ ಅವರ ಕುಟುಂಬದವರಿಗೆ ಐದು ಸಾವಿರ ರೂ ಮರಣ ನಿಧಿ ನೀಡುವಂತೆ ಸಲಹೆ ನೀಡಿದರು.

ಸಂಘದ ಖಜಾಂಚಿ ಕಾಳ ಬಸವನಹುಂಡಿ ಮಲ್ಲೇಶ್ ಅವರು ಕಳೆದ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಮಾತನಾಡಿ, ಸಂಘವು ಉತ್ತಮವಾಗಿ ನಡೆಯುತ್ತಿದೆ. ಸಮಾಜದ ಬಂಧುಗಳು ಹೆಚ್ಚಿನ ರೀತಿಯಲ್ಲಿ ಸಹಕರಿಸಿ ಕನಕ ಭವನ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸೋಣ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ (ರವಿ), ಜಿ.ಪಂ. ಮಾಜಿ ಸದಸ್ಯ ಮೂಗೂರು ಎಂ.ಆರ್. ಸೋಮಣ್ಣ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಬಸವಣ್ಣ, ಎನ್.ಮಹದೇವಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷರುಗಳಾದ ಎನ್ ಸೋಮು, ಟಿ.ಎಂ.ನಂಜುಂಡಸ್ವಾಮಿ, ಸಂಘದ ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ ಬಾಬು, ಟೌನ್ ಕಾರ್ಯಾಧ್ಯಕ್ಷ ಎಂ ಮಾದೇಶ್, ಉಪಾಧ್ಯಕ್ಷ ಎಂ.ವೆಂಕಟೇಶ್, ಎಂ.ನಾಗೇಶ್, ಸೌಭಾಗ್ಯ ಶಾಂತಿ ರಾಜು, ಮಲ್ಲೇಶ್, ಹೆಳವರಹುಂಡಿ ಅರುಣ್ ಕುಮಾರ್, ನಂಜುಂಡಸ್ವಾಮಿ, ಅಶ್ವಿನ್ ಕುಮಾರ್. ಕುಪ್ಯಾ ಭಾಗ್ಯಮ್ಮ, ವಾಟಾಳು ಶಿವಶಂಕರ್, ಅಕ್ಕೂರು ಗುರುಮೂರ್ತಿ, ಮುಸುವಿನಕೊಪ್ಪಲು ಎಂ.ಶಿವರಾಂ, ಕೆಬ್ಬೆಹುಂಡಿ ಚಿಕ್ಕ ಸಿದ್ದೇಗೌಡ, ಗುತ್ತಿಗೆದಾರ ವಾಟಾಳು ರಾಚೇಗೌಡ, ಪರಶಿವ, ವಕೀಲ ನಂಜುಂಡೇ ಗೌಡ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ರವೀಂದ್ರ ಕುಮಾರ್, ಮುದ್ದು ಬೀರನಹುಂಡಿ ಗುರುಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿ ಅಪಾರವಾದದ್ದು



ಬನ್ನೂರು, ಸೆ.30– ಕುಟುಂಬದಲ್ಲಿ ಮಹಿಳೆಯೇ ಪ್ರಮುಖ. ಮಹಿಳೆಯರನ್ನು ಮುಖ್ಯವಾಹಿನಿಗೆ ತಂದು ಆ ಮೂಲಕ ಕುಟುಂಬವನ್ನು ಆರ್ಥಿಕವಾಗಿ ಸದೃಢ ಮಾಡಿ ಉತ್ತಮ ಜೀವನವನ್ನು ನಡೆಸುವಂತೆ ಮಾಡುವ ಸಲುವಾಗಿ ವಿವಿಧ ಯೋಜನೆಯನ್ನು ರೂಪಿಸಿಕೊಂಡು ಉತ್ತಮ ಕಾರ್ಯವನ್ನು ನಿರ್ವಹಿಸಲು ಬೆನ್ನೆಲುಬಾಗಿ ನಿಂತಿರುವ ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿತ್ವ ಅಪಾರವಾದದ್ದು ಎಂದು ಸಮಾಜ ಸೇವಕ ವೈ.ಎಸ್. ರಾಮಸ್ವಾಮಿ ತಿಳಿಸಿದರು.

ಪಟ್ಟಣದ ಸರ್ವಮಂಗಳ ನಂಜೇಗೌಡ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಸತ್ಯನಾರಾಯಣ ಪೂಜಾ ಸಮಿತಿ ಹಾಗೂ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿನ ನಿರುದ್ಯೋಗಿ ಯುವಕರು–ಯುವತಿಯರು ಸ್ವಂತ ಉದ್ಯೋಗದತ್ತ ಮುಖ ಮಾಡುವಂತೆ ಅನೇಕ ಉದ್ಯೋಗ ತರಬೇತಿಯನ್ನು ನೀಡುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉತ್ತಮವಾದದ್ದು ಎಂದು ಶ್ಲಾಘಿಸಿದ ಅವರು, ಕುಡಿತದಂತಹ ಚಟವನ್ನು ಬಿಟ್ಟು ವ್ಯಕ್ತಿಗಳು ಸಮಾಜಮುಖಿ ಜೀವನ ನಡೆಸಲು ಎಷ್ಟೋ ಕುಟುಂಬಗಳಿಗೆ ದಾರಿದೀಪವಾಗಿದೆ. ಎಷ್ಟೋ ಕುಟುಂಬಗಳ ಮನೆಗಳನ್ನು ಬೆಳಗುವ ಕಾರ್ಯವನ್ನು ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತಸಂಘ (ಮೂಲಸಂಘಟನೆ) ಜಿಲ್ಲಾಧ್ಯಕ್ಷ ನಾರಾಯಣ್ ಮಾತನಾಡಿದರು. ನಂತರ ಸತ್ಯನಾರಾಯಣ ಪೂಜೆಗೆಂದು ನೋಂದಾಯಿಸಿಕೊಂಡಿದ್ದವರು ಸಾಮೂಹಿಕವಾಗಿ ಮಂತ್ರಘೋಷಗಳೊಂದಿಗೆ ಸತ್ಯನಾರಾಯಣ ಪೂಜೆಯನ್ನು ಯಶಸ್ವಿಯಾಗಿ ನಡೆಸಿದರು.

ಕಾರ್ಯಕ್ರಮದಲ್ಲಿ ನಾಡಗೌಡ ಪಾರ್ಥಸಾರಥಿ, ಜೆಡಿಎಸ್ ಮುಖಂಡ ಚಿಕ್ಕಹಿರೇಗೌಡ, ಸತೀಶ್‌ನಾಯ್ಕ ಪ್ರಾಂಶುಪಾಲ ದಿನೇಶ್ ಪೂಜಾರಿ, ಅನಂತ್, ಆಲೆಮನೆ ಕೃಷ್ಣೇಗೌಡ, ಪಂಚಲಿಂಗೇಗೌಡ, ಶಿವಕುಮಾರ್, ತಾಲೂಕು ಯೋಜನಾಧಿಕಾರಿ ಉಮಾವತಿ, ಬನ್ನೂರು ವಲಯದ ಮೇಲ್ವಿಚಾರಕ ಎಂ. ಮುರಳಿ ಸೇರಿದಂತೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಇಂದು ಹುಣಸೂರಲ್ಲಿ ಸ್ವಚ್ಛತಾ ಅಭಿಯಾನ

ಹುಣಸೂರು, ಸೆ.30– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಭಾನುವಾರ ಬೆಳಗ್ಗೆ 10 ಗಂಟೆಗೆ ನಗರದ ನ್ಯಾಯಾಲಯ ಆವರಣದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ನಡೆಯಲಿದೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ತಿಳಿಸಿದ್ದಾರೆ

ಬೈಕುಗಳ ಕರ್ಕಶ ಶಬ್ದಕ್ಕೆ ಪೊಲೀಸರ ಕಡಿವಾಣ

ಸೈಲೆನ್ಸರ್ ಪೈಪ್ ಮಾರ್ಪಡಿಸದಂತೆ ಮೆಕ್ಯಾನಿಕ್‌ಗಳಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಎಚ್ಚರಿಕೆ



ಹೆಚ್.ಡಿ.ಕೋಟೆ, ಸೆ.30– ಬೈಕ್‌ಗಳು ಕರ್ಕಶ ಶಬ್ದ ಮಾಡುವಂತೆ ಸೈಲೆನ್ಸರ್ ಪೈಪುಗಳನ್ನು ಮಾರ್ಪಡಿಸಬಾರದು ಎಂದು ಮೆಕ್ಯಾನಿಕ್‌ಗಳಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಎಚ್ಚರಿಕೆ ನೀಡಿದ್ದಾರೆ.

ಕೋಟೆ ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಖಾಸಗಿ ಸಮುದಾಯ ಭವನದಲ್ಲಿ ಹೆಚ್.ಡಿ. ಕೋಟೆ ಮತ್ತು ಸರಗೂರು ತಾಲೂಕು ದ್ವಿಚಕ್ರ ವಾಹನ ದುರಸ್ತಿಗಾರರ ಸಂಘದ ವತಿಯಿಂದ ನಡೆದ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಂಘ ಸಂಸ್ಥೆಗಳ ಸ್ಥಾಪನೆಯಿಂದ ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯ, ತಾಲೂಕಿನಲ್ಲಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮ ವಾಹನಗಳನ್ನು ತಮಗಿಷ್ಟದ ರೀತಿ ಬದಲಾಯಿಸಲು ಬರುತ್ತಾರೆ, ಈ ರೀತಿ ಬದಲಿಸುವ ವೇಳೆ ಕರ್ಕಶವಾದ ಶಬ್ದ ಬರುವಂತೆ ಮಾಡಲು ಹೇಳುತ್ತಾರೆ. ಇದರಿಂದ ಶಬ್ದಮಾಲಿನ್ಯ ಉಂಟಾಗುತ್ತದೆ. ಆದ್ದರಿಂದ ಕರ್ಕಶವಾದ ಶಬ್ದ ಬರುವಂತೆ ಬೈಕ್‌ಗಳನ್ನು ಮಾರ್ಪಡಿಸಬಾರದು. ಇದರಿಂದಾಗಿ ಬೈಕ್ ಮೆಕ್ಯಾನಿಕ್‌ಗಳು ಸಹ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಸಂಘದ ಅಧ್ಯಕ್ಷ ರಾಯಪ್ಪನ್ ಮಾತನಾಡಿ, ನಮ್ಮ ಸಂಘದ ವತಿಯಿಂದ ಸಂಘದ ಸದಸ್ಯರುಗಳ ಜೀವನದಲ್ಲಿ ವ್ಯತ್ಯಾಸಗಳಾದಾಗ ಅವರಿಗೆ ಆರ್ಥಿಕ ಸಹಾಯವನ್ನು ಮಾಡುತ್ತಾ ಬಂದಿದ್ದೇವೆ, ಮುಂದೆಯೂ ಸಹ ಇದೇ ರೀತಿ ಸಹಾಯ ಮಾಡಲಾಗುವುದು ಎಂದರು.

ಮೇ ಒಂದರ ಕಾರ್ಮಿಕ ದಿನದಂದು ಮತ್ತು ಡಿ. 30 ರಂದು ಸರ್ವ ಸದಸ್ಯರ ಸಭೆ ಕರೆಯಲಾಗುವುದು, ಆದ್ದರಿಂದ ಈ ಸಭೆಗಳಲ್ಲಿ ತಮ್ಮ ಕುಂದು ಕೊರತೆಯನ್ನು ಸಲ್ಲಿಸಬಹುದು ಎಂದರು. ಕೇಂದ್ರ ಸರ್ಕಾರವು ಅಂಚೆ ಇಲಾಖೆಯ ವತಿಯಿಂದ 10 ಲಕ್ಷ ರೂ. ಹಣದ ವಿಮೆಯನ್ನು 400 ರೂ. ವೆಚ್ಚದಲ್ಲಿ ನೀಡುತ್ತಿದ್ದು, ಸಂಘದ 140 ಮಂದಿಗೆ ಉಚಿತವಾಗಿ ಮಾಡಲಾಗಿದೆ ಎಂದರು.

ಈ ವೇಳೆ ವಿವಿಧ ಆಟೋಟಗಳಲ್ಲಿ ಜಯ ಗಳಿಸಿದವರಿಗೆ ಬಹುಮಾನ ನೀಡಲಾಯಿತು. ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ತೋರಿದವರಿಗೂ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಧನರಾಜ್, ರವಿ, ಯುಸೂಫ್, ಸಯ್ಯದ್ ರಫೀಕ್, ಫರ್ಹಾನ್ ಅಹಮದ್, ತೌಸಿಫ್, ಸಾಜಿಲ್ ಶರೀಫ್, ಕುಮಾರ್, ಸುನೀಲ್, ಚಿನ್ನಯ್ಯ, ಸಂಘದ ಅಧ್ಯಕ್ಷರಾದ ರಾಯಪ್ಪನ್, ಉಪಾಧ್ಯಕ್ಷ ನಟೇಶ್, ಸಹ ಕಾರ್ಯದರ್ಶಿ ಎನ್. ರಾಜು, ಖಜಾಂಚಿ ನೌಷಿದ್, ಕಾರ್ಯದರ್ಶಿ ಶಫಿವುದ್ದೀನ್, ಸೂರಿ ಇದ್ದರು.



ಮೈಸೂರು ತಾಲೂಕಿನ ನಾಡನಹಳ್ಳಿ ಸಮೀಪವಿರುವ ವಿದ್ಯಾವಿಕಾಸ್ ಬಿ.ಇಡಿ ಕಾಲೇಜಿನಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಪ್ರಾಂಶುಪಾಲ ರಾಜ್‌ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಉಪನ್ಯಾಸಕರಾದ ಜಗದೀಶ್, ವಸಂತಕುಮಾರಿ, ಶಿವಕುಮಾರ್, ಶಿಲ್ಪಾ, ಶಕುಂತಲಾ, ಪ್ರಸನ್ನ, ಅನಂತರಾಜು, ಗ್ರಂಥಪಾಲಕ ಅಶೋಕ್ ಉಪಸ್ಥಿತರಿದ್ದರು.

ಶ್ರೀಕಂಠೇಶ್ವರ ದೇವಾಲಯ ಹುಂಡಿಯಲ್ಲಿ 1.4 ಕೋಟಿ ಸಂಗ್ರಹ



ನಂಜನಗೂಡು, ಸೆ.30– ನಗರದ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 35 ಹುಂಡಿಗಳಿಂದ ಒಂದು ಕೋಟಿ 40 ಲಕ್ಷ ನಗದು, 55 ಗ್ರಾಂ ಚಿನ್ನ, 3 ಕೆಜಿ 600 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ದೇವಾಲಯದ ದಾಸೋಹ ಭವನದಲ್ಲಿ ಶನಿವಾರ ಹುಂಡಿಗಳನ್ನು ತೆರೆದು ಎಣಿಕೆ ನಡೆಸಲಾಯಿತು. ಹುಂಡಿಗಳಲ್ಲಿ ನಗದು 1,04,05,698, ಚಿನ್ನ 55 ಗ್ರಾಂ ಹಾಗೂ 3.6 ಕೆ.ಜಿ ಬೆಳ್ಳಿ ದೊರೆತಿದೆ. ಬ್ಯಾಂಕ್ ಆಫ್ ಬರೋಡ ಹಾಗೂ ದೇವಾಲಯದ ಸಿಬ್ಬಂದಿ ಹಾಗೂ ನೂರಕ್ಕೂ ಹೆಚ್ಚಿನ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಹುಂಡಿ ಹಣ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು. ಇದೇ ಸಂದರ್ಭದಲ್ಲಿ ದೇವಾಲಯದ ಇಒ ಜಗದೀಶ್ ಕುಮಾರ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಬ್ಯಾಂಕ್ ಆಫ್ ಬರೋಡ ವ್ಯವಸ್ಥಾಪಕ ಟಿ.ಕೆ.ನಾಯಕ್ ಉಪಸ್ಥಿತರಿದ್ದರು.

ನಂಜನಗೂಡಲ್ಲಿ ವಿನೂತನ ರೀತಿಯಲ್ಲಿ ಗಾಂಧಿ ಜಯಂತಿ ಆಚರಣೆ

ನಗರಸಭೆಯಿಂದ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದವರೆಗೆ ಪಾದಯಾತ್ರೆ



ನಂಜನಗೂಡು, ಸೆ.30– ಗಾಂಧಿ ಜಯಂತಿ ಹಾಗೂ ಭಾರತ್ ಜೋಡೋ ಯಾತ್ರೆಯ ಸವಿನೆನಪಿನ ಅಂಗವಾಗಿ ನಂಜನಗೂಡಿನ ನಗರಸಭೆ ಕಾರ್ಯಾಲಯದಿಂದ ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರದ ವರೆಗೆ ಪಾದಯಾತ್ರೆಯಲ್ಲಿ ಸಾಗಿ ಮಹಾತ್ಮಗಾಂಧಿ ಜಯಂತಿಯನ್ನು ವಿನೂತನವಾಗಿ ಆಚರಣೆ ಮಾಡಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಕಾಂಗ್ರೆಸ್ ಪಕ್ಷದ ವರಿಷ್ಠರಾದ ರಾಹುಲ್‌ಗಾಂಧಿ ನೇತೃತ್ವದಲ್ಲಿ ಭಾರತ್ ಜೋಡೋ ಯಾತ್ರೆಯನ್ನು ಹಮ್ಮಿಕೊಂಡು ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರ ಸಮ್ಮುಖದಲ್ಲಿ ಬದನವಾಳು ಗ್ರಾಮದಲ್ಲಿ ಗಾಂಧೀಜಿರವರು ಸ್ಥಾಪಿಸಿರುವ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಗಿತ್ತು ಎಂದರು.

ಆ ಸವಿ ನೆನಪಿನ ಅಂಗವಾಗಿ ಮತ್ತು ಗಾಂಧಿ ಜಯಂತಿಯನ್ನು ವಿನೂತನವಾಗಿ ಆಚರಿಸುವ ಸಲುವಾಗಿ ಗಾಂಧೀಜಿ ಸ್ಮರಣೆ ಭಾರತ್ ಜೋಡೋ ಯಾತ್ರೆಯ ನೆನಪು ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅ.2 ರಂದು ಬೆಳಗ್ಗೆ 5 ಗಂಟೆಗೆ ನಗರದ ನಗರಸಭೆಯ ಕಚೇರಿಯ ಆವರಣದಲ್ಲಿರುವ ಗಾಂಧೀಜಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬಳಿಕ ಪಾದಯಾತ್ರೆ ಮೂಲಕ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಸಾಗಿ ಗಾಂಧೀಜಿರವರು ಸ್ಥಾಪಿಸಿರುವ ಖಾದಿ ಗ್ರಾಮೋದ್ಯೋಗ ಕೇಂದ್ರದ ಆವರಣದಲ್ಲಿರುವ ಗಾಂಧೀಜಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಗಾಂಧಿ ಜಯಂತಿ ಕಾರ್ಯಕ್ರಮವನ್ನು ಆಚರಣೆ ಮಾಡಲಾಗುವುದು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಕೆ.ಟಿ.ವೀರಪ್ಪ ಮುಖ್ಯಭಾಷಣ ಮಾಡುವರು ಎಂದು ಮಾಹಿತಿ ನೀಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಧ್ರುವನಾರಾಯಣ್ ಅವರು ಕ್ಷೇತ್ರದಲ್ಲಿ ಪಕ್ಷವನ್ನು ಸಂಘಟಿಸುವ ಸಲುವಾಗಿ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮವನ್ನು ರೂಪಿಸಿ ಕ್ಷೇತ್ರಾದ್ಯಂತ ಪಾದಯಾತ್ರೆ ನಡೆಸಿದ್ದಲ್ಲದೆ ಭಾರತ್ ಜೋಡೋ ಯಾತ್ರೆಯ ಯಶಸ್ಸಿಗೆ ಶ್ರಮಿಸಿದ್ದರು. ನಾನು ಕೂಡ ಅವರ ಹಾದಿಯಲ್ಲಿ ಸಾಗುವ ಸಲುವಾಗಿ ಮತ್ತು ಪಕ್ಷವನ್ನು ಸಂಘಟಿಸುವ ಸಲುವಾಗಿ ಸತ್ಯ ಅಹಿಂಸೆ ಕಡೆಗೆ ಕಾಂಗ್ರೆಸ್ ನಡಿಗೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಪಾದಯಾತ್ರೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಮೂಲಕ ಗಾಂಧೀಜಿರವರಿಗೆ ಗೌರವ ಸಲ್ಲಿಸಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಜಿಪಂ ಮಾಜಿ ಸದಸ್ಯೆ ಶಶಿರೇಖಾ, ಮುಖಂಡರಾದ ದೊರೆಸ್ವಾಮಿನಾಯಕ ಇದ್ದರು.

ಜಮೀನಿನಲ್ಲಿ ಒಂಟಿ ದಂತದ ಆನೆ ಸಾವು



ಸರಗೂರು, ಸೆ.30– ಸರಗೂರು ಹೋಬಳಿ ಕೊತ್ತೆಗಾಲ ಗ್ರಾಮದ ನಾಗಪ್ಪ ಅವರ ಜಮೀನಿನಲ್ಲಿ ಶುಕ್ರವಾರ ಒಂಟಿ ದಂತದ ಗಂಡಾನೆಯೊಂದು ಸಾವನ್ನಪ್ಪಿದ್ದು, ಸ್ಥಳಕ್ಕೆ ಸರಗೂರು ವಲಯದ ವಲಯ ಅರಣ್ಯಾಧಿಕಾರಿಗಳಾದ ಹನುಮಂತರಾಜು. ಎಸ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಎಚ್.ಡಿ.ಕೋಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಲಕ್ಷ್ಮೀಕಾಂತ್ ಅವರ ಸಮಕ್ಷಮ ಬಂಡಿಪುರ ವಿಭಾಗದ ಪಶು ವೈದ್ಯಾಧಿಕಾರಿಗಳಾದ ಮಿರ್ಜಾ ವಾಸಿಂ, ಮರಣೋತ್ತರ ಪರೀಕ್ಷೆ ನಡೆಸಿದರು. ವೈದ್ಯರ ಹೇಳಿಕೆಯಂತೆ ಸದರಿ ಗಂಡಾನೆಗೆ ಅಂದಾಜು 20 ವರ್ಷವಿರಬಹುದೆಂದು ಅಂದಾಜಿಸಲಾಗಿದ್ದು, ಸದರಿ ಗಂಡಾನೆಯ ಸಾವು ಅನುಮಾನಾಸ್ಪದವಾಗಿದ್ದು ವಲಯ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿರುತ್ತಾರೆ. ಆನೆಯ ಕಳೇಬರವನ್ನು ಸ್ಥಳದಲ್ಲೇ ಹೂಳಲಾಗಿರುತ್ತದೆ. ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಡಾ. ಬಸವರಾಜ್ ಕೆಎನ್ ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ.

ಮಂಜುನಾಥ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಸೆ.30–ಮಂಜುನಾಥ್ ಪಿ. ಅವರು ಡಾ.ಎಂ.ಎಸ್.ಕೃಷ್ಣ ಅವರ ಮಾರ್ಗದರ್ಶನದಲ್ಲಿ ಅನುವಂಶಿಕ ವಿಷಯದ ಮೇಲೆ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಲಾಗಿದೆ ಎಂದು ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಮಹದೇವನ್ ತಿಳಿಸಿದ್ದಾರೆ.

ಉತ್ತರಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

#17, 8ನೇ ಕ್ರಾಸ್ ನ್ಯೂ ಮಾಡೆಲ್ ಹೌಸ್, ಸಿದ್ಧಾರ್ಥ ಹಾಸ್ಟೆಲ್ ಮುಖ್ಯರಸ್ತೆ, ಅಶೋಕಪುರಂ ಮೈಸೂರು ಇಲ್ಲಿ ವಾಸವಾಗಿರುವ **ಶ್ರೀಮತಿ ಮಂಚಮ್ಮ**



ಇವರು ಮಾಡುವ ವಿಜ್ಞಾಪನೆಗಳು

ನನ್ನ ಮಗನಾದ **ಶ್ರೀ ರವೀಶ (ಪುಟ್ಟ)** ರವರು (ಲೇ॥ ಶ್ರೀ ರಾಮಯ್ಯ ರವರ ಮಗ)

ಜನನ : 09–03–1984
ನಿಧನ : 20–09–2023

ದಿನಾಂಕ 20-09-2023ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 01-10-2023ನೇ ಭಾನುವಾರ, ಭೋಜನ ಮಧ್ಯಾಹ್ನ 1.00 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ ಸುಮಲತಾ
ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

9ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ.ಬಿ.ಸಿದ್ದಪ್ಪನವರು
ಮಾಜಿ ಛೇರ್ಮನ್

ಶ್ರೀ ಎ.ಬಿ.ಸಿದ್ದಪ್ಪನವರು, ಮಾಜಿ ಛೇರ್ಮನ್ ಹಾಗೂ ತಾಲ್ಲೂಕು ವೀರಶೈವ ಘಟಕದ ಅಧ್ಯಕ್ಷರು ಶ್ರೀ ಮಹದೇಶ್ವರ ರೈಸ್ ಮಿಲ್ ಮಾಲೀಕರು ಆಲತ್ತೂರು ಗ್ರಾಮ, ನಂಜನಗೂಡು ತಾಲ್ಲೂಕು.

ಮನೆಯ ದೀಪವಾಗಿ ಬಾಳಿ ಊರಿಗೆ ಉಪಕಾರಿಯಾಗಿ ಬದುಕಿ ಬಂಧುಗಳ ಕಣ್ಮಣಿಯಾಗಿ ವಿಧಿಯಾಟದಲ್ಲಿ ಸಾವಿಗೆ ಶರಣಾಗಿ ಭೂಮಿಯ ಪಂಜರದಿಂದ ಬಿಡುಗಡೆ ಪಡೆದು ನಮ್ಮನ್ನೆಲ್ಲರನ್ನು ತೊರೆದು ಹೋದ ಓ ಚೇತನವೇ ನಿಮಗೆ ನಮ್ಮ ಅಶ್ರುತರ್ಪಣ. ನೀವು ದೂರ ಹೋಗಿರಬಹುದು. ನಮ್ಮ ಅಂತರಂಗದಲ್ಲಿ ನೆನಪಾಗಿರುವಿರಿ. ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕುಟುಂಬದವರೆಲ್ಲರೂ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು : ಧರ್ಮಪತ್ನಿ-ರತ್ನಮ್ಮ, ಪುತ್ರ-ಎ.ಎಸ್.ನಂಜುಂಡಸ್ವಾಮಿ (ಎಪಿಎಂಸಿ ನಿರ್ದೇಶಕರು) ಕುಟುಂಬವರ್ಗದವರು, ಬಂಧು-ಮಿತ್ರರು ಮತ್ತು ಗ್ರಾಮಸ್ಥರು

11ನೇ ವರ್ಷದ ಸವಿನೆನಪು



ಲೇಟ್ ಕೇಶವಮೂರ್ತಿ ಎಂ.ಬಿ.
ದುಃಖತಪ್ತರು: ಪತ್ನಿ ಶೋಭಾ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವಿತ–2/ಪಿ.ಆರ್149/2023–24 ದಿನಾಂಕ: 27–09–2023

ಪತ್ರಿಕಾ ಪ್ರಕಟಣೆ

ಶ್ರೀಮತಿ, ಎನ್.ಪ್ರಭಾವತಿ ಕೋಂ ಸಂಪತ್ ಕುಮಾರ್, ನಂ. 296/2, ರಾಮಾನುಜ ರಸ್ತೆ, ಮೈಸೂರು–570004 ಇವರಿಗೆ ಆಶಾಮಂದಿರ ಸಾಮೂಹಿಕ ವಸತಿ ಯೋಜನೆಯಡಿ ದಟ್ಟಗಳ್ಳಿ "ಇ" & "ಎಫ್" ಬ್ಲಾಕ್ ಬಡಾವಣೆ, ಅಳತೆ 6.00 x 9.00 ಮೀಟರ್, ನಿ. ಸಂಖ್ಯೆ65 ದಿನಾಂಕ:16–09–1987ರಂದು ಮಂಜೂರಾಗಿದ್ದು, ಪಟ್ಟಾ ಪುಸ್ತಕ ಪಡೆದಿಯತ್ತಾರೆ. ಮೂಲ ಮಂಜೂರಾತಿದಾರರಾದ ಶ್ರೀಮತಿ, ಎನ್.ಪ್ರಭಾವತಿ ರವರು ಶ್ರೀ. ಬಿ.ಬಿ.ಯದ್ರಪ್ಪ ಬಿನ್ ಲೇಟ್ ವೀರಣ್ಣ ರವರಿಗೆ ಜನರಲ್ ಪವರ್ ಆಫ್ ಅಟಾರ್ನಿ ಪತ್ರವನ್ನು ಹಿರಿಯ ಪತ್ರಾಂಕಿತ ಉಪನೋಂದಣಾಧಿಕಾರಿಗಳು, ಮೈಸೂರು (ದಕ್ಷಿಣ), ಮೈಸೂರು ರವರ ಕಛೇರಿಯಲ್ಲಿ 4 ನೇ ಪುಸ್ತಕದ ಸಂಪುಟ ಸಂಖ್ಯೆ205, ಪುಟ ಸಂ.20–23 ದಸ್ತಾವೇಜು ಸಂಖ್ಯೆ. 196 ದಿನಾಂಕ:11–05–1994 ರಂದು ನೋಂದಾಯಿಸಿರುತ್ತಾರೆ. ಸದರಿ ಜಿ.ಪಿ.ಎ.ದಾರರು ಶ್ರೀ. ಎಂ.ಎ.ಎಸ್. ಹಿರೇಮಠ್ ಬಿನ್ ಲೇಟ್ ಅಪ್ಪಯ್ಯ, ಮನೆ ನಂ. 65, 6ನೇ ಕ್ರಾಸ್, 5ನೇ ಮುಖ್ಯ ರಸ್ತೆ, ದಟ್ಟಗಳ್ಳಿ "ಇ" & "ಎಫ್" ಬ್ಲಾಕ್ ಬಡಾವಣೆ, ಮೈಸೂರುರವರಿಗೆ ಹಿರಿಯ ಪತ್ರಾಂಕಿತ ಉಪ ನೋಂದಣಾಧಿಕಾರಿಗಳು, ಮೈಸೂರು (ದಕ್ಷಿಣ), ಮೈಸೂರು ರವರ ಕಛೇರಿಯಲ್ಲಿ ಶುದ್ಧಕ್ರಯಪತ್ರವನ್ನು 1 ನೇ ಪುಸ್ತಕದ ಸಂಪುಟ ಸಂಖ್ಯೆ 4491, ಪುಟ ಸಂ.128 ದಸ್ತಾವೇಜು ಸಂಖ್ಯೆ.4901 ದಿನಾಂಕ:28–01–1995 ರಂದು ನೋಂದಾಯಿಸಿರುತ್ತಾರೆ. ಸದರಿಯವರು ದಿನಾಂಕ:27–08–2001ರಂದು ಮರಣ ಹೊಂದಿರುವ ಬಗ್ಗೆ ಮರಣ ಪ್ರಮಾಣ ಪತ್ರ ಹಾಗೂ ಉಪ–ತಹಸೀಲ್ದಾರ್, ಕಸಬಾ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ರವರು ನೀಡಿರುವ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ RD5018882821551 ರಂತೆ 1. ಶ್ರೀಮತಿ. ಲಲಿತಾದೇವಿ (ಪತ್ನಿ) ಮತ್ತು 2, ಸುನೀತ ಸೋಮಪ್ಪರ ಹಿರೇಮಠ್ (ಮಗಳು) ರವರು ಮರಣ ಹೊಂದಿಯತ್ತಾರೆ. 3. ಶ್ರೀಮತಿ. ಸುಮಂಗಲ (ಮಗಳು) ಶ್ರೀಮತಿ ಉಮಾ ಮಠದ (ಮಗಳು) ಹಾಗೂ 4. ಶ್ರೀ. ಅಪ್ಪಯ್ಯ ಎಂ ಎಸ್ ಹಿರೇಮಠ್ (ಮಗ) ಇವರುಗಳು (ಪೌತಿ ರೀತ್ಯಾ ಜಂಟಿ ವರ್ಗಾವಣೆ ಮತ್ತು ಕ್ರಯಪತ್ರ ನೀಡುವಂತೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಕ್ರಯದಾರರಾದ ಶ್ರೀ. ಎಂ.ಎ.ಎಸ್. ಹಿರೇಮಠ ಮತ್ತು ಇವರ ಪತ್ನಿಯಾದ ಶ್ರೀಮತಿ, ಲಲಿತಾದೇವಿ ಹಾಗೂ ಮಗಳಾದ ಶ್ರೀಮತಿ, ಸುನೀತ ಸೋಮಪ್ಪರ ಹಿರೇಮಠ್ ರವರು ಮರಣ ಹೊಂದಿರುವುದರಿಂದ ಇವರ ಕುಟುಂಬಸ್ಥರಾದ 1. ಶ್ರೀಮತಿ. ಸುಮಂಗಲ (ಮಗಳು) 2, ಶ್ರೀಮತಿ, ಉಮಾ ಮಠದ (ಮಗಳು) ಹಾಗೂ 3. ಶ್ರೀ. ಅಪ್ಪಯ್ಯ ಎಂ ಎಸ್ ಹಿರೇಮಠ್ (ಮಗ) ಮನೆ ನಂ. 65, ದಟ್ಟಗಳ್ಳಿ "ಇ" & "ಎಫ್" ಬ್ಲಾಕ್, ರಾಮಕೃಷ್ಣನಗರ, ಮೈಸೂರು ರವರು ಪೌತಿ ರೀತ್ಯಾ ಜಂಟಿ ವರ್ಗಾವಣೆ ಮತ್ತು ಕ್ರಯಪತ್ರ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ನಿವೇಶನ ಪಾಪ್ಪ ಜಂಟಿ ವರ್ಗಾವಣೆ ಮತ್ತು ಕ್ರಯಪತ್ರ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು, ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/– **ವಿಶೇಷ ತಹಸೀಲ್ದಾರ್**, ವಲಯ ಕಚೇರಿ–2, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಸಇಂ–3:ಮಾಸಂಸೇ:ಮಟೆಂಪ್ರ:2023–24/1673
ದಿನಾಂಕ: 30/09/2023

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 10/2023–24

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರಿಂದ, 2023–24ನೇ ಸಾಲಿಗೆ ಅಥವಾ ಒಂದು ವರ್ಷದ ಅವಧಿಗೆ ವಿಭಾಗ & ಉಪ ವಿಭಾಗ ಕಛೇರಿಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ನೊಂದಾಯಿತ ಅರ್ಹ ಏಜನ್ಸಿದಾರರು/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಂತೆ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in, KPPP Portal ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ :09/10/2023 ಸಂಜೆ 4.00ಗಂಟೆವರೆಗೆ. ಟೆಂಡರಿಗೆ ಇಡಲಾದ ಮೊತ್ತ ರೂ. 33.88ಲಕ್ಷಗಳು, ಇ.ಎಂ.ಡಿ.ರೂ. 67760.00. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/228/2023–24

ಪುರಸಭಾ ಕಾರ್ಯಾಲಯ, ಬನ್ನೂರು
ಮೈಸೂರು ಮಳವಳ್ಳಿ ರಸ್ತೆ, ಬನ್ನೂರು–571101
ತಿ.ನರಸೀಪುರ ತಾ॥ ಮೈಸೂರು ಜಿಲ್ಲೆ
Website www.bannurtown.mrc.gov.in Email: itsatff_ulb_bannur@yahoo.com Ph: 08227-276058, 08227-276111
ಸಂ: ಪುಸಬ/ಡೇ–ನಲ್ಮ್ ಶಾಖೆ–ಸಿಆರ್–01/2023–24 ದಿ: 29.09.2023

SHG/NGO ಸದಸ್ಯರ ನೇಮಕಾತಿ ಪ್ರಕಟಣೆ 2ನೇ ಕರೆ

ಮೈಸೂರು ಜಿಲ್ಲೆಗೆ ಬನ್ನೂರು ಪುರಸಭೆಗೆ ಸ್ವಚ್ಛಭಾರತ್ ಮಿಷನ್ 2.0 ಅಡಿಯಲ್ಲಿ ಐ.ಇ.ಸಿ ಚಟುವಟಿಕೆಗಳನ್ನು ಕೂಗೊಳ್ಳಲು ಸ್ವ–ಸಹಾಯ ಸಂಘಗಳು ಮತ್ತು ಎನ್.ಜಿ.ಓ ಸದಸ್ಯರ ನೇಮಕಾತಿಗಾಗಿ ಆಸಕ್ತಿವುಳ್ಳ ಸದಸ್ಯರಿಗೆ ಆಹ್ವಾನ. 2 ವರ್ಷಗಳ ಅವಧಿಗೆ ಬನ್ನೂರು ಪುರಸಭೆ ಜೊತೆಗೆ ಪೂರ್ಣಾವಧಿಗೆ ಐ.ಇ.ಸಿ ಚಟುವಟಿಕೆ ಕೈಗೊಳ್ಳಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಲು NULM-Day/NRLM/NGO ಅಡಿಯಲ್ಲಿ ನೋಂದಾಯಿತ SHG/NGO ಸದಸ್ಯರಿಂದ ಮೈಸೂರು ಜಿಲ್ಲೆ ಬನ್ನೂರು ಪುರಸಭೆಗೆ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ. ಇದರ ToR, ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ವಿವರಗಳನ್ನು ಕೆಳಗೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ www.bannurtown.mrc.gov.in. NULM-Day/NRLM/NGO ಯೊಂದಿಗೆ ನೋಂದಾಯಿಸಿಕೊಂಡ ಆಸಕ್ತ SHG/NGO ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು NULM-Day/NRLM ಹಿಂಬರಹದೊಂದಿಗೆ ಮೇಲೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದಿ: 05.10.2023ರ ಸಂಜೆ 5.00 ಗಂಟೆಯ ಒಳಗಾಗಿ ಇ–ಮೇಲ್ ಐಡಿಗೆ email.ka.bannur.tmc@gmail. com ಗೆ ಕಳುಹಿಸಬಹುದು. ಆಸಕ್ತಿಯುಳ್ಳ SHG/NGO ಸದಸ್ಯರು ಲಗತ್ತಿಸ ಬೇಕಾದ ದಾಖಲೆಗಳು. 1) ಗುರುತಿನ ಪುರಾವೆ 2) ವಿಳಾಸ ಪುರಾವೆ. 3) ಅರ್ಹತಾ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿರುವುದಕ್ಕೆ (ಎಂಪಾನೆಲ್) ದಾಖಲೆಗಳು. 4) ಶೈಕ್ಷಣಿಕ ಅರ್ಹತೆ . 5) NULM-Day/NRLM ಹಿಂಬರಹದ ನಮೂನೆ 6) NGO ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸಂಸ್ಥೆಯ ನೊಂದಣಿ ಪತ್ರದ ಪ್ರತಿ ಆಯ್ಕೆಯಾದ ಅಭ್ಯರ್ಥಿಗಳನ್ನು ಈ ವಿಷಯದ ಕುರಿತು ತಿಳುವಳಿಕೆಯನ್ನು ನಿರ್ಣಯಿಸಲು ದಿ: 09.10.2023 ರಂದು ಸಂದರ್ಶನಕ್ಕೆ ಕರೆಯಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬನ್ನೂರು

DIPR/DDMYS/KSMCA/453/2023-24

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ
ಮೈಸೂರು ಜಿಲ್ಲೆ –571107
ಈ–ಮೇಲ್: itstaff_ulb_periyapatna@yahoo.com
Phone(O): 08223-273036
ಸಂ:ಪಿಪುಸ/ಪ.ಅ/ಟೆಂಡರ್–01/2023–24 ದಿನಾಂಕ: 29.09.2023

ಮರು ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಸರಗೂರು ಪಟ್ಟಣ ಪಂಚಾಯಿತಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ಚಾಲಕರು ಮತ್ತು ಇತರ ನೌಕರರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಅರ್ಹ ನೋಂದಾಯಿತ ಸರಬರಾಜುದಾರರಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. 1) ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿ: 7.10.2023 ಸಂಜೆ 5.30 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿ: 09.10.2023ರ ಸಂಜೆ 5.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	DMA/2023-24/SE0488/CALL-2	17.91	44775.00
2	DMA/2023-24/SE0487/CALL-2	22.89	45780.00

ಕಾಲಾವಧಿ: 12 ತಿಂಗಳು

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಪಿರಿಯಪಟ್ಟಣ
ಸಹಿ/– ಮುಖ್ಯಾಧಿಕಾರಿ ಪುರಸಭೆ, ಪಿರಿಯಪಟ್ಟಣ

DIPR/DDMYS/KSMCA/440/2023-24